
ಗೌರಿ ಲಂಕೇಶ್
ರಂಜನೆ ಬೋಧನೆ ಪ್ರಚೋದನೆ
ಫೆಬ್ರವರಿ 20, 2008 ರೂ. 12/-




ಅಷ್ಟಮಠಗಳ ಪ್ರವಚನಕಾರನ ಕಾಮಾಯಣ!

ಪಾಯ್ಸನ್ ರಾಮನ ಅಟ್ಟಹಾಸ



ಲೋಕಾಯುಕ್ತರನ್ನೇ ದಾರಿತಪ್ಪಿಸಿದ ಪೊಲೀಸರು



ನಿಮ್ಮ ಶಾಸಕರು ಕಡಿದಿದ್ದೇನು?

ಕಲಘಟಗಿ
ಅಫಜಲ್‌ಪುರ
ಮುಂಡರಗಿ



'ಸಂಸ್ಕೃತಿ' ಪೊಲೀಸರಿದ್ದಾರೆ ಎಚ್ಚರಿಕೆ!



ನಮಾಜು ಮಾಡುವುದೂ ಭಯೋತ್ಪಾದನೆಯಾದಾಗ!!

ಚಾರ್ವಾಕ

- ಶಿವಸುಂದರ್-

ಮೊನ್ನೆ ಮಾಧ್ಯಮಗಳ ನ್ಯಾಯಾಲಯದಲ್ಲಿ ಉಗ್ರಗಾಮಿಗಳು ಎಂದು ತೀರ್ಮಾನಿಸಲ್ಪಟ್ಟಿರುವ ಅಸಾದುಲ್ಲಾ ಮತ್ತು ಗೌಸ್‌ರನ್ನು ಬೆಂಗಳೂರಿಗೆ ಮಂಪರು ಪರೀಕ್ಷೆಗೆಂದು ಕರೆದುಕೊಂಡು ಬರಲಾಗಿತ್ತು. ಅಸಾದುಲ್ಲಾ ಮಂಪರು ಪರೀಕ್ಷೆಯುದ್ದಕ್ಕೂ ನಿದ್ದೆ ಮಾಡಿದರೆ ಗೌಸ್‌ರಿಂದ ಏನು ಮಾಹಿತಿ ಪಡೆಯಲಾಯಿತು ಎಂಬ ಬಗ್ಗೆ ಪೊಲೀಸ್ ಇಲಾಖೆ ಮೌನ ವಹಿಸಿದೆ. ಆದರೆ ಪೊಲೀಸರಿಗೆ ಮಂಪರು ಪರೀಕ್ಷೆಯಲ್ಲೂ ಏನೂ ಹೇಳದ ಅಸಾದುಲ್ಲಾ ಮತ್ತು ಗೌಸರು ಮಾಧ್ಯಮಗಳಿಗೆ ಮಾತ್ರ ತಾವು ಭಯಂಕರ ಉಗ್ರಗಾಮಿಗಳೆಂದು ಹೇಳಿಬಿಟ್ಟಿರುವಂತಿದೆ! ಮಾಧ್ಯಮಗಳ ಪ್ರಕಾರ ಈ ಮುಸ್ಲಿಂ ಯುವಕರಿಗೆ ಪಾಕಿಸ್ತಾನದಿಂದ ಹಿಡಿದು ಒಸಾಮ ಬಿನ್ ಲಾಡೆನ್‌ವರೆಗೆ ಎಲ್ಲರ ಸಂಬಂಧವಿದೆ. ಅಲ್ಲದೆ ಅವರ ಟಾರ್ಗೆಟ್ ಪಟ್ಟಿಯಲ್ಲಿ ಉಡುಪಿ ಮಠದಿಂದ ಹಿಡಿದು ಅಮೆರಿಕದ ವೈಟ್‌ಹೌಸ್‌ವರೆಗೂ ಎಲ್ಲವೂ ಇದೆ. ಅವರ ಬಳಿ ಇವನ್ನೆಲ್ಲಾ ಸ್ಫೋಟ ಮಾಡಲು ಇದ್ದದ್ದು ಪ್ಲಾಸ್ಟಿಕ್ ಕವರ್‌ನಲ್ಲಿ ಮುಚ್ಚಿಡಲಾಗಿದ್ದ ಜಿಲೆಟಿನ್ ಎಂದು ಪೊಲೀಸರು ಅನುಮಾನ ಪಡುತ್ತಿರುವ ಎರಡು ಕಡ್ಡಿಗಳು ಮಾತ್ರ!

ಮಂಪರು ಪರೀಕ್ಷೆಯಲ್ಲಿ ನಿದ್ದೆ ಮಾಡಿದ್ದು, ಅಸಾದುಲ್ಲಾ ಗಡ್ಡ ಬಿಟ್ಟಿದ್ದು, ಗೌಸ್ ದಿನಕ್ಕೆ ಐದು ಬಾರಿ ನಮಾಜು ಮಾಡುವುದು, ಅವರಿಬ್ಬರು ಪರಸ್ಪರ ಮೆಲುದನಿಯಲ್ಲಿ ಮಾತನಾಡಿಕೊಳ್ಳುವುದು, ತಮ್ಮನ್ನು ಪೊಲೀಸರು ಬಂಧಿಸಿದಾಗ ತಮಗೆ ಚಿತ್ರಹಿಂಸೆ ಮಾಡಿದ್ದರ ಬಗ್ಗೆ ನ್ಯಾಯಾಧೀಶರಿಗೆ ದೂರು ಹೇಳಿದ್ದು, ಇವೆಲ್ಲವೂ ಈ ದೇಶದಲ್ಲಿ ಶಿಕ್ಷಾರ್ಹ ಅಪರಾಧಗಳು ಮತ್ತು ದೇಶದ್ರೋಹವೂ ಆಗಿದ್ದು ಎಂದಿನಿಂದ? ಏಕೆಂದರೆ ಮಾಧ್ಯಮಗಳು ತಾವೂ ಸೃಷ್ಟಿಸುತ್ತಿರುವ ಕಥೆಗಳಿಗೆ ಪುರಾವೆಯೆಂದು ಒದಗಿಸುತ್ತಿರುವುದು ಇವುಗಳನ್ನು ಮಾತ್ರವೇ! ಇವನ್ನು ಬಿಟ್ಟಂತೆ ಮಿಕ್ಕಿದೆಲ್ಲವೂ ಪ್ರತಿನಿತ್ಯ ಈ ಪ್ರಕರಣದ ಬಗ್ಗೆ ಒಬ್ಬರನ್ನೊಬ್ಬರು ಮೀರಿಸುವಂತಹ ಸ್ಟೋರಿಯನ್ನು ಫೈಲ್ ಮಾಡಲೇಬೇಕಾದ ಕಡ್ಡಾಯಕ್ಕೊಳಗಾಗಿರುವ, ಗುಪ್ತವಾಗಿ ಖಾಕಿ ಚಡ್ಡಿ ತೊಟ್ಟು ಮೇಲೆ ಬಿಳಿ ಶರಟನ್ನು ಇಳಿಬಿಟ್ಟಿರುವ, ಸುಶಿಕ್ಷಿತ ಪತ್ರಕರ್ತರು ಸೃಷ್ಟಿಸುತ್ತಿರುವ 'ಸ್ಟೋರಿ'ಗಳೇ ವಿನಃ ಸತ್ಯದ ವರದಿಗಳಲ್ಲ. ಮಾಧ್ಯಮಗಳ ಈ ಭಯೋತ್ಪಾದನೆಯನ್ನು ಕಂಡು ಟ್ರಿಗ್ಗರ್ ಹ್ಯಾಪಿ ಖಾಕಿಧಾರಿ ಶಂಕರ್ ಬಿದರಿಯಂತಹವರೇ ಕಂಗಾಲಾಗಿಬಿಟ್ಟಿದ್ದಾರೆ ಮತ್ತು ಅಪರೂಪವೆಂಬಂತೆ ಮಾಧ್ಯಮಗಳ ಮೇಲೆ ಸಕಾರಣವಾಗಿ ಹರಿಹಾಯ್ದಿದ್ದಾರೆ. ತಾವು ಬಂಧಿಸಿದ ಮುಸ್ಲಿಂ ಯುವಕರ ಬಳಿ ಯಾವುದೇ ಶಸ್ತ್ರಾಸ್ತ್ರಗಳಿರಲಿಲ್ಲವೆಂದೂ, ಅವರು ಭಯೋತ್ಪಾದಕರೆಂಬ ನಿರ್ಧಾರಕ್ಕೆ ಪೊಲೀಸರು ಇನ್ನೂ ತಲುಪಿಲ್ಲವೆಂದೂ ಸ್ಪಷ್ಟ ನುಡಿಗಳಲ್ಲಿ ತಿಳಿಸಿದ್ದಾರೆ. ಇದಕ್ಕೆ ಅವರ ನೆಚ್ಚಿನ ಸಿದ್ಧಾಂತದ ಬಿಜೆಪಿ ಮುಖ್ಯಮಂತ್ರಿ ಅಧಿಕಾರದಲ್ಲಿಲ್ಲದಿರುವುದು ಮತ್ತು ರಾಜ್ಯಪಾಲರ ಆಡಳಿತವಿರುವುದು ಒಂದು ಕಾರಣವಿರಬಹುದು. ಅದೇನೇ ಇರಲಿ ಪೊಲೀಸರ ಈ ಹೇಳಿಕೆಗಳು ರಿಯಾಜುದ್ದೀನ್, ಅಬೂಬಕರ್, ಆಸೀಫ್ ಮತ್ತು ಇತರರ ಬಗ್ಗೆ ಮಾಧ್ಯಮಗಳು ಸೃಷ್ಟಿಸುತ್ತಿರುವ ಕಥೆಗಳಿಗೆ ಆ ಪತ್ರಕರ್ತರಿಗೆ ಮುಸ್ಲಿಮರಿಗೆ ಬಗ್ಗೆ ಇರುವ ಪೂರ್ವಗ್ರಹಗಳನ್ನು ಹೊರತುಪಡಿಸಿದರೆ ಬೇರಿನ್ನಾವ ಆಧಾರಗಳು ಇಲ್ಲವೆಂಬುದನ್ನು ಸಾಬೀತುಪಡಿಸುತ್ತಿವೆ.

ಈ ದೇಶದಲ್ಲಿ ಪ್ರತಿಯೊಬ್ಬ ಮುಸ್ಲಿಮನನ್ನು ಅನುಮಾನದಿಂದಲೇ ನೋಡುವಂತಹ ಸಾಮಾಜಿಕ ಮನಸ್ಥಿತಿಯನ್ನು ಸೃಷ್ಟಿಸಿರುವ ಹಿಂದೂ ಕೋಮುವಾದಿ ಭಯೋತ್ಪಾದಕರಿಗೆ ಮಾಧ್ಯಮದಲ್ಲಿರುವ ಅವರ ಘೋಷಿತ ಮತ್ತು ಅಘೋಷಿತ ಮಿತ್ರರೂ ಜೊತೆಯಾಗಿ ಈ ನಾಡಿನ ಮುಸ್ಲಿಮ್ ಅಲ್ಪಸಂಖ್ಯಾತರ ದೈನಂದಿನ ಜೀವನವನ್ನು, ಶಾಂತಿ, ನೆಮ್ಮದಿ ಮತ್ತು ಸಹಜೀವನದ ವಿಶ್ವಾಸಗಳನ್ನು ವಿಧ್ವಂಸಗೊಳಿಸುತ್ತಿದ್ದಾರೆ.

ಆಧಾರರಹಿತ ಅನುಮಾನಗಳನ್ನು ಮತ್ತು ಪೂರ್ವಗ್ರಹಗಳನ್ನೇ ಸಾಕ್ಷ್ಯಾಧಾರವೆಂದು ಸಮರ್ಥಿಸಿಕೊಳ್ಳುವ ಈ ಜನಾಂಗೀಯ ದ್ವೇಷಿಗಳಿಗೆ ಸಾಕ್ಷ್ಯಾಧಾರ ಸಮೇತ ಹಿಂದೂತ್ವವಾದಿಗಳು ನಡೆಸಿದ ನರಮೇಧ ರುಜುವಾತಾದರೂ ಅವರನ್ನು ಉಳಿಸಲೆಂದೇ ತಮ್ಮ ಬ್ರಾಹ್ಮಣಿಯ ತರ್ಕಗಳನ್ನು ಹರಿಬಿಡುತ್ತಾರೆ. ಹೀಗಾಗಿ ಮುಸ್ಲಿಮರ ಸಂದರ್ಭದಲ್ಲಿ ಮಾತ್ರ ಬೇಕಾಬಿಟ್ಟಿ ಬಳಸಲಾಗುವ ಈ ಭಯೋತ್ಪಾದನೆ ಎಂಬ ಪದಕ್ಕೆ ಅರ್ಥವಾದರೂ ಏನೆಂಬುದನ್ನು ವಿಶ್ಲೇಷಣೆಗೆ ಒಳಪಡಿಸಲೇಬೇಕಿದೆ.

ಭಯೋತ್ಪಾದನೆ ಎಂಬ ಪದ ಮತ್ತು ಅದಕ್ಕೆ ಸಾಮಾನ್ಯವಾಗಿ ಕೊಡಲಾಗಿರುವ ಅರ್ಥ ಇವೆಲ್ಲವೂ ಸಾಮಾನ್ಯ ಜನರ ನಿತ್ಯ ಜೀವನದಿಂದ ಹುಟ್ಟಿರುವುದಲ್ಲ, ಆ ಶಬ್ದ ದೊಡ್ಡ ಉದ್ಯಮಿಗಳ ಭಾರತ, ಅಮೆರಿಕ, ಇಸ್ರೇಲ್‌ನಂತ ಸಂದರ್ಭದಲ್ಲಿ ಮುಸ್ಲಿಂ ವಿರೋಧಿ ಬಹುಸಂಖ್ಯಾತ ಕೋಮುವಾದಿಗಳ ಹಿಡಿತದಲ್ಲಿರುವ, ಮಾಧ್ಯಮಗಳು ಸೃಷ್ಟಿಸಿದ್ದರೆ, ಅದಕ್ಕೆ ಇಂದು ಬಳಕೆಯಲ್ಲಿರುವ ಅರ್ಥವನ್ನು ಕೊಟ್ಟಿರುವುದು ಅತ್ಯಂತ ಜನವಿರೋಧಿಯಾಗಿರುವ ಪ್ರಭುತ್ವಗಳು. ಅದನ್ನು ವಿಶ್ವ ಮಟ್ಟದಲ್ಲಿ ಸರ್ವಮಾನ್ಯಗೊಳಿಸಿರುವುದು ಅಮೆರಿಕ ಸಾಮ್ರಾಜ್ಯಶಾಹಿಗಳ ಕೈಗೊಂಬೆಯಾಗಿರುವ ವಿಶ್ವಬ್ಯಾಂಕ್, ವಿಶ್ವ ಸಂಸ್ಥೆ ಇನ್ನಿತ್ಯಾದಿಗಳು. ಅದರಲ್ಲೂ 2001ರ ಸೆಪ್ಟೆಂಬರ್ 11ರಂದು ಅಮೆರಿಕದ WTC ಯ ಮೇಲೆ ದಾಳಿ ನಡೆದ ನಂತರ ಭಯೋತ್ಪಾದನೆ ಎಂದರೇನು ಮತ್ತು ಭಯೋತ್ಪಾದಕರೆಂದರೆ ಯಾರು ಎಂಬ ಪದಕ್ಕೆ ಅಮೆರಿಕ ಕೊಟ್ಟದ್ದೇ ಅರ್ಥವಾಗಿದೆ. ತಾನು ಕೊಟ್ಟ ಅರ್ಥವನ್ನು ಒಪ್ಪದವರೆಲ್ಲರನ್ನೂ ಅಮೆರಿಕ ಭಯೋತ್ಪಾದಕರೆಂದೇ ಕರೆಯುತ್ತದೆ! ಹೀಗಾಗಿ ಭಯೋತ್ಪಾದನೆ ಎಂದರೇನು ಎಂದು ಅರ್ಥಮಾಡಿಕೊಳ್ಳುವ(learn) ಮುನ್ನ ಈಗಾಗಲೇ ಅದಕ್ಕೆ ನೀಡಲಾಗಿರುವ ಅರ್ಥ ವ್ಯಾಖ್ಯಾನದಿಂದ ಹೊರಬರಬೇಕಿದೆ. ಅಮೆರಿಕದ ರಾಜಕೀಯ ಯಜಮಾನಿಕೆ ಬಿತ್ತುತ್ತಿರುವ ಪಾರಿಭಾಷಾತ್ಮಕ ಯಜಮಾನಿಕೆಯಿಂದಲೂ ಒಂದು unlearn ಪ್ರಕ್ರಿಯೆಗೆ ಒಳಪಡಬೇಕಿದೆ.

ಬೇರೊಬ್ಬರಲ್ಲಿ ಭಯವನ್ನು ಉತ್ಪಾದಿಸುವುದು ಭಯೋತ್ಪಾದನೆ ಎಂಬ ಸಾಮಾನ್ಯ ಅರ್ಥದಿಂದಲೇ ಭಯೋತ್ಪಾದನೆಯ ಅರ್ಥವೂ ಹುಟ್ಟಿಕೊಳ್ಳಬೇಕಲ್ಲವೇ? ಆದರೆ ಪ್ರಸ್ತುತ ಜಗತ್ತಿನ ರಾಜಕೀಯ ಆರ್ಥಿಕ ವ್ಯವಸ್ಥೆ ಒಂದು ಜನಾಂಗದ ಮೇಲೆ ಮತ್ತೊಂದು ಜನಾಂಗದ ದಬ್ಬಾಳಿಕೆಯನ್ನೂ, ಒಂದು ದೇಶದ (ಬಡ) ಮೇಲೆ ಮತ್ತೊಂದು(ಸಾಮ್ರಾಜ್ಯಶಾಹಿ ದೇಶಗಳು) ದೇಶದ ಆಕ್ರಮಣವನ್ನೂ, ಒಂದು ವರ್ಗ (ಶ್ರೀಮಂತ) ಮತ್ತೊಂದು (ಬಡ) ವರ್ಗದ ಮೇಲೆ ನಡೆಸುವ ಶೋಷಣೆಯನ್ನೂ ಮತ್ತು ಭಾರತದಂತ ಸಂದರ್ಭದಲ್ಲಿ ಒಂದು ಜಾತಿ (ಮೇಲ್ಜಾತಿ) ಮತ್ತೊಂದು ಜಾತಿಯ ಮೇಲೆ ನಡೆಸುವ ವ್ಯವಸ್ಥಿತ ದಬ್ಬಾಳಿಕೆ, ದೌರ್ಜನ್ಯಗಳನ್ನೂ ಮತ್ತು ಅದು ತುಳಿತಕ್ಕೊಳಗಾದವರಲ್ಲಿ ಸೃಷ್ಟಿಸುವ ಆತಂಕ ಮತ್ತು ಭೀತಿಯನ್ನು ಒಂದು ವ್ಯವಸ್ಥಿತ ಭಯೋತ್ಪಾದನೆಯೆಂದು ಕರೆಯುವುದೇ ಇಲ್ಲ. ಬದಲಿಗೆ ಇಂತಹ ಅಸಹನೀಯ ದಬ್ಬಾಳಿಕೆ ಮತ್ತು ದೌರ್ಜನ್ಯಗಳ ವಿರುದ್ಧ ಹತಾಶ ಆದರೆ ಹಿಂಸಾತ್ಮಕ ಪ್ರತಿರೋಧಗಳಿಗಿಳಿದ ಗುಂಪುಗಳನ್ನೇ ಭಯೋತ್ಪದಕರೆಂದೂ, ಅವರು ನಡೆಸುವ ಹಿಂಸಾತ್ಮಕ ಕಾರ್ಯಾಚರಣೆಗಳನ್ನೇ ಭಯೋತ್ಪಾದನೆಯೆಂತಲೂ ಪ್ರಭುತ್ವಗಳು ಮತ್ತು ಮಾಧ್ಯಮಗಳು ಬಣ್ಣಿಸುತ್ತವೆ.

ಹೀಗಾಗಿ ಭಯೋತ್ಪಾದನೆಯೆಂಬ ಎಂಬ ಪದದ ಬಳಕೆ ಮತ್ತು ಅರ್ಥ ಜಾಗತಿಕ ರಾಜಕೀಯ ಆರ್ಥಿಕ ವ್ಯವಸ್ಥೆಯಂತೆ ಏಕಪಕ್ಷೀಯವಾಗಿದೆ. ಭಾಷಾ ವಿಜ್ಞಾನದ ಪ್ರಕಾರವೂ ಸಹ ಯಾವುದೇ ಪದದ ಸಮಗ್ರ ಅರ್ಥವನ್ನು ಅದು ಹುಟ್ಟಿದ ಸಂದರ್ಭವನ್ನು ಬಿಟ್ಟು ಗ್ರಹಿಸಲು ಸಾಧ್ಯವಿಲ್ಲ. ಹೀಗಾಗಿ ಭಯೋತ್ಪಾದನೆ ಎಂಬ ಪದವೂ ಸಹ ವಿಶ್ವದ ಎಲ್ಲಾ ಬಗೆಯ ಶೋಷಕ ವ್ಯವಸ್ಥೆಗಳು ಹತಾಶ ಜನರಿಂದ ಹಿಂಸಾತ್ಮಕ ಪ್ರತಿರೋಧವನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಹುಟ್ಟಿಕೊಂಡಿದೆ. ಹಾಗೆಯೇ ಯಾವುದೇ ಪದ ಮತ್ತು ಅರ್ಥಗಳ ಸೃಷ್ಟಿಯ ಹಿಂದೆ ಅದರ ಸೃಷ್ಟಿಕರ್ತರ ಅಘೋಷಿತ ಉದ್ದೇಶವಿರುವಂತೆ ಭಯೋತ್ಪಾದನೆ ಎಂಬ ಪದದ ಸೃಷ್ಟಿ ಮತ್ತು ಪ್ರಚಾರದ ಹಿಂದೆ ಅಮೆರಿಕ ಸಾಮ್ರಾಜ್ಯಶಾಹಿಯ ನೇತೃತ್ವದಲ್ಲಿ ಒಂದಾಗಿರುವ ಜಗತ್ತಿನ ಎಲ್ಲಾ ದೇಶಗಳ ಶೋಷಕರ ಹಿತಾಸಕ್ತಿ ಇದ್ದೇ ಇದೆ. ಅದೇನೆಂದರೆ ತಮ್ಮ ಬರ್ಬರ ಶೋಷಣೆ ಮತ್ತು ಭಯೋತ್ಪಾದನೆಯನ್ನು ಕಾನೂನು ಸುವ್ಯವಸ್ಥೆಯ ರಕ್ಷಣೆ ಎಂಬ ಹೆಸರಲ್ಲಿ ಮಾನ್ಯಗೊಳಿಸಿಕೊಂಡು ಜನಪ್ರತಿರೋಧವನ್ನು ಟೆರರಿಸಂ ಹೆಸರಲ್ಲಿ ಅಮಾನ್ಯಗೊಳಿಸುವುದು ಮತ್ತು ಅದನ್ನು ಪ್ರಭುತ್ವ ಭಯೋತ್ಪಾದನೆಯಿಂದ ಹತ್ತಿಕ್ಕಲು ಭೂಮಿಕೆಯನ್ನು ಸಿದ್ಧಮಾಡಿಕೊಳ್ಳುವುದು. ಪ್ರಪಂಚದ ಸಮಕಾಲೀನ ರಾಜಕಾರಣವೆಲ್ಲಾ ಭಯೋತ್ಪಾದನೆ ಎಂಬ ಪ್ರಭುತ್ವ ರಾಜಕಾರಣದ ಸೋಗಲಾಡಿತನಕ್ಕೆ ಸಾಕ್ಷಿಗಳನ್ನೇ ನೀಡುತ್ತವೆ.

ಕುವೈತ್‌ಅನ್ನು ಕೇವಲ ಒಂದು ತಿಂಗಳ ಕಾಲ ಆಕ್ರಮಣ ಮಾಡಿದ ಇರಾಕ್ ಭಯೋತ್ಪಾದಕ ರಾಷ್ಟ್ರವಾಯಿತು. ಆದರೆ ಇರಾಕ್ ಅನ್ನು ಹತ್ತು ವರ್ಷಗಳಿಂದ ಭೀಭತ್ಸ ಭಯೋತ್ಪಾದನೆಯಿಂದ ತನ್ನಡಿ ಇಟ್ಟುಕೊಂಡಿರುವ ಅಮೆರಿಕ ಭಯೋತ್ಪಾದಕ ರಾಷ್ಟ್ರವೆನ್ನಿಸಿಕೊಳ್ಳುವುದಿಲ್ಲ. ಕುರ್ದ್ ಜನಾಂಗದ 600 ಅಮಾಯಕರನ್ನು ಕೊಂದ ಸದ್ದಾಂ ಹುಸೇನ್ ಭಯೋತ್ಪಾದಕನಾಗುತ್ತಾನೆ. ಆದರೆ ಕಳೆದ ಹತ್ತು ವರ್ಷಗಳಲ್ಲಿ 10 ಲಕ್ಷಕ್ಕೂ ಹೆಚ್ಚು ಹಸು ಕಂದಮ್ಮಗಳನ್ನೂ ಮತ್ತು ಹತ್ತಾರು ಸಾವಿರ ಅಮಾಯಕ ಇರಾಕೀಯರನ್ನು ತನ್ನ ಭಯೋತ್ಪಾದನೆಯಿಂದ ಕೊಂದ ಬುಷ್ ಆಡಳಿತ ಭಯೋತ್ಪಾದಕನೆನಿಸಿಕೊಳ್ಳುವುದಿಲ್ಲ. ಅಸಹಾಯಕ ಜನರನ್ನು ತಮ್ಮ ಅಧಿಕಾರ ಶಕ್ತಿಯಿಂದ ಬೆದರಿಸುವುದು ಮತ್ತು ಕೊಲ್ಲುವುದೇ ಭಯೋತ್ಪಾದನೆ ಎಂದಾದರೆ ಕಂಬಾಲಪಲ್ಲಿಯಲ್ಲಿ ಮೇಲ್ಜಾತಿ ದುರಭಿಮಾನಿಗಳು ತಮ್ಮ ಮಾತನ್ನು ಕೇಳದ ಅಮಾಯಕ ದಲಿತರನ್ನು ಸುಟ್ಟುಕೊಂದದ್ದು, ಗುಜರಾತಿನಲ್ಲಿ ಸಹಸ್ರಾರು ಮುಸ್ಲಿಮರನ್ನು ಮೋದಿಯ ಭಂಟರು ಮತ್ತು ಪೊಲೀಸರು ಅಮಾನುಷವಾಗಿ ನರಹತ್ಯೆ ಮಾಡಿದ್ದು, ಇಲ್ಲಿ ಭಯೋತ್ಪಾದನೆ ಎಂದೇಕೆ ಎನಿಸಿಕೊಳ್ಳುವುದಿಲ್ಲ?

ವಾಸ್ತವವಾಗಿ ಭಯೋತ್ಪಾದನೆ ಎಂಬ ಪದದ

(18ನೇ ಪುಟಕ್ಕೆ)

ಈಗ ಮರ್ಜರ್ ಆಗುತ್ತೆ ಮದುವೆ ಅಲ್ಲ!

"ಅಕ್ಬರ್ ರಾಜ ಜೋಧಾಬಾಯಿಯನ್ನು ಮದುವೆಯಾದದ್ದು ಏಕಿಷ್ಟು ಸುದ್ದಿಯಾಗಬೇಕು? ರಾಜಕೀಯ ಸ್ಥಿರತೆಗೆ ರಜಪೂತರು ಮುಘಲ್ ದೊರೆಗಳಿಗೆ ತಮ್ಮ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಡುತ್ತಿದ್ದದ್ದು ಆಗ ಸರ್ವೇಸಾಮಾನ್ಯವಾದ ವಿಷಯವಾಗಿತ್ತು."

-ಪ್ರೊ. ದಿಲ್‌ಬಾಗ್ ಸಿಂಗ್, ಇತಿಹಾಸಕಾರ

ಹೆಣ್ಣಿನ ಹಿಂದೆ ಹಿಂದೂ ಘನತೆ

"ಇದುವರೆಗೆ ಬಂದಿರುವ ಹಿಂದೂ-ಮುಸ್ಲಿಂ ಪ್ರೇಮ ಕಥೆಗಳುಳ್ಳ ಚಲನಚಿತ್ರಗಳಲ್ಲಿ, ನನಗೆ ಗೊತ್ತಿರುವಂತೆ, ಯಾವೊಂದರಲ್ಲೂ ಹೆಣ್ಣು ಹಿಂದೂ ಆಗಿಲ್ಲ."


-ಮುಕುಲ್ ಕೇಸವನ್, ಚಿತ್ರ ವಿಮರ್ಶಕ

....ಮತ್ತು ಶಿವಸೇನೆಯೇ ಒಂದು ಬರ್ಡ್‌ಫ್ಲೂ!

"ರಾಜ್ ಠಾಕ್ರೆಯ ಮಹಾರಾಷ್ಟ್ರ ನವನಿರ್ಮಾಣ ಸೇನೆ ಬರ್ಡ್‌ಫ್ಲೂ ಬಾಧಿತ ಕೋಳಿಫಾರಂ ಇದ್ದಹಾಗೆ. ಅದಕ್ಕೆ ಯಾವುದೇ ಮಾರುಕಟ್ಟೆ ಮೌಲ್ಯವಿಲ್ಲ."

-ಶಿವಸೇನಾ ಪತ್ರಿಕೆಯ ಮುಖವಾಣಿ 'ಸಾಮ್ನಾ' ಪತ್ರಿಕೆಯ ಸಂಪಾದಕೀಯ

ಔದಾರ್ಯದ ಕ್ರೌರ್ಯ



"ನಾವು ನಿಮಗೆ ಆಗುವ ಖರ್ಚನ್ನೆಲ್ಲಾ ಭರಿಸುತ್ತೇವೆ. ನೀವು ಇಲ್ಲಿಂದ ಸದ್ಯಕ್ಕೆ ಜಾಗ ಖಾಲಿ ಮಾಡಿ ಯೂರೋಪಿನಲ್ಲಿ ನಿಮ್ಮ ಇಷ್ಟ ಬಂದ ದೇಶಕ್ಕೆ ಹೋಗಿಬಿಡಿ. ಇಲ್ಲಿ ಗದ್ದಲ ಕಡಿಮೆಯಾದ ಮೇಲೆ ನಾವೇ ನಿಮ್ಮನ್ನು ಕರೆಸಿಕೊಳ್ಳುತ್ತೇವೆ."

-ಪ್ರಣಬ್ ಮುಖರ್ಜಿ, ತಸ್ಲಿಮಾ ನಸ್ರೀನ್‌ಗೆ ನೀಡಿರುವ ಆದೇಶ

ನೋ ಕಾಮೆಂಟ್ಸ್



"ಬೆಂಗಳೂರಿನಲ್ಲಿ ನಡೆಯಲಿರುವ ಟೆನ್ನಿಸ್ ಟೂರ್ನಮೆಂಟು ವ್ಯಕ್ತಿಗಳ ನಡುವಿನದ್ದು. ದೇಶಕ್ಕಾಗಿ ಆಡುವ ಫೆಡರಲ್ ಕಪ್ ಅಥವಾ ಒಲಂಪಿಕ್ಸ್ ತರಹದ್ದಲ್ಲ, ನಾನು ದೇಶಕ್ಕಾಗಿ ಆಡಲು ಯಾವಾಗಲೂ ಸಿದ್ಧ, ಮಿಕ್ಕಿದ್ದು ನನ್ನ ಇಷ್ಟ."

-ಸಾನಿಯಾ ಮಿ

"ಕ್ಲಿಂಟನ್ ನನ್ನ ಹಳ್ಳಿಗೆ ಭೇಟಿ ಕೊಟ್ಟು ಹೋ ಮರುದಿನವೇ ನಮ್ಮ ಪಂಚಾಯತಿಗೆ ಕೊ ಇಂಟರ್‌ನೆಟ್ ಕನೆಕ್ಷನ್ ಕೂಡಾ ಹಿಂತೆಗೆದುಕೆ ಲಾಯಿತು."

-ಮಹಾವ

ರಾಜಸ್ತಾನದ ನೈಲಾ ಪಂಚಾಯತಿ ಅಧ




"ಹರಭಜನ್ ಸಿಂಗ್ ಲೂಧಿಯಾನದ ಸಿಂಹ ಆಗಿರಬಹುದು. ಆದ ಆತನನ್ನು ಮದರ್ ತರೇಸ, ಬ್ರಾಡ್‌ಮನ್ ಸೋಬರ್ಸ್ ಮತ್ತು ಮಹಾತ್ಮ ಗಾಂಧಿಗಳ ಮಿಶ್ರಣ ಎಂದು ಬಣ್ಣಿಸುವುದು ಸರಿಯಲ್ಲ. ಆತ ವಿಲನ್‌ಗಿಂತ ಜಾಸ್ತಿ ವಿಕ್ಟಿಮ್ ಆಗಿರಬಹುದು. ಆದರೆ ಆತ ಕೇವಲ ವಿಕ್ಟಿಮ್ ಅಂತೂ ಖಂಡಿತಾ ಅಲ್ಲ."

-ವಿನೋದ್ ಮೆಹ್ತಾ, ಔಟ್‌ಲು ಸಂಪಾ

"ಫ್ಲೈ ಓವರ್‌ಗಳೆಂದರೆ ಟ್ರಾಫಿಕ್ ಜಾಮ್‌ಗ ಒಂದು ಜಾಗದಿಂದ ಮತ್ತೊಂದು ಜಾ ಸ್ಥಳಾಂತರಿಸುವ ಸಾಧನಗಳು, ಅಷ್ಟೆ."


-ದಿನೇಶ್ ಮೋಹನ್, ಸಮಾಜ ವಿಜ್ಞಾ



"ನಂದಿಗ್ರಾಮದಲ್ಲಿ ಸಂಭವಿಸಿದ ಸಾವುನೋವುಗಳಿಗೆ ಅಲ್ಲಿನ ಎಡರಂಗ ಸರ್ಕಾರವೇ ಕಾರಣವೆಂದು ನಮ್ಮ ಸತ್ಯಶೋಧನೆಯ ತನಿಖೆಯಿಂದ ತಿಳಿದುಬಂದಿದೆ."


-ನ್ಯಾ. ರಾಜೇಂದ್ರ ಬಾಬು, ರಾಷ್ಟ್ರ ಮಾನವ ಹಕ್ಕು ಆಯೋಗದ ಅ

ನಂಬಿದ್ರೆನಂಬಿ ಬಿಟ್ರೆಬಿಡಿ



"ಈ ವಿಭಜಕ ರಾಜಕೀಯದಿಂದಾಗಿಯೇ ಕಳೆದ 40 ವರ್ಷಗಳಲ್ಲಿ ಶಿವಸೇನಾ ತನ್ನಂತೆ ತಾನೇ ಅಧಿಕಾರ ಪಡೆಯಲು ಸಾಧ್ಯವಾಗುತ್ತಿಲ್ಲ."

-ಸಂಜಯ್ ನಿರುಪಮ್, ಶಿವಸೇನಾ ಕಾಂಗ್ರೆಸ್‌ಗೆ ವಲಸೆ ಬಂದ ರಾಜಕಾ



"ಭಾರತವು ಪ್ರಪಂಚದಲ್ಲೇ ಅತಿ ಹೆಚ್ಚು ಇಂಗ್ಲಿಷ್ ಮಾತಾಡುವ ದೇಶ ಮುಂದಿನ ಹತ್ತು ವರ್ಷಗಳಲ್ಲಿ ಪ್ರೇಮ ಕಥೆಗಳ ನಮ್ಮ ಇಂಗ್ಲಿಷ್ ಕಾದಂಬರಿ "Mills and Boon" ಗೆ ಭಾರತವು ಪ್ರಪಂಚದಲ್ಲೇ ಅತಿ ದೊಡ್ಡ ಮಾರುಕಟ್ಟೆಯಾಗಲಿದೆ."

-ಡೋನಾ ಹ
"Mills and Boon" ಪ್ರ

"ರಾಮಸೇತು ವಿಷಯದಲ್ಲಿ ನಾವು ಅಫಿಡ ವಾಪಸ್ ಪಡೆದುಕೊಳ್ಳಲು ಕಾರಣ ಅದರಲ್ಲಿ ತಪ್ಪುಗಳಿದ್ದವು ಎಂಬುದಷ್ಟೆ."

-ಅಂಬಿಕಾ ಸ

"ಇಂಗ್ಲೆಂಡಿನಲ್ಲಿ ಐತಿಹಾಸಿಕ ವ್ಯಕ್ತಿಗಳ ಸರ್ವಸಮ್ಮತಿ ಇರುತ್ತದೆ. ಆದರೆ ಭಾರ ಯಾವುದರ ಬಗ್ಗೆಯೂ ಸಮ್ಮತಿ ಇರುವುದಿ

-ಫರೂಖಿ, ಇತಿಹಾಸ

ಬಾಬಾ ಆಮ್ಟೆ ಎಂಬ ನೈತಿಕ ಶಕ್ತಿ

ಬಿಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ನಾನು ಪಿಯುಸಿ ಓದುತ್ತಿದ್ದಾಗ ಒಂದು ದಿನ ನಮ್ಮ ಕಾಲೇಜಿಗೆ ಬಾಬಾ ಆಮ್ಟೆ ಬರುತ್ತಿದ್ದಾರಂತೆ, ಈ ದೇಶದ ಯುವಕರಲ್ಲಿ ಸ್ಫೂರ್ತಿ ಹುಟ್ಟಿಸಿ ಅವರನ್ನೆಲ್ಲ 'ಭಾರತ್ ಜೋಡೊ' ಯಾತ್ರೆಯಲ್ಲಿ ತೊಡಗಿಸುತ್ತಿದ್ದಾರಂತೆ, ಕನ್ಯಾಕುಮಾರಿಯಿಂದ ಕಾಶ್ಮೀರದ ತನಕ ಮತ್ತು ಅರುಣಾಚಲ ಪ್ರದೇಶದಿಂದ ಗುಜರಾತಿನ ತನಕ ಈ ಭಾರತ್ ಜೋಡೋ ಯಾತ್ರೆಯನ್ನು ಕೈಗೊಂಡು ಎಲ್ಲೆಡೆ ಶಾಂತಿ ಮತ್ತು ಪರಿಸರ ರಕ್ಷಣೆ ಬಗ್ಗೆ ಎಚ್ಚರಿಕೆ ಮೂಡಿಸುತ್ತಿದ್ದಾರಂತೆ ಎಂದೆಲ್ಲ ಸುದ್ದಿ ಹಬ್ಬಿತು.

ಅಷ್ಟೇ ಅಲ್ಲ ಆಮ್ಟೆ ಅಮ್ಟೆಗೆ ಬೆನ್ನಲುಬೇ ಇಲ್ಲವೆಂದೂ, ಆ ಕಾರಣದಿಂದ ಅವರು ಒಂದೋ ನಿಂತಿರಬೇಕು ಅಥವಾ ಮಲಗಿರಬೇಕು; ಆದರೂ ಈ spineless ಮನುಷ್ಯನ spirit ಅನ್ನು ಮಾತ್ರ ಯಾರಿಂದಲೂ ಮುರಿಯಲಾಗಿಲ್ಲ ಎಂದು ಆಗಲೇ ನನಗೆ ಗೊತ್ತಿದ್ದರಿಂದ ಅವರನ್ನು ನೋಡುವ ಎದಮ್ಯ ಕುತೂಹಲ ನನ್ನಲ್ಲಿತ್ತು.

ಅದು 1988 ರ ಒಂದು ಮಧ್ಯಾಹ್ನ. ಅವತ್ತು ಬಾಬಾ ಆಮ್ಟೆಯವರೊಂದಿಗೆ ನೂರಾರೂ ಯುವಕರು ಸೈಕಲ್‌ಗಳ ಮೇಲೆ ನಮ್ಮ ಕಾಲೇಜನ್ನು ಪ್ರವೇಶಿಸಿದರು. ಕಾಲೇಜಿನ ವಿದ್ಯಾರ್ಥಿಗಳಾದ ನಾವೆಲ್ಲ ಹೊರಾಂಗಣದಲ್ಲಿ ಸೇರುತ್ತಿದ್ದಂತೆ ವೇದಿಕೆಯ ಮೇಲೆ ಒಂದು ಮಂಚವನ್ನು ತಂದಿಟ್ಟರು. ವೇದಿಕೆಯನ್ನು ಹತ್ತಿದ ಬಾಬಾ ಆಮ್ಟೆ ಸ್ವಾಗತ ಭಾಷಣ, ಇತ್ಯಾದಿಗಳು ನಡೆಯುವವರೆಗೆ ಮಂಚದ ಮೇಲೆ ಮಲಗಿದ್ದರು. ನಂತರ ಎದ್ದುನಿಂತು ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದಾಗ ನಮಗೆಲ್ಲ ಖುಷಿ, ನಾವು ಈ ದೇಶದ ಭವಿಷ್ಯ ಎಂಬ ಹೆಮ್ಮೆ! ಅವತ್ತು 'ಭಾರತ್ ಜೋಡೊ' ಯಾತ್ರೆಯಲ್ಲಿ ನಾನು ಪಾಲ್ಗೊಳ್ಳಬೇಕು ಅನಿಸಿದರೂ ಅಮ್ಮನ ಹೆದರಿಕೆಯಿಂದ ಸುಮ್ಮನಾಗಿದ್ದೆ.

ಇದಾದ ಹನ್ನೊಂದು ವರ್ಷಗಳ ನಂತರ ಬಾಬಾ ಆಮ್ಟೆಯವರ ಆನಂದವನ್ ಆಶ್ರಮದಲ್ಲಿ ಎರಡು ದಿನ ಉಳಿಯುವ, ಅವರನ್ನು ಸಂದರ್ಶಿಸುವ, ಅವರ ಹೆಂಡತಿ ಮತ್ತು ಇಬ್ಬರು ಮಕ್ಕಳೊಂದಿಗೆ ಸಮಯ ಕಳೆಯುವ ಅವಕಾಶ ನನಗೆ ಒದಗಿ ಬಂತು.


ಆಗ ETV ಚಾನೆಲ್‌ನ ದೆಹಲಿ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ನಾನು ಆಗ ತಾನೇ ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದ್ದೆ. ದಕ್ಷಿಣ ಆಫ್ರಿಕಾದಲ್ಲಿದ್ದಾಗ ಮಹಾತ್ಮಾ ಗಾಂಧಿ ಸ್ಥಾಪಿಸಿದ್ದ ಪ್ರಥಮ ಆಶ್ರಮ ಫೀನಿಕ್ಸ್‌ಗೆ ಭೇಟಿ ನೀಡಿದ್ದ ನಾನು ಮಹಾರಾಷ್ಟ್ರದಲ್ಲಿರುವ ಅವರ ಕೊನೆ ಆಶ್ರಮ ಸಾಬರಮತಿಗೂ ಭೇಟಿ ನೀಡಿದರೆ ಹೇಗೆ ಅನ್ನಿಸಿತು. ಅದೇ ಸಂದರ್ಭದಲ್ಲಿ ಹೇಗಿದ್ದರೂ ಸಾಬರಮತಿಗೆ ಹೋಗುತ್ತಿರುವುದರಿಂದ ಬಾಬಾ ಆಮ್ಟೆಯವರ ಆನಂದವನಕ್ಕೂ ಭೇಟಿ ನೀಡಿ ಅವರನ್ನು ಸಂದರ್ಶಿಸುವುದೆಂದು ನಿರ್ಧಾರವಾಯಿತು.

ಅವತ್ತು ಆನಂದವನ ಆಶ್ರಮವನ್ನು ನಾನು ತಲುಪಿದಾಗ ರಾತ್ರಿ ಹತ್ತೂವರೆ ಆಗಿತ್ತು. ಆದರೆ ನನಗಾಗಿ ಕಾಯುತ್ತಿದ್ದ ಆಶ್ರಮದ ಅಧಿಕಾರಿಯೊಬ್ಬರು ನನಗೆಂದು ಕಾದಿರಿಸಿದ್ದ ರೂಮನ್ನು ತೋರಿಸಿ, ಬೆಳಗ್ಗೆ ಬಾಬಾ ಆಮ್ಟೆಯವರೊಂದಿಗೆ ಭೇಟಿ ನಿಗದಿಯಾಗಿದೆ ಎಂದು ಹೇಳಿದರು. ಚಿಕ್ಕದಾಗಿದ್ದ ಮತ್ತು ಚೊಕ್ಕದಾಗಿದ್ದ ಆ ರೂಮಿನಲ್ಲಿ ಒಂದು ಮಂಚ, ಟೇಬಲ್ ಹಾಗೂ ಕಬ್ಬಿಣದ ಕುರ್ಚಿಯ ಹೊರತಾಗಿ ಅನಗತ್ಯವಾದದ್ದು ಏನೂ ಇರಲಿಲ್ಲ. ಮಾತ್ರವಲ್ಲ, ರೂಮಿನಲ್ಲಿ ತಂಗಿದ್ದವರೇ ಅದನ್ನು ಸ್ವಚ್ಛವಾಗಿಡುವ ಜವಾಬ್ದಾರಿಯನ್ನು ಹೊರಬೇಕು ಎಂಬ ನಿಯಮ ಆಶ್ರಮದ್ದಾಗಿದ್ದು ಅದಕ್ಕೆಂದು ಕಸದ ಪೊರಕೆ, ನೆಲ ಸಾರಿಸಲು ಒಂದು ಬಟ್ಟೆ ಮತ್ತು ಬಕೆಟ್ಟನ್ನು ಇಡಲಾಗಿತ್ತು.

ಬೆಳಗ್ಗೆ ಎದ್ದು ರೂಮನ್ನು ಸ್ವಚ್ಛಗೊಳಿಸಿ ಎಂಟು ಗಂಟೆಗೆ ರೆಡಿಯಾದೆ. ಆದರೆ ಬೆಳಗ್ಗೆ ನಾಲ್ಕೂವರೆ ಗಂಟೆಗೇ ಎದ್ದು ತಮ್ಮ ವಾಕಿಂಗ್, ಸ್ನಾನ, ತಿಂಡಿ ಇತ್ಯಾದಿಗಳನ್ನು ಮುಗಿಸಿದ್ದರು ಬಾಬಾ ಆಮ್ಟೆ. ಅವರು ಮತ್ತು ಅವರ ಹೆಂಡತಿ ಸಾಧನಾರವರು ನನ್ನನ್ನು ಎಷ್ಟು ಆತ್ಮೀಯವಾಗಿ ಮಾತನಾಡಿಸಿದರೆಂದರೆ ನಾನು ಅವರ ಮಗಳೇನೋ ಎಂದೆನಿಸಿತು. ಸ್ವಲ್ಪ ಹೊತ್ತಿನ ಮಾತುಕತೆಯ ನಂತರ ಆನಂದವನ್ ಸುತ್ತ ನನ್ನನ್ನು ಬಾಬಾ ಆಮ್ಟೆಯವರೇ ಕರೆದುಕೊಂಡು ಹೋಗಿ ತೋರಿಸಿದರು. ಆ ಆಶ್ರಮದಲ್ಲಿದ್ದವರು ಕುಷ್ಠರೋಗಿಗಳಾದರೂ ಇಡೀ ಜಾಗ ಅಚ್ಚರಿ ಮೂಡಿಸುವಷ್ಟು ಕ್ಲೀನ್ ಆಗಿತ್ತು.

ಅಲ್ಲಿನ ಮಗ್ಗದಲ್ಲಿ, ಕೈತೋಟದಲ್ಲಿ, ಮರಗೆಲಸದ ಯೂನಿಟ್ಟಿನಲ್ಲಿ ಎಲ್ಲೆಲ್ಲೂ ದೇಶದೆಲ್ಲೆಡೆಯಿಂದ ಬಂದಿದ್ದ ಜನರಿದ್ದರಲ್ಲದೆ, ಕರ್ನಾಟಕದಿಂದ ಹೋಗಿದ್ದ ಬಹಳಷ್ಟು ಕನ್ನಡಿಗರೂ ಇದ್ದರು. ಅಲ್ಲಿನ ಊಟದ ವ್ಯವಸ್ಥೆ ಹೇಗಿತ್ತೆಂದರೆ ಆಶ್ರಮದ ಜನರೊಂದಿಗೆ ನನ್ನಂತಹ ಅತಿಥಿಗಳೂ ಊಟ ಮಾಡಬೇಕಿತ್ತಲ್ಲದೆ ಅಲ್ಲೂ ಕೂಡ ನಮ್ಮ ತಟ್ಟೆಯನ್ನು ನಾವೇ ತೊಳೆದು ಎತ್ತಿಡಬೇಕಿತ್ತು.

ಅವತ್ತು ಬಾಬಾ ಆಮ್ಟೆಯವರ ಅಂಬ್ಯುಲೆನ್ಸ್‌ನಂತಹ ವಾಹನದಲ್ಲಿ ಅವರೊಂದಿಗೆ ಇಡೀ ಆಶ್ರಮವನ್ನು ಸುತ್ತಾಡಿದೆ. ಅವರು ತಮ್ಮ ಕೆಲಸದಲ್ಲಿ ತೊಡಗಿರುವುದನ್ನು, ಆಸ್ಪತ್ರೆಯಲ್ಲಿ ರೋಗಿಗಳನ್ನು ವಿಚಾರಿಸುತ್ತಿರುವುದನ್ನು, ತಮ್ಮ ಸಹಾಯಕರಿಗೆ ಸಲಹೆ ನೀಡುತ್ತಿರುವುದನ್ನು ನನ್ನೊಂದಿಗೆ ಬಂದಿದ್ದ ಛಾಯಾಗ್ರಾಹಕ ತನ್ನ



ವಿಡಿಯೋ ಕ್ಯಾಮೆರಾದಲ್ಲಿ ಸೆರೆಹಿಡಿಯುತ್ತಿದ್ದರು. ನಾನು ಕ್ಯಾಮೆರಾ ಮುಂದೆ ಬರುವುದು ಬೇಡ ಎಂದು ಆತನ ಪಕ್ಕ ಇದ್ದರೆ ಬಾಬಾ ಆಮ್ಟೆಗೆ ಏನನ್ನಿಸುತ್ತಿತ್ತೋ ಏನೋ, ಪ್ರತಿ ಬಾರಿ 'ಗೌರಿ ಆ ಜಾವ್ ಇದರ್' ಎಂದು ನನ್ನನ್ನು ತಮ್ಮ ಪಕ್ಕಕ್ಕೆ ಕರೆದುಕೊಳ್ಳುತ್ತಿದ್ದರು. ನನ್ನ ಕೈಹಿಡಿದು ನಡೆದಾಡಿದರು.

ದಾರಿ ಮಧ್ಯೆ ಆಶ್ರಮದಲ್ಲಿ ನೂರಾರು ಮರಗಳಿದ್ದ ದಟ್ಟವಾದ ಪ್ರದೇಶವನ್ನು ತೋರಿಸಿ "ಇವತ್ತು ಸಂಜೆ ಸರಿಯಾಗಿ ಆರು ಗಂಟೆಗೆ ಇಲ್ಲಿಗೆ ಬಾ. ಒಂದು ಅದ್ಭುತ ದೃಶ್ಯವನ್ನು ನೋಡುತ್ತೀ. ಅದಾದ ನಂತರ ಜೊತೆಗೆ ಊಟ ಮಾಡೋಣ" ಎಂದರು. ಅವರು ಹೇಳಿದ್ದಂತೆ ಆ ಜಾಗಕ್ಕೆ ಹಾಜರಾದೆ. ಆಕಾಶದಲ್ಲಿ ಸೂರ್ಯ ಮುಳುಗಲಾರಂಭಿಸಿದ್ದ. ನಿಧಾನವಾಗಿ ವಿವಿಧ ದಿಕ್ಕುಗಳಿಂದ ಹಲವು ಹಕ್ಕಿಗಳು ಹಾರಿಬರಲಾರಂಭಿಸಿದವು. ಸ್ವಲ್ಪ ಹೊತ್ತಿನಲ್ಲೇ ಅವುಗಳ ಸಂಖ್ಯೆ ಹೆಚ್ಚಾಗಿ ಸಾವಿರಾರು ಹಕ್ಕಿಗಳು ತಮ್ಮ ಗೂಡುಗಳನ್ನು, ಅದರಲ್ಲಿದ್ದ ತಮ್ಮ ಮರಿಗಳನ್ನು ಸೇರಿಕೊಂಡವು. ಎಲ್ಲೆಡೆ ಹಕ್ಕಿಗಳ ಕಲರವ! ನಿಸರ್ಗದೊಂದಿಗೆ ನಾನು ಅನುಭವಿಸಿರುವ ಅದ್ಭುತ ಕ್ಷಣಗಳಲ್ಲಿ ಅದೊಂದಾಗಿತ್ತು. ಕತ್ತಲು ಕವಿಯಲಾರಂಭಿಸಿದಾಗ ಬಾಬಾ ಆಮ್ಟೆ ಯವರಿದ್ದಲ್ಲಿಗೆ ಹೋದಾಗ "ಹೇಗಿತ್ತು?" ಎಂದರು. ಮ್ಯಾಜಿಕ್ ತೋರಿಸಿದ ಪುಟ್ಟ ಹುಡುಗನ ಆನಂದ ಆಗ ಅವರ ಮುಖದಲ್ಲಿತ್ತು.

ಮಾರನೆ ದಿನ ಗಾಂಧೀಜಿಯವರ ಸೇವಾಗ್ರಾಮಕ್ಕೆ ಭೇಟಿ ನೀಡಿ ಸಂಜೆ ಹೊತ್ತಿಗೆ ಆನಂದವನಕ್ಕೆ ಹಿಂದಿರುಗಿದಾಗ ಅವರ ಪುತ್ರರಾದ ವಿಕಾಸ್ ಮತ್ತು ಪ್ರಕಾಶರ ಭೇಟಿ ಆಯಿತು. ಅವರೆಲ್ಲರೊಂದಿಗೆ ಬಾಬಾ ಆಮ್ಟೆಯವರ ವ್ಯಕ್ತಿತ್ವ, ಅವರ ಬಾಲ್ಯ, ಅವರ ಮೇಲೆ ಪ್ರಭಾವ ಬೀರಿದ ಜನ, ಬದುಕಿಗೆ ತಿರುವು ನೀಡಿದ ಘಟನೆಗಳು... ಕುರಿತಂತೆ ಮಾತು, ಸಂದರ್ಶನ ಎಲ್ಲವೂ ನಡೆದವು. ಮಾರನೆ ದಿನ ಬೆಳಗ್ಗೆ ನಾನು ದೆಹಲಿಗೆ ಹಿಂದಿರುಗಬೇಕಿತ್ತು. ಆದರೆ ಬಾಬಾ ಆಮ್ಟೆ "ಇಷ್ಟು ಬೇಗ ಯಾಕೆ? ಇನ್ನೊಂದು ದಿನ ಇರು" ಎಂದು ಒತ್ತಾಯ ಮಾಡಿದರು, ಅವರ ಒತ್ತಾಯಕ್ಕೆ ಮಣಿದು ಮತ್ತೊಂದು ದಿನ ಉಳಿದುಕೊಂಡೆ.

ಬಾಬಾ ಆಮ್ಟೆಯವರಿಗೆ ನೂರಾರು ಪ್ರಶಸ್ತಿಗಳು, ಸನ್ಮಾನಗಳು ಸಂದಿದ್ದವು. ಆದರೆ ಅವರು ತುಂಬಾ ಸರಳ ವ್ಯಕ್ತಿಯಾಗಿದ್ದರು. ಅವರ ಪ್ರಾಮಾಣಿಕತೆ, ಸೇವಾ ಮನೋಭಾವ, ಹೋರಾಟದ ಛಲ, ಎಲ್ಲರನ್ನು ಪ್ರೀತಿಯಿಂದ ಮಾತನಾಡಿಸುವ ಸಜ್ಜನಿಕೆ ನಿಜವಾಗಲೂ ಮನಮುಟ್ಟುವಂತಿತ್ತು.

ಬಾಬಾ ಆಮ್ಟೆ ಎಂತಹ ಮನುಷ್ಯ ಅಂದರೆ ಕುಷ್ಠರೋಗಿಗಳ ಒಳಿತಿಗೇ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದ ಅವರು, ನರ್ಮದಾ ಡ್ಯಾಮ್‌ನಿಂದಾಗಿ ಸಾವಿರಾರು ಜನ ನಿರಾಶ್ರಿತರಾಗುತ್ತಾರೆಂಬ ಕಾರಣಕ್ಕೆ ನರ್ಮದಾ ಬಚಾವೊ ಆಂದೋಲನದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಅಲ್ಲಿನ ಜನರಿಗಾಗಿ ಜಲಸಮಾಧಿಯಾಗಿ ತಮ್ಮ ಜೀವನನ್ನೇ ತ್ಯಾಗ ಮಾಡಲು ಸಿದ್ಧರಿದ್ದರು. ಅವರ ಆರೋಗ್ಯ ಕೆಡುತ್ತಿದ್ದರೂ, ಬೆನ್ನೆಲುಬು ಇಲ್ಲದಿದ್ದರಿಂದ ಅವರಿಗೆ ಕೂರಲೂ ಆಗದಿದ್ದರೂ ಅದೆಷ್ಟೋ ವರ್ಷ ನರ್ಮದಾ ನದಿಯ ಪಕ್ಕದಲ್ಲೇ ಒಂದು ಗುಡಿಸಲಿನಂತಹ ಕಟ್ಟಡದಲ್ಲಿ ತಮ್ಮ ಮಡದಿಯೊಂದಿಗೆ ವಾಸ ಮಾಡಿದರು. ಕೊನೆಗೆ ಅವರನ್ನು ರಕ್ತದ ಕ್ಯಾನ್ಸರ್ ಆವರಿಸಿಕೊಂಡ ನಂತರವೇ ಆನಂದವನಕ್ಕೆ ವಿಧಿ ಇಲ್ಲದೆ ಹಿಂದಿರುಗಿದ್ದರು.

ವಾತ್ಸಲ್ಯ ಮತ್ತು ಅಹಿಂಸೆಯ ಪ್ರತೀಕವಾಗಿದ್ದ, ಹೋರಾಟಗಳ ಸ್ಫೂರ್ತಿಯಾಗಿದ್ದ ಬಾಬಾ ಆಮ್ಟೆಯವರೊಂದಿಗೆ ಎರಡು ದಿನಗಳನ್ನಾದರೂ ಕಳೆದ ಭಾಗ್ಯಶಾಲಿ ನಾನು ಎಂಬ ಹೆಮ್ಮೆಯೊಂದಿಗೆ ಅವರು ಇವತ್ತಿಲ್ಲ ಎಂಬ ನೋವು ಕಾಡುತ್ತಿದೆ.... ಬಾಬಾ ಆಮ್ಟೆ ಬೆನ್ನುಲುಬಿನ ಸಮಸ್ಯೆಯಿಂದ ಬಳಲುತ್ತಿದ್ದವರು. ಒಂದರ್ಥದಲ್ಲಿ ದೈಹಿಕವಾಗಿ ಅವರಿಗೆ ಬೆನ್ನೆಲುಬಿರಲಿಲ್ಲ, ಆದರೆ ಅದು ಎಂದೂ ಸಹ ಜನಪರ ಕಾಳಜಿ, ಸರ್ಕಾರಗಳ ದುಷ್ಟತನದ ಬಗ್ಗೆ ದನಿ ಎತ್ತಲು ಅಡ್ಡಿಯಾಗಲೇ ಇಲ್ಲ, ಈ ರೀತಿಯ ದೈಹಿಕ ಸಮಸ್ಯೆಯಿಲ್ಲದ ನಾವೆಲ್ಲರೂ ಅದಕ್ಕೂ ಮೀರಿದ ಬದ್ಧತೆಯನ್ನು ತೋರಿಸಬೇಕಲ್ಲವೇ?

* * * * * * *



ಕಂಡಹಾಗೆ

ಇತ್ತೀಚೆಗೆ ಮುಂಬೈನಲ್ಲಿ ಉತ್ತರ ಭಾರತೀಯರ ಮೇಲಾಗಿರುವ ದಾಳಿ ಕುರಿತ ಚರ್ಚೆಗೆ CNN-IBN ಚಾನೆಲ್‌ನವರು ನನ್ನನ್ನು ಆಹ್ವಾನಿಸಿದ್ದರು. ಮುಂಬೈನ ಸ್ಟುಡಿಯೋದಲ್ಲಿ ನಡೆದ ಆ ಚರ್ಚೆಯಲ್ಲಿ ನಾನು ನಮ್ಮ ಬೆಂಗಳೂರಿನ ಆಫೀಸಿನಿಂದಲೇ ಭಾಗವಹಿಸಿದೆ. ಆ ಚರ್ಚೆಯಲ್ಲಿ ನಾನು ವ್ಯಕ್ತಪಡಿಸಿದ ಅಭಿಪ್ರಾಯದ ಬಗ್ಗೆ ಹಲವಾರು ಜನ ತಪ್ಪಾಗಿ ಅರ್ಥ ಮಾಡಿಕೊಂಡಿದ್ದರಿಂದ ಮತ್ತು ನನ್ನ ಹಾಗು ನನ್ನ ಮಿತ್ರರ ಮುಂದೆ ಅದರ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದ್ದರಿಂದ ಇಲ್ಲಿ ಸ್ಪಷ್ಟನೆ ನೀಡುತ್ತಿದ್ದೇನೆ.

ಅವತ್ತಿನ ಚರ್ಚೆಯಲ್ಲಿ ನನಗೆ ಎರಡು ಪ್ರಶ್ನೆಗಳನ್ನು ರಾಜದೀಪ್ ಸರ್ದೇಸಾಯ್ ಕೇಳಿದರು. ಮೊದಲನೆ ಪ್ರಶ್ನೆ: "ಮುಂಬೈನಲ್ಲಿ ಮಾತ್ರವಲ್ಲ ಭಾರತದ ಇತರೆ ರಾಜ್ಯಗಳಲ್ಲೂ ಹೊರಗಿನವರ ಬಗ್ಗೆ ಅಸಹನೆ ಹೆಚ್ಚಾಗುತ್ತಿದೆ ಅನ್ನಿಸುತ್ತಿದೆಯೇ? ಕರ್ನಾಟಕದಲ್ಲೂ ಇದು ವ್ಯಕ್ತವಾಗಿದೆಯೇ?"

ಅದಕ್ಕೆ ನಾನು ನೀಡಿದ ಉತ್ತರ ಹೀಗಿತ್ತು: "ಬೆಂಗಳೂರಿನಲ್ಲೂ ಇವತ್ತು ಕನ್ನಡಿಗರೇ ಅಲ್ಪಸಂಖ್ಯಾತರಾಗಿದ್ದಾರೆ. ಬರುವ ದಿನಗಳಲ್ಲಿ ಕನ್ನಡಿಗರ ಸ್ಥಿತಿ ಇನ್ನೂ ಚಿಂತಾಜನಕವಾಗುತ್ತದೆ. ಇದಕ್ಕೆ ಕಾರಣ ಇವತ್ತಿನ ಜಾಗತೀಕರಣದಿಂದಾಗಿ ನಡೆಯುತ್ತಿರುವ ಅಭಿವೃದ್ಧಿ ಯೋಜನೆಗಳು. ಈ ಯೋಜನೆಗಳಿಂದಾಗಿ ಸ್ಥಳೀಯರಿಗೆ ಅವಕಾಶಗಳು ಹೆಚ್ಚಾಗುತ್ತಿಲ್ಲ. ಆದ್ದರಿಂದ ಅವರಲ್ಲಿ **alienation** ಭಾವನೆ ಹೆಚ್ಚಾಗುತ್ತಿದೆ. ಇತ್ತೀಚೆಗೆ ರೈಲ್ವೆ ನೇಮಕಾತಿ ಕುರಿತಂತೆ ಕರ್ನಾಟಕದ ಹಲವು ಸಂಘಟನೆಗಳು ಪ್ರತಿಭಟಿಸಿದ್ದವು, ಬೆಳಗಾವಿ ವಿಷಯದಲ್ಲಿ ಎಂಇಎಸ್ ಶಾಸಕರಿಗೆ ಟಾರ್ ಬಳಿಯಲಾಗಿತ್ತು. ಆದರೆ ಈ ರೀತಿಯ ಪ್ರತಿಭಟನೆಗಳಿಗೆ ಎಲ್ಲಾ ಕನ್ನಡಿಗರ ಸಮ್ಮತಿ ಇದೆ ಅನ್ನಿಸುವುದಿಲ್ಲ. ಇಂತಹ ಕೃತ್ಯಗಳಲ್ಲಿ **fringe** ಮತ್ತು **lunatic elements** ಮಾತ್ರ ಭಾಗಿ ಆಗಿರುತ್ತವೆ."

ಎರಡನೇ ಪ್ರಶ್ನೆ: "ಮಹಾರಾಷ್ಟ್ರದ ಜನರಿಗೆ ನಿಮ್ಮ ಸಲಹೆ ಏನು?"

ನನ್ನ ಉತ್ತರ: "ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲೇ ಅಲ್ಪಸಂಖ್ಯಾತರಾಗಿರುವ ಕನ್ನಡಿಗರಲ್ಲಿ ಒಬ್ಬಳಾದ ನನಗೆ ಮುಂಬೈನಲ್ಲಿನ ಮರಾಠಿ ಜನರ ಭಾವನೆಗಳ ಬಗ್ಗೆ ಸಿಂಪಥಿ ಇದೆ. ಆದರೆ ಎಂದಿಗೂ ಫ್ಯಾಸಿಸಂ ಮತ್ತು **violence** ಅನ್ನು ಒಪ್ಪಲಾಗುವುದಿಲ್ಲ, ನಮ್ಮ ರಾಜ್ಯದಲ್ಲಿ ಖಾಸಗಿ ಕಂಪನಿಗಳಲ್ಲೂ ಸ್ಥಳೀಯರಿಗೆ ಮೀಸಲಾತಿ ನೀಡುವಂತೆ ಒಂದು ಪ್ರಯತ್ನ ನಡೆಯಿತು. ಆದರೆ ಅದು ಸಫಲವಾಗಲಿಲ್ಲ, ಆ ನಿಟ್ಟಿನಲ್ಲಿ ಮರಾಠಿಗರು ಪ್ರಯತ್ನಿಸಿ ಸಫಲವಾಗಲಿ ಎಂದು ಆಶಿಸುತ್ತೇನೆ."

ಸಮಸ್ಯೆ ಆಗಿದ್ದು ಯಾವಾಗ ಅಂದರೆ "....ನನಗೆ ಸಿಂಪಥಿ ಇದೆ" ಅಂತ ನಾನಂದಾಗ ಮುಂಬೈ ಸ್ಟುಡಿಯೋದಲ್ಲಿದ್ದ ಜನ ಚಪ್ಪಾಳೆ ತಟ್ಟಿದ್ದರಿಂದ ನನ್ನ ಮುಂದಿನ ಸಾಲು ``**fascism** ಮತ್ತು **violence** ಅನ್ನು ಒಪ್ಪಲಾಗುವುದಿಲ್ಲ" ಎಂಬುದು ಜನರಿಗೆ ಕೇಳಿಸಿಲ್ಲ, ಆದ್ದರಿಂದ ಮಹಾರಾಷ್ಟ್ರ ನವನಿರ್ಮಾಣ ವೇದಿಕೆಯವರು ಉತ್ತರ ಭಾರತದವರ ಮೇಲೆ ನಡೆಸಿರುವ ದಾಳಿಯನ್ನು ನಾನು ಸಮರ್ಥಿಸಿದೆ ಎಂಬ ತಪ್ಪು ಅಭಿಪ್ರಾಯ ಮೂಡಿದೆ.

ಯಾವುದೇ ಕಾರಣಕ್ಕೂ ನಾನು ಫ್ಯಾಸಿಸಂ ಅನ್ನು ಒಪ್ಪುವ ಸಾಧ್ಯತೆಯೇ ಇಲ್ಲ ಎಂದು ಸ್ಪಷ್ಟಪಡಿಸುತ್ತಿದ್ದೇನೆ....

■ ಗೌರಿ ಲಂಕೇಶ್

ಗೌರಿ ಲಂಕೇಶ್



ಗಿಡುಗಗಳಿಗೆ ಬಲಿಯಾದ ಗಿಳಿ ಬೆನಜೀರ್ 7

ಅವತ್ತು 2007 ರ ಡಿಸೆಂಬರ್ 27. ಅಂದು ಬೆನಜೀರ್ ರಾವಲ್ಪಿಂಡಿ ನಗರದಲ್ಲಿ ಚುನಾವಣಾ ಭಾಷಣ ಮಾಡಬೇಕಿತ್ತು. ಆ ರಾವಲ್ಪಿಂಡಿ ಸಾಮಾನ್ಯ ನಗರವಲ್ಲ. ಪಾಕಿಸ್ತಾನ್ ಸೈನ್ಯದ ಹಲವಾರು ಬಿಡಾರಗಳನ್ನು ಹೊಂದಿರುವ ರಾವಲ್ಪಿಂಡಿಯಲ್ಲಿ "ಸೈನ್ಯದ ಆದೇಶವಿಲ್ಲದೆ ಒಂದು ಎಲೆಯೂ ಚಲಿಸುವುದಿಲ್ಲ" ಎಂಬ ನಾಣ್ಣುಡಿಯೇ ಚಾಲ್ತಿಯಲ್ಲಿದೆ. ಅಷ್ಟೇ ಅಲ್ಲ, ಈ ರಾವಲ್ಪಿಂಡಿಗೆ ಬೆನಜೀರ್‌ಗಿಂತಲೂ ಮುನ್ನ ಇನ್ನಿಬ್ಬರು ಪ್ರಧಾನಮಂತ್ರಿಗಳನ್ನು ಬಲಿ ತೆಗೆದುಕೊಂಡ ಇತಿಹಾಸವೂ ಇದೆ. ಪಾಕಿಸ್ತಾನದ ಪ್ರಪ್ರಥಮ ಚುನಾಯಿತ ಪ್ರಧಾನಿ ಲಿಯಾಖತ್ ಆಲಿ ಖಾನ್‌ರನ್ನು ಈ ನಗರದಲ್ಲೇ ಕೊಲೆಗೈಯಲಾಗಿತ್ತಲ್ಲದೆ, ಆತನ ರಕ್ತ ಹರಿದ ಜಾಗೆಯಿಂದ ಸುಮಾರು ಒಂದು ಕಿಲೋಮೀಟರ್ ದೂರದಲ್ಲಿದ್ದ ಕಾರಾಗೃಹದಲ್ಲೇ ಸ್ವತಃ ಬೆನಜೀರ್‌ಳ ತಂದೆ ಜುಲ್ಫಿಕರ್ ಆಲಿ ಭುಟ್ಟೊನನ್ನು ಗಲ್ಲಿಗೇರಿಸಲಾಗಿತ್ತು. (ಆನಂತರ ಭುಟ್ಟೊ ಸಾವಿನ ನೆನಪಿನಾರ್ಥ ಆ ಕಾರಾಗೃಹವೇ ಇರಬಾರದೆಂದು ಅಂದಿನ ಸೈನ್ಯಾಧಿಕಾರಿ ಜಿಯಾ ಉಲ್‌ಹಕ್ ಆ ಇಡೀ ಕಟ್ಟಡವನ್ನೇ ನೆಲಸಮಗೊಳಿಸಿದ್ದರೆ, ಹಾಲಿ ಸರ್ವಾಧಿಕಾರಿ ಪರ್ವೇಜ್ ಮುಷರಫ್ ನೇತೃತ್ವದಲ್ಲಿ ಅದೇ ಜಾಗದಲ್ಲಿ ಒಂದು ಐಷಾರಾಮಿ ಕಾಂಪ್ಲೆಕ್ಸ್ ತಲೆಯೆತ್ತುತ್ತಿದೆ!)

ಇಂತಹ ಕುಖ್ಯಾತ ರಾವಲ್ಪಿಂಡಿ ನಗರ ಇರುವುದು ಪಾಕಿಸ್ತಾನದ ಪಂಜಾಬ್ ಪ್ರದೇಶದಲ್ಲಿ. ಸಂಖ್ಯಾಬಲದಿಂದಲೇ ಪಾಕಿಸ್ತಾನದ ರಾಜಕೀಯದಲ್ಲಿ ಹೆಚ್ಚು ಪ್ರಾಬಲ್ಯವನ್ನು ಹೊಂದಿರುವ ಪಂಜಾಬ್ ಪ್ರದೇಶದ ಬಗ್ಗೆ ಇತರ ಪ್ರದೇಶಗಳ ಜನರಿಗೆ-ಅದರಲ್ಲೂ ಭುಟ್ಟೊ ವಂಶ ಪ್ರಾಬಲ್ಯ ಹೊಂದಿರುವ ಸಿಂಧ್ ಪ್ರದೇಶದ ಜನರಿಗೆ-ಮೊದಲೇ ಅಸೂಯೆ. ಅದರೊಂದಿಗೆ ಹಿಂದೆ ಲಿಯಾಖತ್ ಆಲಿ ಖಾನ್ ಮತ್ತು ಜುಲ್ಫಿಕರ್ ಆಲಿ ಭುಟ್ಟೊ ಎಂಬ ಇಬ್ಬರು ಪಂಜಾಬಿಯೇತರ ನಾಯಕರ ಸಾವಿನ ಸ್ಥಳವಾದ ರಾವಲ್ಪಿಂಡಿ ನಗರದ ಬಗ್ಗೆ ಅದೆಂತಹದ್ದೋ ಗುಮಾನಿ, ಆತಂಕ.

ದುಷ್ಟ ಶಕ್ತಿಗಳ ಬಗ್ಗೆ, ಅಪಶಕುನಗಳ ಬಗ್ಗೆ ಬೆನಜೀರ್‌ಳಿಗೂ ಸಾಕಷ್ಟು ಭಯವಿತ್ತು. ಆ ಕಾರಣದಿಂದಾಗಿಯೇ ಆಕೆ ತನ್ನ ಮನೆಯನ್ನು ಫಾಂಗ್ ಶೂಯಿ ಪ್ರಕಾರ ಅಲಂಕರಿಸಿದ್ದಳಲ್ಲದೆ, ತನ್ನ ಕತ್ತು, ಕೈ ಮತ್ತು ತೋಳುಗಳ ಸುತ್ತ ಹಲವಾರು ತಾಯಿತಗಳನ್ನು ಧರಿಸುತ್ತಿದ್ದಳು, ಕಣಿ ಹೇಳುವವರ ಸಲಹೆಗಳನ್ನೂ ಚಾಚೂ ತಪ್ಪದೆ ಪಾಲಿಸುತ್ತಿದ್ದಳು.

ಆದರೆ ರಾವಲ್ಪಿಂಡಿಯಲ್ಲೇ ಪ್ರಾಥಮಿಕ ಶಾಲಾಭ್ಯಾಸ ಮಾಡಿದ್ದ ಅಲ್ಲೇ ತನ್ನ ತಂದೆಯನ್ನು ಕೊನೆಯ ಬಾರಿ ಕಂಡಿದ್ದ ಬೆನಜೀರ್‌ಳಿಗೆ ತನ್ನ ಬದುಕಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಆ ನಗರವನ್ನು ತನ್ನ ಚಾರಿಸ್ಮಾದಿಂದ ಸೂರೆಗೊಳಿಸಬೇಕೆಂಬ ಹಂಬಲ. ಆದ್ದರಿಂದಲೇ ಯಾವ ಲಿಯಾಖತ್ ಖಾನ್‌ನನ್ನು 56 ವರ್ಷಗಳ ಹಿಂದೆ ಹತ್ಯೆ ಮಾಡಲಾಗಿತ್ತೋ, ಆತನನ್ನು ಹತ್ಯೆಗೈದಿದ್ದ ಜಾಗಕ್ಕೆ ಆತನ ನೆನಪಿನಾರ್ಥ ಲಿಯಾಖತ್ ಬಾಗ್ ಎಂಬ ನಾಮಕರಣ ಮಾಡಲಾಗಿತ್ತೋ, ಅದೇ ಜಾಗಕ್ಕೆ ಬೆನಜೀರ್ ಧೈರ್ಯವಾಗಿ ಹೆಜ್ಜೆ ಇಟ್ಟಳು. "ನಾನು ನನ್ನ ಜೀವವನ್ನೇ ಪಣತೊಟ್ಟು ಇಲ್ಲಿಗೆ ಬಂದಿದ್ದೇನೆ. ಇಡೀ ದೇಶವೇ ಇವತ್ತು ಅಪಾಯದಲ್ಲಿದೆ ಎಂಬ ಕಾರಣಕ್ಕೆ ನಾನಿಲ್ಲಿಗೆ ಬಂದಿದ್ದೇನೆ. ಜನರೆಲ್ಲರೂ ಚಿಂತಾಕ್ರಾಂತರಾಗಿದ್ದಾರೆ. ಆದರೆ ನಾವೆಲ್ಲರೂ ಜೊತೆಗೂಡಿ ಈ ಬಿಕ್ಕಟ್ಟಿನಿಂದ ದೇಶವನ್ನು ಪಾರು ಮಾಡೋಣ" ಎಂದು ತನ್ನ ಭಾಷಣದಲ್ಲಿ ಬೆನಜೀರ್ ಹೇಳಿದಳು. ಅದು ಆಕೆಯ ಕೊನೆ ಭಾಷಣವಾಗಲಿದೆ ಎಂದು ಯಾರೂ ಊಹಿಸಿರಲಿಲ್ಲ.

ಸರ್ವಾಧಿಕಾರಿ ಮುಷರಫ್‌ನೊಂದಿಗೆ ಆಕೆ ಮಾಡಿಕೊಂಡಿದ್ದ ಒಡಂಬಡಿಕೆ ಮತ್ತು ಅಮೆರಿಕದ ಹಿತಾಸಕ್ತಿಗಳ ಪರವಾಗಿ ಆಕೆ ತೆಗೆದುಕೊಂಡಿದ್ದ ನಿಲುವುಗಳಿಂದಾಗಿಯೋ ಏನೋ ಅಂದು ಆಕೆಯ ಭಾಷಣವನ್ನು ಕೇಳಲು ಅಷ್ಟೇನೂ ಜನ ಸೇರಿರಲಿಲ್ಲ. ಆದರೆ ಲಿಯಾಖತ್ ಬಾಗ್‌ನಿಂದ ಆಕೆ ಹೊರನಡೆದಾಗ, ಹೊರಗಡೆಯೇ ಹೆಚ್ಚು ಸಂಖ್ಯೆಯಲ್ಲಿ ಜನ ಸೇರಿದ್ದನ್ನು ಕಂಡು ಬೆರಗಾದಳು. ತನ್ನ ರಕ್ಷಣೆಗೆಂದು ವಿಧಿಸಲಾದ ನಿಯಮಗಳಿಂದಾಗಿ ತನ್ನ ಭಾಷಣವನ್ನು ಕೇಳಿಸಿಕೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಲಾಗಿರಲಿಲ್ಲ ವೇನೋ ಎಂದು ಭಾವಿಸಿದ ಬೆನಜೀರ್ ತನ್ನ ವಾಹನವನ್ನು ಸುತ್ತುವರಿದಿದ್ದ ಜನರನ್ನು ಕಂಡು ಎಷ್ಟು ಹರ್ಷಭರಿತಳಾದಳೆಂದರೆ ಅಂದಿನ ಕಾರ್ಯಕ್ರಮದ ಜವಾಬ್ದಾರಿಯನ್ನು ಹೊತ್ತಿದ್ದ ಆಪ್ತ ಸ್ನೇಹಿತೆ ನಾಹೀದ್ ಖಾನ್‌ಳ ಗಲ್ಲಗಳಿಗೆ ಮುತ್ತಿಟ್ಟು "ಇದರ ಎಲ್ಲಾ ಕ್ರೆಡಿಟ್ ನಿನಗೇ ಸಲ್ಲಬೇಕು" ಎಂದಳು. ಮಾತ್ರವಲ್ಲ ನಾಹೀದ್‌ಳನ್ನು ಅಪ್ಪಿಕೊಂಡು ತನ್ನ ಸಂತೋಷವನ್ನು ವ್ಯಕ್ತಪಡಿಸಿದಳು.

ಅಷ್ಟೊತ್ತಿಗೆ ಆಕೆ ಇದ್ದ ವಾಹನ ಮುಂದಕ್ಕೆ ಚಲಿಸಲಾರಂಭಿಸಿತ್ತು. ಆದರೂ ಅದರ ಸುತ್ತ ನೂರಾರು ಜನ ಸುತ್ತುವರೆದಿದ್ದರು. ಅವರನ್ನೆಲ್ಲ ಕಂಡು "ನೋಡು, ಎಷ್ಟು ಜನ ತಮ್ಮ ಕೈಬೀಸುತ್ತಿದ್ದಾರೆ. ಅವರೆಲ್ಲರಿಗೂ ಲಿಯಾಖತ್ ಬಾಗ್ ಒಳಗೆ ಬರಲು ಸಾಧ್ಯವಾಗಲಿಲ್ಲ ಅನ್ನಿಸುತ್ತೆ. ಒಂದೇ ಒಂದುಕ್ಷಣ ಈ ವಾಹನದ ಮೇಲಿರುವ ಕಿಟಕಿಯನ್ನು ತೆರೆಯಿರಿ. ಅವರಿಗೆಲ್ಲ ನಾನು ಕೈಬೀಸುತ್ತೇನೆ" ಎಂದಳು ಬೇನಜೀರ್.

ಎಲ್ಲರ ಸಹೋದರಿ ಬೆನಜೀರ್



ಡಿಸೆಂಬರ್ 22 ರಂದು ತನ್ನಪ್ಪನ ಸಮಾಧಿಗೆ ಹೂಗಳನ್ನಿಡುತ್ತಿರುವ ಬೆನಜೀರ್




ಆರುದಿನಗಳ ನಂತರ ತಾನೇ ಸಮಾಧಿಯ...

ಆಕೆಯ ಆದೇಶದಂತೆ ವಾಹನದ ಮೇಲಿದ್ದ ಕಿಟಕಿಯನ್ನು ತೆರೆಯಲಾಯಿತು. ತಾನು ಕೂತಿದ್ದ ಸೀಟಿನ ಮೇಲೆ ನಿಂತು, ಕಿಟಕಿಯಿಂದ ತನ್ನ ತಲೆಯನ್ನು ಹೊರಗೆ ಒಡ್ಡಿ ಜನರತ್ತ ಕೈಬೀಸಲಾರಂಭಿಸಿದಳು ಬೆನಜೀರ್.

ಮರುಕ್ಷಣವೇ ಹತ್ತಿರದಲ್ಲೇ ಪಟಾಕಿಯೊಂದು ಸ್ಫೋಟಗೊಂಡ ಶಬ್ದ ಬೆನಜೀರ್‌ಳ ಆಪ್ತ ಸ್ನೇಹಿತೆ ನಾಹೀದ್ ಖಾನ್‌ಳಿಗೆ ಕೇಳಿಸಿತು. ಆ ಶಬ್ದವಿನ್ನೂ ನಾಹೀದ್‌ಳ ಕಿವಿಗಳಲ್ಲಿ ಪ್ರತಿಧ್ವನಿಸುತ್ತಿತ್ತು, ಆಗ ಬೆನಜೀರ್ ಧಸಕ್ಕೆಂದು ನಾಹೀದ್‌ಳ ಪಕ್ಕದ ಸೀಟಿನಲ್ಲಿ ಕುಸಿದುಬಿದ್ದಳು.

ಬೆನಜೀರ್‌ಳಿಗೆ ತುಂಬಾ ಸುಸ್ತಾಗಿದ್ದರಿಂದ ಆಕೆ ಜನರಿಗೆ ಕೈಬೀಸಿ ಹೀಗೆ ಕುಸಿದಿರಬಹುದೆಂದು ನಾಹೀದ್ ಭಾವಿಸಿದಳು. ಆದರೆ ಅದೇ ಹೊತ್ತಿಗೆ ನಾಹೀದ್‌ಳ ಭುಜದ ಮೇಲೆ ಬೆಚ್ಚಗಿನ ದ್ರವ ಹರಡುತ್ತಿದ್ದ ಅನುಭವವಾಯಿತು. ಆಗ ಬೆನಜೀರಳತ್ತ ನೋಡಿದ ನಾಹೀದ್ ಜೋರಾಗಿ ಚೀರಲಾರಂಭಿಸಿದಳು. ತನ್ನ ಭುಜದ ಮೇಲೆ ಹರಿದದ್ದು ಬೆನಜೀರ್‌ಳ ರಕ್ತ ಎಂದೂ, ಬೆನಜೀರ್ ಸ್ತಬ್ಧವಾಗಿದ್ದರಿಂದ ಆಕೆ ಆ ಕ್ಷಣವೇ ಸತ್ತಿದ್ದಾಳೆಂದೂ ನಾಹೀದ್‌ಗೆ ಆಗಷ್ಟೇ ಗೊತ್ತಾಯಿತು.

ನಾಹೀದ್ ಹೀಗೆ ಚೀರಿಕೊಳ್ಳುತ್ತಿದ್ದಾಗಲೇ ಅವರೆಲ್ಲರಿದ್ದ ವಾಹನದ ಸುತ್ತ ಬಾಂಬ್‌ಗಳು ಸ್ಫೋಟಗೊಂಡವು. ಕ್ಷಣಾರ್ಧದಲ್ಲಿ ಅವರೆಲ್ಲರ ಸುತ್ತ ಹೆಣಗಳು, ಛಿದ್ರಗೊಂಡಿದ್ದ ವಾಹನಗಳು, ಚೂರುಪಾರಾಗಿದ್ದ ಜನರ ದೇಹಗಳು, ಎಲ್ಲೆಡೆ ಅಲ್ಲೋಲಕಲ್ಲೋಲ.... ಆದರೂ ಅದೆಲ್ಲದರ ನಡುವಿನಿಂದ ಬಿಡಿಸಿಕೊಂಡು ಬೆನಜೀರ್ ಇದ್ದ ವಾಹನವನ್ನು ರಾವಲ್ಪಿಂಡಿ ಸಾರ್ವಜನಿಕ ಆಸ್ಪತ್ರೆಯತ್ತ ಸಾಗಿಸಲಾಯಿತು.



ಬೆನಜೀರ್ ಅಷ್ಟೊತ್ತಿಗಾಗಲೇ ಸಾವನ್ನಪ್ಪಿದ್ದರೂ ಆಕೆಯ ದೇಹಕ್ಕೆ ಪುನರ್ಜನ್ಮ ನೀಡುವ ಪ್ರಯತ್ನಗಳನ್ನು ಅಲ್ಲಿನ ವೈದ್ಯರು ಮಾಡಿದರು. ಅದರಲ್ಲಿ ಅವರು ಸಫಲರಾಗದಿದ್ದಾಗ ಸಂಜೆ 5.25 ಕ್ಕೆ ಆಕೆ ಮರಣ ಹೊಂದಿದ್ದಾಳೆ ಎಂದು ಅಧಿಕೃತವಾಗಿ ಘೋಷಿಸಿದರು.

ಜುಲ್ಫಿಕರ್ ಆಲಿ ಭುಟ್ಟೊ, ಶನವಾಜ್ ಭುಟ್ಟೊ ಮತ್ತು ಮುರ್ತಾಜ ಭುಟ್ಟೊ- ಈ ಮೂವರ ಅಂತ್ಯಸಂಸ್ಕಾರಗಳನ್ನು ಕಂಡಿದ್ದ ಪಾಕಿಸ್ತಾನಿ ಜನರಿಗೆ "ಭುಟ್ಟೊ ವಂಶದವರು ಅಕಾಲಿಕ ಸಾವನ್ನು ಕಾಣುತ್ತಾರೆ" ಎಂಬುದು ಗೊತ್ತಿದ್ದರೂ ಬೆನಜೀರ್‌ಳ ಸಾವು ಆಘಾತವನ್ನುಂಟುಮಾಡಿತು. ಆ ಕಾರಣಕ್ಕಾಗಿಯೇ ಆಕೆಯ ಶವಪೆಟ್ಟಿಗೆಯನ್ನು ರಾವಲ್ಪಿಂಡಿ ಆಸ್ಪತ್ರೆಯಿಂದ ಹೊತ್ತೊಯ್ಯುವಾಗಲೂ ಅವರೆಲ್ಲ "ಭುಟ್ಟೊ ಜಿಂದಾ ಹೈ" ಎಂದೇ ಉದ್ಗಾರವೆತ್ತಿದರು...

ವಿಪರ್ಯಾಸವೆಂದರೆ, ಎರಡು ಬಾರಿ ಪಾಕಿಸ್ತಾನದ ಪ್ರಧಾನಿಯಾಗಿದ್ದ ಬೆನಜೀರ್‌ಳ ಶವಪೆಟ್ಟಿಗೆಯ ಮೇಲೆ ಆ ದೇಶದ ರಾಷ್ಟ್ರಧ್ವಜವಿರಲಿಲ್ಲ; ಆಕೆ ನೇತೃತ್ವ ವಹಿಸಿಕೊಂಡಿದ್ದ ಪಾಕಿಸ್ತಾನ್ ಪೀಪಲ್ಸ್ ಪಕ್ಷದ ಕೆಂಪು-ಕಪ್ಪು ಮತ್ತು ಬಿಳಿ ಬಣ್ಣದ ಧ್ವಜವೂ ಇರಲಿಲ್ಲ. ಬದಲಾಗಿ ಆಕೆ ಎಂದಿಗೂ ಗುರುತಿಸಿಕೊಳ್ಳುತ್ತಿದ್ದ ಸಿಂಧ್ ಪ್ರದೇಶದ ಗ್ರಾಮೀಣ ಜನರ ಬದುಕಿನ ಅಂಗವಾದ ಕೆಂಪು ಮತ್ತು ಕಪ್ಪು ಬಣ್ಣಗಳನ್ನು ಹೊಂದಿದ್ದ ಒಂದು ಬಟ್ಟೆಯನ್ನು ಹೊದಿಸಲಾಗಿತ್ತು. ಸಿಂಧ್ ಪ್ರಾಂತ್ಯದ ಮಗಳೊಬ್ಬಳು ತನ್ನ ಸಾವಿನೊಂದಿಗೆ ತನ್ನ ಜನರ ಆಶಯಗಳನ್ನು ದಫನ್ ಮಾಡಿದ್ದರೂ ಅವರ ಬದುಕಿನ ಬಣ್ಣಗಳನ್ನು ಹೊದ್ದು ತನ್ನ ಸಮಾಧಿಯತ್ತ ಹೀಗೆ ಸಾಗಿದ್ದಳು.....

ಭಯೋತ್ಪಾದಕನ ಬಂದೂಕಿನ ಗುಂಡೇಟಿ[illegible] ಯಾಗುವ ಒಂದು ವಾರದ ಮುನ್ನ ಬೆನಜೀರ್‌ಳನ್ನು ಅದೆಂತಹ ಮುನ್ಸೂಚನೆ ಕಾಡಿತ್ತೋ ಏನೋ. "ನನ್ನಪ್ಪ ಮತ್ತು ವಂಶದ[illegible]ಲ್ಲರ ಸಮಾಧಿಗಳಿರುವ ಲರ್ಖಾನದಲ್ಲಿನ ಗಡಿ ಖುದಾ ಭಕ್ಸ್‌ಗೆ ಹೋಗಬೇಕೆನ್ನಿಸುತ್ತಿದೆ" ಎಂಬ ಆಶೆ ವ್ಯಕ್ತಪಡಿಸಿದ್ದಳು. ಹಾಗೆಯೇ ಚುನಾವಣಾ ಪ್ರಕ್ರಿಯೆಯ ಗದ್ದಲಗಳ ನಡುವೆಯೂ ಸ್ವಲ್ಪ ಬಿಡುವು ಮಾಡಿಕೊಂಡು ಆರು ದಿನಗಳ ಹಿಂದೆಯಷ್ಟೇ (ಡಿಸೆಂಬರ್ 22 ರಂದು) ಗಡಿ ಖುದಾ ಭಕ್ಸ್‌ನಲ್ಲಿ ಹಾಜರಾಗಿದ್ದಳು. ಅಂದು ತನ್ನ ಅಪ್ಪನ ಸಮಾಧಿಯ ಹತ್ತಿರ ಎರಡು ಗಂಟೆಗಳ ಕಾಲ ಕೂತು ಪ್ರಾರ್ಥಿಸಿದಳು, ಕುರ್‌ಆನ್‌ನಿನ ಸಾಲುಗಳನ್ನು ಪಠಿಸಿದಳು. ಅಂದು ಆಕೆ ಕೂತಿದ್ದ ಸ್ಥಳದಲ್ಲೇ ಒಂದು ವಾರದಲ್ಲಿ ಆಕೆಯೂ ಮಣ್ಣು ಸೇರುತ್ತಾಳೆಂದು ಬೆನಜೀರ್‌ಗಾಗಲೀ, ಪ್ರಪಂಚಕ್ಕಾಗಲೀ ಗೊತ್ತಿರಲಿಲ್ಲ.



ಶವಪೆಟ್ಟಿ ಸೇರಿದ ಬೆನಜೀರ್

ತನ್ನ ಪ್ರೀತಿಯ ಅಪ್ಪ, ಒಡಹುಟ್ಟಿದ ಇಬ್ಬರು ಸಹೋದರರ ನಡುವೆ ಬೆನಜೀರ್ ಭೂಮಿಯ ಒಡಲನ್ನು ಹೊಕ್ಕಾಗ ಆಕೆಯ ತಾಯಿ ನುಸ್ರತ್ ದುಬೈನಲ್ಲೇ ಇದ್ದಳು. ಯಾಕೆಂದರೆ ತಾನು ಹೆತ್ತ ಮೊದಲು ಕೂಸು, ತನ್ನ ಪ್ರೀತಿಯ ಮಗಳು ಸತ್ತಿದ್ದಾಳೆಂಬುದಿರಲಿ ತನಗೆ ಬೆನಜೀರ್ ಎಂಬ ಮಗಳಿದ್ದಳು ಎಂಬುದನ್ನೇ ಈಗ ನುಸ್ರತ್ ಮರೆತಿದ್ದಾಳೆ. ಆಕೆಗೀಗ ಅಂತಾ ಅನಾರೋಗ್ಯ.

ಬೆನಜೀರ್‌ಳನ್ನು ಕೊಂದದ್ದು ಯಾರು? ಅಲ್ ಖಯಿದಾದ ಸದಸ್ಯರೇ ಅವಳನ್ನು ಮುಗಿಸಿದರೇ? ಅವರಿಗೆ ಮುಷರಫ್ ಸರ್ಕಾರದ ನೆರವಿತ್ತೇ? "ಅಬ್ಬು ರೆಹಮಾನ್ ಸಿಂಧಿ ಎಂಬ ಹಂತಕ ನನ್ನನ್ನು ಕೊಲ್ಲಲು ಸಂಚು ರೂಪಿಸುತ್ತಿದ್ದಾನೆ" ಎಂದು ಬೆನಜೀರ್ ಪಾಕಿಸ್ತಾನದ ಸರ್ಕಾರಕ್ಕೆ ಮುಂಚಿತವಾಗಿಯೇ ತಿಳಿಸಿದ್ದರೂ ಆಕೆ ಪಾಕಿಸ್ತಾನಕ್ಕೆ ಹಿಂದಿರುಗುವ ಕೆಲವೇ ದಿನಗಳ [illegible] ಸಿಂಧಿ ಎಂಬಾತನನ್ನು ಜೈಲಿನಿಂದ ನಿಗೂಢವಾಗಿ ಬಿಡು[illegible] ಗೊಳಿಸಿದ್ದು ಯಾರು? "ಚುನಾವಣೆಗಳ ಮುನ್ನ [illegible] ಹತ್ಯೆಯಾದರೆ ಅದಕ್ಕೆ ಮುಷರಫ್‌ನೇ ಕಾರಣ [illegible] ಈಗಲೇ ಬರೆದಿಟ್ಟುಕೊಳ್ಳಿ" ಎಂದು ಬೆನಜೀರ್ ಯ[illegible] ಆಧಾರದ ಮೇಲೆ ಹೇಳಿದ್ದಳು?

..... ಈ ಯಾವ ಪ್ರಶ್ನೆಗಳಿಗೂ ಉತ್ತರ ಸಿಗಲಾ[illegible] ಆದರೆ ಬೆನಜೀರ್‌ಳ ಸಾವಿನಿಂದ ಪಾಕಿಸ್ತಾನಕ್ಕೆ [illegible] ಆಗಿರುವುದಂತೂ ಸತ್ಯ. ಹೌದು, ಆಕೆ ಪ್ರಾಮಾಣಿಕ [illegible] ಕಾರಣಿ ಆಗಿರಲಿಲ್ಲ. ಆಕೆ ಪಾಕಿಸ್ತಾನದ ಜನರಿಗೆ ನಿ[illegible] ಪ್ರಮಾಣಗಳನ್ನು ಉಳಿಸಿಕೊಂಡಿರಲಿಲ್ಲ. ಆಕೆ ಪಾಕಿಸ್ತಾ[illegible] ಕಾಡುತ್ತಿರುವ ಸಮಸ್ಯೆಗಳಿಗೆ ಪರಿಹಾರವಾಗುವ ಬದ[illegible] ತಾನೇ ಹಲವು ತೊಂದರೆಗಳಿಗೆ ಕಾರಣಳಾಗಿದ್ದಳು.

ಆದರೂ ಬೆನಜೀರ್ ಪಾಕಿಸ್ತಾನದ ದಿಟ್ಟೆ[illegible] ಮಗಳಾಗಿದ್ದಳು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮ[illegible] ಯೊಬ್ಬಳು ತನ್ನ ವ್ಯಕ್ತಿತ್ವವನ್ನು ಕಾಪಾಡಿಕೊಂಡೇ [illegible] ಸ್ಥಾನವನ್ನು ಅಲಂಕರಿಸಬಹುದೆಂದು ಸಾಬೀತುಪಡಿಸಿ[illegible] ಮುಸಲ್ಮಾನ ಮಹಿಳೆಯಾಗಿದ್ದರೂ ಮುಲ್ಲಾ-ಮ[illegible] ಮಿಲಿಟರಿ ಎಂಬ ಮೂರು `M'ಗಳನ್ನು ಎದುರು[illegible] ಕೊಂಡಿದ್ದಳು. ಕೊನೆಗೆ ಆ ಕಾರಣಕ್ಕಾಗಿಯೇ ತನ್ನ [illegible] ತೆತ್ತಳು.....

ಬೆನಜೀರ್ ಬಗ್ಗೆ ಹಲವಾರು ಟೀಕೆಗಳಿದ್ದರೂ [illegible] ಅಸಮಾನ್ಯ ಮಹಿಳೆಯಾಗಿದ್ದಳು ಎಂಬುದರ ಬಗ್ಗೆ [illegible] ಮಾತಿಲ್ಲ. ಇಂತಹ ಮಹಿಳೆ ಸಂದರ್ಶನವೊಂದರಲ್ಲಿ [illegible] ಹೇಳಿದ್ದಳು: "ನಾನು ವಿಧಿಯ ಮಗಳೂ ಹೌದು, ಪ[illegible] ಸಂಸ್ಕೃತಿಯ ಕೂಸೂ ಹೌದು. ಯಾಕೆಂದರೆ ನನ್ನ ಅಂತರ[illegible] ಆಶಯಗಳ ವಿರುದ್ಧವಾಗಿ ವಿಧಿ ನನ್ನನ್ನು ಇಂತಹ ಪರಿ[illegible] ದೂಡಿತು. ಆದರೆ ಅದನ್ನು ತ್ಯಜಿಸಬಹುದಿತ್ತು, [illegible] ಮಾಡದೆ ಸ್ವಯಂ ಇಚ್ಛೆಯಿಂದ ಪರಿಸ್ಥಿತಿಯನ್ನು ಎದುರಿ[illegible] ನಿರ್ಧರಿಸಿದೆ. ನನ್ನ ತಂದೆಯ ಲೆಗಸಿಯನ್ನು ಮು[illegible] ವರಿಸುವ ಮತ್ತು ಜನರಿಗೆ ಅವರು ನೀಡಿದ್ದ ಭರವಸೆ[illegible] ಪೂರೈಸುವ ಕರ್ತವ್ಯ ನನ್ನದ್ದಾಗಿತ್ತು. ನನಗೆ ಬೇರೆ [illegible] ಯಾವುದಿತ್ತು? ಪೌರಾತ್ಯ ಸಂಸ್ಕೃತಿಗೆ ಜನಿಸಿದ ನ[illegible] ಅದರಿಂದಲೇ ರೂಪಗೊಂಡವಳು ಮತ್ತು [illegible] ರಾಜಕೀಯಕ್ಕೆ ದೂಡಲ್ಪಟ್ಟವಳು. ಇಲ್ಲಿ ನಾನು [illegible] ಜಯಿಸಬೇಕು ಇಲ್ಲ ಸ[illegible] ಬೇಕು. ಅದಕ್ಕಿಂತ ಮುಖ್ಯ [illegible] ನನ್ನಂತೆಯೇ ಪೌರಾತ್ಯ ಸ[illegible] ಯಲ್ಲಿ ಜನಿಸಿರುವ ಇತರೆ ಮ[illegible] ಯರಿಗೆ ನಾನು ಆದರ್ಶ [illegible] ಬೇಕು. ಇಲ್ಲಿನ ಸಂಪ್ರದಾ[illegible] ಪರಿಸರ, ಸಾಮಾಜಿಕ [illegible] ಗಳಿಂದಾಗಿ ಇದೇ ತಮ್ಮ [illegible] ಬರಹ ಎಂದು ತಮಗೆ ಇಷ್ಟ[illegible] ದಕ್ಕೆ ಬಲಿಯಾಗಬೇಡಿರೆಂದು ಮಹಿಳೆಯರಿಗೆ ತಿಳಿಸ[illegible] ರಾಜಕಾರಣಿ-ಮಹಿಳೆ-ತಾಯಿಯಾಗಿ ನಾನು ಹೋರಾ[illegible] ರೀತಿ ಮತ್ತು ನನ್ನ ಅಸ್ತಿತ್ವವನ್ನು ಕಾಪಾಡಿ ಕೊಳ್ಳುವ [illegible] ಅವರಿಗೆ ಮಾರ್ಗದರ್ಶನವಾಗಬೇಕು. ನನ್ನ ಬದುಕಿನಿಂ[illegible] ಹೇಗೆ ಎಲ್ಲಾ ಒತ್ತಡಗಳನ್ನು ಮೀರಿ ನಿಲ್ಲಬಹುದೆಂ[illegible] ತಮ್ಮ ತಂದೆ, ಸಹೋದರ ಅಥವಾ ಗಂಡ ತಮ್ಮ ಪರ[illegible] ಆಯ್ಕೆ ಮಾಡದೆ ಮಹಿಳೆಯರೇ ತಮ್ಮ ಬದ[illegible] ಆಯ್ಕೆಗಳನ್ನು ಮಾಡಿಕೊಳ್ಳಬಹುದೆಂದೂ ತೋರಿಸಬೇ[illegible]

ಪಾಕಿಸ್ತಾನದ ಧಾರ್ಮಿಕ ಹಾಗೂ ಪುರುಷಪ್ರ[illegible] ವ್ಯವಸ್ಥೆಯ ನಿರ್ಬಂಧಗಳನ್ನು ದಾಟುತ್ತಲೇ ಒಂದಿಡೀ ದ[illegible] ಪ್ರಜಾಪ್ರಭುತ್ವದ ಕನಸುಗಳನ್ನು ಸಾಧಿಸಲು ಹೋರಾಡಿದ[illegible] ಬೆನಜೀರ್. ಆದರೆ ಬೆನಜೀರ್‌ಳ ಇಚ್ಛಾಶಕ್ತಿ, ಸಾವ[illegible] ಗಳಿಗಿಂತಾ ಇವಳ ಶತ್ರುಗಳೇ ಬಲಿಷ್ಠರಾಗಿದ್ದರು. ಅ[illegible] ಬೆನಜೀರ್ ರಕ್ತ ಬೇಕಿತ್ತು.

ಈ ಕಾರಣಗಳಿಗಾಗಿ ಬೆನಜೀರ್ ಕೇವಲ ಪಾಕಿಸ[illegible] ಮಗಳಲ್ಲ, ಬರೀ ಭುಟ್ಟೊ ವಂಶದ ಕುಡಿ[illegible] ಹೋರಾಟಗಾರ್ತಿ ಮಾತ್ರವಲ್ಲ, ಬದಲಾಗಿ [illegible] ಸಹೋದರಿ ಬೆನಜೀರ್.

ಈಕೆಗೆ ವಿದಾಯ...

(ಮುಗಿ[illegible]

ಪ್ರವಚನಕಾರನ ಕಾಮಾಯಣ !

ಸಹಪಂಕ್ತಿಭೋಜನ ಮತ್ತು ಮದುವೆ ಸಂಬಂಧಕ್ಕೆ ಮಾತ್ರ ಜಾತಿ ಭೇದ. ಅನೈತಿಕ ಸಂಬಂಧಕ್ಕೆ ಯಾವ ಜಾತಿಭೇದವೂ ಇಲ್ಲ ಎನ್ನುವುದನ್ನು ಉಡುಪಿಯ ಅಷ್ಟಮಠಗಳ ಅಧಿಕೃತ ಪ್ರವಚನಕಾರ ಮತ್ತು ಹಿಂದೂ ಧರ್ಮ ಹಾಗೂ ಸಂಸ್ಕೃತಿಗಳ ವಕ್ತಾರನೋರ್ವ ದೃಢಪಡಿಸಿಬಿಟ್ಟಿದ್ದಾನೆ. ಕಾಮಕ್ಕೆ ಕಣ್ಣಿಲ್ಲ ಎಂಬುದಕ್ಕೆ ಇದೇ 'ವಿದ್ವಾಂಸ' ತಾನೇ ಸ್ವತಃ ಪುರಾವೆಯಾಗಿ ಜಗಜ್ಜಾಹೀರುಪಡಿಸಿದ್ದಾನೆ. ಇದಕ್ಕಾಗಿ ಇತ್ತೀಚೆಗಷ್ಟೇ ಈತ ಜೈಲು ಕಂಬಿಯನ್ನೂ ಎಣಿಸಿಬಂದಿದ್ದಾನೆ.

ಈತನ ಹೆಸರು ರಾಮನಾಥಾಚಾರ್ಯ, ವಯಸ್ಸು 45. ದಿವಂಗತ ಹಯಗ್ರೀವ ಆಚಾರ್ಯರ ಎರಡನೇ ಮಗನಾಗಿರುವ ರಾಮನಾಥಾಚಾರ್ಯ, ಉಡುಪಿ ಸಮೀಪದ 76 ಬಡಗುಬೆಟ್ಟು ಗ್ರಾಮದ ಮುಚ್ಲಲ್ ಕೋಡು ಎಂಬಲ್ಲಿರುವ 1-146 ನಂಬರ್‌ನ ಮನೆಯಲ್ಲಿರುತ್ತಾನೆ.

ಎರಡು ತಿಂಗಳ ಹಿಂದಿನವರೆಗೂ ಈ ಮನೆಯಲ್ಲಿ ವಾಸವಿದ್ದವರು ರಾಮನಾಥಾಚಾರ್ಯ, ಈತನ ಪತ್ನಿ ಶ್ರೀಮತಿ ವಾಣಿ (48), ಮಕ್ಕಳಾದ ವಸುಪ್ರದಾ (12) ಹಾಗೂ ಅಕ್ಷರದಾ (9).

ಈಗ ಈ ಮನೆಯಲ್ಲಿ ಒಂದು ಬದಲಾವಣೆಯಾಗಿದೆ. ಕಳೆದ ಹದಿನಾಲ್ಕು ವರ್ಷಗಳ ಕಾಲ ರಾಮನಾಥಾಚಾರ್ಯನೊಂದಿಗೆ ಸುಖವಾಗಿ ಸಂಸಾರ ನಡೆಸುತ್ತಿದ್ದ ವಾಣಿಯ ಸ್ಥಾನವನ್ನು ಕುಮಾರಿ ಪ್ರತಿಭಾ ಎಂಬಾಕೆ ತುಂಬಿದ್ದಾಳೆ. ವಾಣಿ ಬೀದಿಗೆ ಬಿದ್ದಿದ್ದಾಳೆ.

ಕಟ್ಟಿಕೊಂಡವಳನ್ನು ಮನೆಯಿಂದ ಹೊರಗೆ ಹಾಕಿ, ಇನ್ನೊಬ್ಬಳನ್ನು ಇಟ್ಟುಕೊಂಡಿರುವ ರಾಮನಾಥಾಚಾರ್ಯ ಸಾಮಾನ್ಯನೇನೂ ಅಲ್ಲ.

ಬನ್ನಂಜೆ ಶಿಷ್ಯ!

ಅಷ್ಟಮಠಗಳ ಆಸ್ಥಾನ ವಿದ್ವಾಂಸ, ಕೆಲವು ಮಠಾಧೀಶರ ಗುರು, 'ವಿದ್ಯಾವಾಚಸ್ಪತಿ' ಬಿರುದಾಂಕಿತ, ಹಿರಿಯ ಪ್ರವಚನಕಾರ ಬನ್ನಂಜೆ ಗೋವಿಂದಾಚಾರ್ಯರ ಪರಮಾಪ್ತ ಶಿಷ್ಯನೇ ರಾಮನಾಥಾಚಾರ್ಯ.

ಪರ್ಯಾಯ ಪುತ್ತಿಗೆ ಮಠ ಪ್ರಕಟಿಸುವ 'ಸುಗುಣಮಾಲಾ' ಎಂಬ ಧಾರ್ಮಿಕ, ಸಾಂಸ್ಕೃತಿಕ ಮತ್ತು ವೈಚಾರಿಕ ಮಾಸ ಪತ್ರಿಕೆಯ ಸಲಹಾ ಮಂಡಳಿ ಸದಸ್ಯನಾಗಿರುವ ರಾಮನಾಥಾಚಾರ್ಯ, ಅಷ್ಟಮಠಗಳ ಅಧಿಕೃತ ಪ್ರವಚನಕಾರ.

ಹಿಂದೂ ಧರ್ಮದ ಪ್ರವಚನಕಾರನಾಗಿ ಊರೂರು ಅಲೆದು ಪ್ರವಚನ ನೀಡುವುದೇ ಈತನ ಉದ್ಯೋಗ. ಕಳೆದ ವರ್ಷದವರೆಗೆ ಕೃಷ್ಣ ದೇವಾಲಯದ ಚಂದ್ರಶಾಲೆಯಲ್ಲಿ (ಗರ್ಭಗುಡಿ ಮುಂಭಾಗದಲ್ಲಿ) ಪ್ರತಿದಿನ ಎಂಬಂತೆ ಪ್ರವಚನ ನೀಡುತ್ತಿದ್ದವನು ಈತನೇ.

ನಾರಾಯಣಾಚಾರ್ಯ ಎಂಬ ವೈಷ್ಣವ ಮತ ಪ್ರಚಾರಕ ಬರೆದ 'ಶ್ರೀಮಧ್ವ ವಿಜಯ' ಎನ್ನುವ ಪುಸ್ತಕದ ಮೇಲೆ ಕೃಷ್ಣ ದೇವಾಲಯದ ಚಂದ್ರಶಾಲೆಯಲ್ಲಿ ಕಳೆದ ಹಲವು ವರ್ಷಗಳಿಂದ ತಿಂಗಳಿಗೊಂದು ಬಾರಿ ನಿರಂತರವಾಗಿ ಒಂದೆರಡು ವಾರ ಕಾಲ ಪ್ರವಚನ ಕೊಟ್ಟೇ ಪ್ರಸಿದ್ಧಿ ಪಡೆದಿರುವುದು ರಾಮನಾಥಾಚಾರ್ಯನ ಬಹುದೊಡ್ಡ ಸಾಧನೆ.

ನಾರಾಯಣಾಚಾರ್ಯರ 'ಮಧ್ವ ವಿಜಯ' ಕೃತಿಯನ್ನು ಮುಂದಿಟ್ಟುಕೊಂಡು ರಾಮನಾಥಾಚಾರ್ಯನ ವ್ಯಾಖ್ಯಾನ ಪ್ರತಿನಿತ್ಯ ಸಾಗುತ್ತಿದ್ದುದು ಹೀಗೆ. ಆದಿಶಂಕರನು ರಾಕ್ಷಸನ ಅವತಾರವು, ದೈತ್ಯ ಶಂಕರನು ಬೆಕ್ಕಿನ ಗುಣದವನು, ಮಂಗನ ಸ್ವಭಾವದವನು, ನಾಯಿಯ ಬುದ್ಧಿಯವನು.

ಕಾಮಾಯಣ....

1993 ರಲ್ಲಿ ವಾಣಿಯನ್ನು ವಿವಾಹವಾದ ರಾಮನಾಥಾಚಾರ್ಯ ಎರಡು ವರ್ಷದ ಹಿಂದಿನವರೆಗೂ ಸರಿಯಾಗಿಯೇ ಇದ್ದ.

ಅಷ್ಟಮಠಗಳ ಅಧಿಕೃತ ಪ್ರವಚನಕಾರನನ್ನು ಮಂಗಳೂರಿನ ಸಂಸ್ಥೆಯೊಂದು 2007 ರ ಡಿಸೆಂಬರ್‌ನಲ್ಲಿ ತಿಂಗಳ ಮಟ್ಟಿಗೆ ಪ್ರವಚನ ಕೊಡಲು ಆಹ್ವಾನಿಸಿ 'ಗುತ್ತಿಗೆ' ಪಡೆದಿತ್ತು.

ಮಂಗಳೂರಿನಲ್ಲಿ ಪ್ರವಚನ ಕೊಡುತ್ತಾ ಕೊಡುತ್ತಾ... ಪ್ರವಚನ ಕೇಳಲು ದಿನನಿತ್ಯ ಬರುತ್ತಿದ್ದ ಅವಿವಾಹಿತ ಯುವತಿಯೋರ್ವಳನ್ನು ಆಕರ್ಷಿಸುವಲ್ಲಿ ಯಶಸ್ವಿಯಾದ್ದಾನೆ ರಾಮನಾಥಾಚಾರ್ಯ.

ಈ ಯುವತಿಯ ಹೆಸರು ಕು.ಪ್ರತಿಭಾ (30 ವರ್ಷ). ಈಕೆ ತಾಯಿ ರತ್ನಾಬಾಯಿಯೊಂದಿಗೆ ಪ್ರವಚನ ಕೇಳಲು ಬರುತ್ತಿದ್ದವಳು. ರಾಮನಾಥಾಚಾರ್ಯನ ಪ್ರವಚನ ಪಾಂಡಿತ್ಯಕ್ಕೆ ಆಕರ್ಷಿತಳಾದಳು. ಪರಸ್ಪರ ಪರಿಚಯವೂ ಬೆಳೆಯಿತು.

ಮಂಗಳೂರಿನ ಬಗ್ಗುಂಡ್ಡೆ ನಿವಾಸಿಯಾದ ಪ್ರತಿಭಾ ಗರಿಷ್ಠ ಸಂಗಡಕ್ಕೆ ಸೇರಿದ್ದು ವೈದಿಕ ವಿದ್ವಾಂಸ ರಾಮನಾಥಾಚಾರ್ಯನೊಂದಿಗೆ ಸನಾತನ ಧರ್ಮದ ಬಗ್ಗೆ ಚರ್ಚಿಸುತ್ತಾ, ಪ್ರವಚನದ ವಿಷಯದ ಮೇಲೆ ಚರ್ಚೆ ನಡೆಸತೊಡಗಿದಳು. ಈ ಮಾತುಕತೆಗಳೇ ಇಬ್ಬರೊಳಗೆ ಪರಸ್ಪರ ಪ್ರೇಮಾಂಕುರಕ್ಕೆ ಕಾರಣವಾಯಿತಂತೆ.

"ನಾನು ಹಿಂದಿನ ಜನ್ಮದಲ್ಲಿ 'ಶಿವ' ಆಗಿದ್ದೆ, ನೀನು 'ಪಾರ್ವತಿ' ಆಗಿದ್ದಿ. ಮತ್ತೆ ನಾವಿಬ್ಬರು ಪುನರ್ಜನ್ಮ ತಾಳಿ ಇದೀಗ ಪೂರ್ವಯೋಜಿತವಾಗಿ ಒಂದಾಗಿದ್ದೇವೆ" ಎಂದು ಇಬ್ಬರು ಹೆಣ್ಣುಮಕ್ಕಳ ತಂದೆ ರಾಮನಾಥಾಚಾರ್ಯ ಹೊಡೆದ 'ಡೈಲಾಗ್'ನ್ನು ಪ್ರತಿಭಾ ಸಂಪೂರ್ಣವಾಗಿ ನಂಬಿದ್ದಾಳೆ.

ಪ್ರತಿಭಾಳಿಂದ ಜಾತಕ ಪಡೆದು ಆಕೆಯ ಜಾತಕ ಮತ್ತು ತನ್ನ ಜಾತಕವನ್ನು ಜ್ಯೋತಿಷಿಗೆ ತೋರಿಸಿದ್ದೇನೆಂದು ಹೇಳಿಕೊಂಡು, "ಜಾತಕ ಚೆನ್ನಾಗಿದೆ. ನಾವಿಬ್ಬರೂ ಮತ್ತೆ ಒಂದಾಗಿರುವುದು ಪೂರ್ವನಿರ್ಧರಿತ. ಹಿಂದಿನ ಜನ್ಮದಲ್ಲಿ ನಾವಿಬ್ಬರು ಶಿವ-ಪಾರ್ವತಿ ಆಗಿದ್ದೆವು ಎನ್ನುವುದು ಜಾತಕದಲ್ಲೂ ಕಂಡುಬಂದಿದೆ" ಎಂದು ಸುಳ್ಳಿನ ತಲೆ ಮೇಲೆ ಮೊಳೆ ಹೊಡೆದಂತೆ ರೈಲು ಬಿಟ್ಟಿದ್ದಾನೆ ರಾಮನಾಥಾಚಾರ್ಯ.

ಮಂಗಳೂರಿನಲ್ಲಿ ಪ್ರವಚನದ ಗುತ್ತಿಗೆಯ ಅವಧಿ ಮುಗಿದ ಬೆನ್ನಿಗೆ ರಾಮನಾಥಾಚಾರ್ಯ ಪ್ರತಿಭಾಳನ್ನು ತನ್ನ ಕಾರ್ಯದರ್ಶಿಯನ್ನಾಗಿ ಮಾಡಿಕೊಂಡಿದ್ದಾನೆ.

> ಸಹಪಂಕ್ತಿಭೋಜನ ಮತ್ತು ಮದುವೆ ಸಂಬಂಧಕ್ಕೆ ಮಾತ್ರ ಜಾತಿ ಭೇದ, ಅನೈತಿಕ ಸಂಬಂಧಕ್ಕೆ ಇದು ಅನ್ವಯಿಸುವುದಿಲ್ಲ ಎನ್ನುವುದನ್ನು ಉಡುಪಿಯ ಅಷ್ಟಮಠಗಳ ಅಧಿಕೃತ ಪ್ರವಚನಕಾರ ಮತ್ತು ಹಿಂದೂ ಧರ್ಮ ಹಾಗೂ ಸಂಸ್ಕೃತಿಗಳ ವಕ್ತಾರನೋರ್ವ ದೃಢಪಡಿಸಿಬಿಟ್ಟಿದ್ದಾನೆ. ಕಾಮಕ್ಕೆ ಕಣ್ಣಿಲ್ಲ ಎಂಬುದನ್ನು ಈ 'ವಿದ್ವಾಂಸ' ತಾನೇ ಸ್ವತಃ ಪುರಾವೆಯಾಗಿ ಜಗಜ್ಜಾಹೀರುಪಡಿಸಿದ್ದಾನೆ. ಇದಕ್ಕಾಗಿ ಇತ್ತೀಚೆಗಷ್ಟೇ ಈತ ಜೈಲು ಕಂಬಿಯನ್ನೂ ಎಣಿಸಿಬಂದಿದ್ದಾನೆ.

ಪಲಿಮಾರು ಮಠದ ವಿದ್ಯಾಧೀಶತೀರ್ಥರು ರಾಮನಾಥಾಚಾರ್ಯ ಹಾಗೂ ಪ್ರತಿಭಾ ಎಂಬ ಅನಧಿಕೃತ ಜೋಡಿಗೆ ಪಲಿಮಾರು ಮೂಲ ಮಠದಲ್ಲಿ ಒಂದು ಕಚೇರಿಯನ್ನು ದಯಪಾಲಿಸಿದರು.

ರೋಗಿ ಬಯಸಿದ್ದು ಹಾಲು ಹಣ್ಣು ವೈದ್ಯ ಕೊಟ್ಟದ್ದೂ ಹಾಲು ಹಣ್ಣು ಎಂಬಂತೆ ಬೆಳಗ್ಗಿನಿಂದ ಸಂಜೆವರೆಗೆ ರಾಮನಾಥಾಚಾರ್ಯ-ಪ್ರತಿಭಾ ಇಬ್ಬರೂ ಪಲಿಮಾರು ಮೂಲ ಮಠದಲ್ಲಿ ಪರಸ್ಪರ ಸರಸ-ಸಲ್ಲಾಪ, ಚಕ್ಕಂದದಲ್ಲಿ ಪ್ರಪಂಚವನ್ನೇ ಮರೆತುಬಿಟ್ಟರು. ಪಲಿಮಾರು ಮೂಲ ಮಠ ಉಡುಪಿ ತಾಲ್ಲೂಕಿನ ಪಡುಬಿದ್ರಿ ಬಳಿ ಇದೆ.

ಪ್ರತಿಭಾಳ ತಂದೆ-ತಾಯಿ ಅಂಚೆ ಇಲಾಖೆಯ ನಿವೃತ್ತ ಉದ್ಯೋಗಿಗಳು. ಅವಿವಾಹಿತ ಮಗಳು ಕೈಬಿಟ್ಟು ಹೋಗುತ್ತಿರುವುದು ಹೆತ್ತವರ ಗಮನಕ್ಕೆ ಬಂದು ಇನ್ನು ಸಹಿಸಲು ಅಸಾಧ್ಯ ಎಂಬ ಸ್ಥಿತಿ ನಿರ್ಮಾಣವಾಗ ಕೆಲಸಕ್ಕೆ ಕಳಿಸುವುದನ್ನು ಮನೆಯವರು ನಿಲ್ಲಿಸಿದರು. ಅತ್ತ ರಾಮನಾಥಾಚಾರ್ಯನಿಗೆ ಚಡಪಡಿಕೆ. ಇತ್ತ ಪ್ರತಿಭಾಳಿಗೆ ವಿರಹ ವೇದನೆ.

ಪ್ರಕರಣ ಉಡುಪಿ ನಗರ ಪೊಲೀಸ್ ಠಾಣೆಯ ಮೆಟ್ಟಿಲು ಹತ್ತಿತು. ಕೋರ್ಟ್ ಕಟ್ಟೆಯನ್ನೂ ಏರಿತು.

ಹೆತ್ತವರು ತನ್ನನ್ನು ಗೃಹಬಂಧನದಲ್ಲಿರಿಸಿದ್ದಾರೆ ಎಂದು ಆರೋಪಿಸಿ ಪ್ರತಿಭಾಳಿಂದ ತನ್ನ ಹೆಸರಿಗೆ ಪತ್ರ ಬರೆಸಿಕೊಂಡ ರಾಮನಾಥಾಚಾರ್ಯ, ಪತ್ರವನ್ನು ಕೋರ್ಟ್‌ಗೆ ಹಾಜರುಪಡಿಸಿ ಸರ್ಚ್ ವಾರೆಂಟ್ ಹೊರಡಿಸುವಲ್ಲಿ ಯಶಸ್ವಿಯಾಗಿಬಿಟ್ಟ.

ಪ್ರತಿಭಾ ಕೋರ್ಟ್‌ಗೆ ಬಂದು ಕಟಕಟೆ ಹತ್ತಿಬಿಟ್ಟಳು. ರಾಮನಾಥಾಚಾರ್ಯ ಹಿಂದಿನ ಜನ್ಮದಲ್ಲಿ ತನಗೆ ಗಂಡನಾಗಿದ್ದನೆಂದು, ತಾನು ಹಿಂದಿನ ಜನ್ಮದಲ್ಲಿ ಪಾರ್ವತಿಯಾಗಿದ್ದರೆ, ರಾಮನಾಥಾಚಾರ್ಯ ಶಿವ ಆಗಿದ್ದ, ಮತ್ತೆ ನಾವು ಒಂದಾಗಿದ್ದೇವೆ. ಒಟ್ಟಿಗಿರಲು ಬಿಡಿ ಎಂದು ನ್ಯಾಯಾಧೀಶರೆದುರು ಅಂಗಲಾಚಿದಳು.

ಕೋರ್ಟ್, ನಿಟ್ಟೂರಿನಲ್ಲಿರುವ ರಿಮಾಂಡ್ ಹೋಮ್‌ಗೆ ಕಳಿಸಿದರೆ, ಪ್ರತಿಭಾ ಉದ್ಯೋಗಸ್ಥ ಮಹಿಳೆಯರ ವಸತಿಗೃಹ (ಬಂಟ್ಸ್ ಹಾಸ್ಟೆಲ್)ಕ್ಕೆ ಸೇರಿದಳು. ಇಲ್ಲಿಂದಲೇ ರಾಮನಾಥಾಚಾರ್ಯನ ಕಾರ್ಯದರ್ಶಿಯ ಕೆಲಸಕ್ಕೆ ಹೋಗಿ ಬರಲಾರಂಭಿಸಿದಳು.

ಒಂದು ಕಡೆ ಹೀಗಾದರೆ, ಇನ್ನೊಂದು ಕಡೆ ಪ್ರತಿಭಾಳ ಹೆತ್ತವರು ರಾಮನಾಥಾಚಾರ್ಯನ ವಿರುದ್ಧ ದಲಿತ ದೌರ್ಜನ್ಯ ತಡೆಕಾಯ್ದೆಯನ್ವಯ ಪ್ರಕರಣ ದಾಖಲಿಸಿದರು.

ಅಂದಿನ ಜಿಲ್ಲಾ ಉಸ್ತುವಾರಿ ಸಚಿವ ಡಾ. ವಿ.ಎಸ್. ಆಚಾರ್ಯ ಹಾಗು ಕೆಲವು ಮಠಾಧೀಶರ ಒತ್ತಡದಿಂದಾಗಿ ರಾಮನಾಥಾಚಾರ್ಯನ ವಿರುದ್ಧದ ಅಟ್ರಾಸಿಟಿ ಕೇಸು ತೆರೆಮರೆಗೆ ಸರಿಯಿತು.

ಸೂತ್ರದ ಗೊಂಬೆಯಾದ ವಾಣಿ

ಕಳೆದ ಎರಡು ವರ್ಷದಿಂದ ತನ್ನ ಪತ್ನಿ ವಾಣಿಗೆ ರಾಮನಾಥಾಚಾರ್ಯ ಕೊಟ್ಟ ಮಾನಸಿಕ ಮತ್ತು ದೈಹಿಕ ಹಿಂಸೆ ಕಠೋರವಾದದ್ದು.

ವಾಣಿ ಮನೆಯಿಂದ ಹೊರಗೆ ಹೋಗಬಾರದು. ಯಾರಲ್ಲೂ ಮಾತಾಡಬಾರದು. ತುಳು ಶಿವಳ್ಳಿ ಮಾಧ್ವ ಬ್ರಾಹ್ಮಣರ ಎಲ್ಲರ ಮನೆಯಲ್ಲೂ ಇರುವಂತೆ ಇಲ್ಲೂ ವಾಣಿಯವರಿಗೆ ಎರಡನೇ ದರ್ಜೆ ಸ್ಥಾನ. ಶೂದ್ರರಿಗೆ ಸಲ್ಲುವ ಮಾನ.

ಕೈಹಿಡಿದಾಕೆಯನ್ನು ಪ್ರತಿ ಹಂತದಲ್ಲೂ ಕತ್ತಲಲ್ಲಿಟ್ಟುಕೊಂಡು ಪ್ರತಿಭಾಳೊಂದಿಗೆ ಅನೈತಿಕ ಸಂಬಂಧ ಮುಂದುವರಿಸಿದ ಚಾಣಾಕ್ಷ ರಾಮನಾಥಾಚಾರ್ಯ. ಪ್ರತಿಭಾಳನ್ನು ದಕ್ಕಿಸಿಕೊಳ್ಳಲು ವಾಣಿಯನ್ನು ಬೇಕುಬೇಕಾದಾಗಲೆಲ್ಲ ದುರುಪಯೋಗಪಡಿಸಿಕೊಳ್ಳಲು ಸಹ ಈ ಕಾಮುಕ ಹಿಂಜರಿಯಲಿಲ್ಲ.

ಅಸ್ಪೃಶ್ಯತೆಯ ಪರಾಕಾಷ್ಠೆ

ರಾಮನಾಥಾಚಾರ್ಯನ ಅಸ್ಪೃಶ್ಯತೆ ಎಷ್ಟಿದೆಯೆಂದರೆ, ತನ್ನಿಬ್ಬರು ಹೆಣ್ಣುಮಕ್ಕಳು ಶಾಲೆಗೆ ಹೋದರೆ ಅನ್ಯಜಾತಿಯ ಹೆಣ್ಣುಮಕ್ಕಳ ಮೈ ಸ್ಪರ್ಶವಾಗುತ್ತದೆ ಎಂಬ ಏಕೈಕ ಕಾರಣಕ್ಕಾಗಿ ಈ ಕ್ಷಣದವರೆಗೂ ಅವರಿಗೆ ಕನಿಷ್ಠ ಶಾಲಾ ಶಿಕ್ಷಣವನ್ನೂ ನೀಡದೆ ಮನೆಯಲ್ಲೇ ಕೂಡಿಸಿದ್ದಾನೆ ಈ ಕ್ರೂರಿ!


ಹೆತ್ತಬ್ಬೆಯನ್ನು ಹೆಸರೆತ್ತಿ ಕರೆಯುವ ಹೆಣ್ಣುಮಕ್ಕಳು ತಂದೆಯ ಮೇಲಿನ ಭಯದಿಂದಲೋ, ತಂದೆಯ ನಿರಂತರ ಪ್ರವಚನದಿಂದಲೋ ತಾಯಿಯನ್ನು ಕೀಳಾಗಿಯೇ ಕಾಣುತ್ತಾರೆಂದರೆ ಇವರ ಮನೆಯಲ್ಲಿ ಎಂತಹ ಪರಿಸ್ಥಿತಿ ಸೃಷ್ಟಿಯಾಗಿರಬಹುದೆಂಬುದನ್ನು ಊಹಿಸಬಹುದು.

ಕಡ್ಡಾಯ ಶಿಕ್ಷಣ, ಸಮುದಾಯದತ್ತ ಶಾಲೆ ಇತ್ಯಾದಿ ಯಾವುವೂ ರಾಮನಾಥಾಚಾರ್ಯನ ಹೆಣ್ಣು ಮಕ್ಕಳಿಬ್ಬರಿಗೆ ಇದುವರೆಗೂ ಅನ್ವಯವಾಗಿಲ್ಲ ಎನ್ನುವುದು ಯಾರಲ್ಲಾದರೂ ಆಶ್ಚರ್ಯ ಹುಟ್ಟಿಸಲೂಬಹುದು.

ವಾಣಿಯ ಬಂಡಾಯ

ಗಂಡನ ಬಾಯಿಂದ ರಂಡೆ, ಮುಂಡೆ ಇತ್ಯಾದಿ ವಿಕೃತ ಬಯ್ಗುಳಗಳನ್ನು ಕೇಳಿ..... ಕೇಳಿ... ಪೆಟ್ಟು ತಿಂದೂ, ತಿಂದೂ ರೋಸಿಹೋಗಿದ್ದರು ಅನಾಮಿಕ ವಾಣಿ. ಕಳೆದೊಂದು ತಿಂಗಳಿಂದ ಪ್ರತಿಭಾ ನೇರ ಮನೆಗೆ ಬಂದು 'ಶಯನಾಗೃಹ' ಸೇರಿದ ಬಳಿಕವಂತೂ ಇಬ್ಬರೂ ಜತೆಯಾಗಿ ಕೊಟ್ಟ ಮಾನಸಿಕ ಮತ್ತು ದೈಹಿಕ ಹಿಂಸೆಯಿಂದಾಗಿ ವಾಣಿಯ ಸಹನೆ, ತಾಳ್ಮೆ ಎಲ್ಲದರ ಕಟ್ಟೆಯೂ ಒಡೆದುಹೋಗಿತ್ತು. ಅಂತಿಮವಾಗಿ ದಿಟ್ಟತನ ಪ್ರದರ್ಶಿಸಿದ ವಾಣಿ, ರಾಮನಾಥಾಚಾರ್ಯ ಕಂಬ ಎಣಿಸುವಂತೆ ಮಾಡಿ ಮಾದರಿ ಹೆಣ್ಣಾಗಿ ಬಿಟ್ಟಿದ್ದಾಳೆ.

"ಗಂಡನ ಬಲವಂತಕ್ಕೆ ನಾನು ಖಾಲಿ ಕಾಗದಕ್ಕೆ ಮತ್ತು ಛಾಪಾ ಕಾಗದಗಳಿಗೆ ಸಹಿ ಹಾಕಿದ್ದೇನೆ. ಪ್ರತಿಭಾ ಪೋಷಕರ ವಿರುದ್ಧ ಸುಳ್ಳು ದೂರು ನೀಡಿದ್ದೇನೆ. ಗಂಡನ ಪರವಾಗಿ ನಿರ್ವಾಹವೇ ಇಲ್ಲದೇ ಹೇಳಿಕೆಗಳನ್ನು ಕೊಟ್ಟಿದ್ದೇನೆ. ಗಂಡ ಸೂತ್ರದ ಗೊಂಬೆಯಂತೆ ಕುಣಿಸಿದರೆ, ನಾನು ನಿಸ್ಸಹಾಯಕಳಾಗಿದ್ದೆ" ಎಂದು ವಾಣಿ ಬಹಿರಂಗಪಡಿಸಿದ್ದಾರೆ.



"ಗಂಡ ಕುತ್ತಿಗೆ ಹಿಡಿದು ಕೊಲ್ಲಲು ಯತ್ನಿಸಿದ್ದಾನೆ. ಪ್ರತಿಭಾ ಸಹ ನನ್ನನ್ನು ಮನೆ ಕೆಲಸದವಳಿಗಿಂತ ಕೀಳಾಗಿ ಕಾಣುತ್ತಾಳೆ. ಇಬ್ಬರೂ ಒಂದೇ ಕೋಣೆಯಲ್ಲಿ ನನ್ನೆದುರೇ ಮಲಗುತ್ತಾರೆ. ಆಕ್ಷೇಪಿಸಿದರೆ, ಇಬ್ಬರೂ ಜೊತೆಯಾಗಿ ಥಳಿಸುತ್ತಾರೆ. ತೊಂದರೆ ಕೊಟ್ಟರೆ ನನ್ನ ಸಾವಿಗೆ ನೀನೇ ಕಾರಣಳಾಗಿದ್ದಯೇ ಎಂದು ಚೀಟಿ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೆದರಿಸ್ತಾಳೆ ಪ್ರತಿಭಾ. ಹೇಳಲು ಅಸಹ್ಯವಾಗುತ್ತದೆ. ಕ್ರೂರತೆಯನ್ನು ಸಹಿಸದೆ ದೂರು ಕೊಡುತ್ತಿದ್ದೇನೆ" ಅಂದಿದ್ದಾರೆ ಉಡುಪಿ ನಗರ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಪ್ರಕಾಶ್ ಬಿ.ಎನ್. ಅವರೆದುರು ವಾಣಿ.

ಜನವರಿ 16 ರಂದು ರಾತ್ರಿ ರಾಮನಾಥಾಚಾರ್ಯ ವಾಣಿಯವರನ್ನು ಹೊರದಬ್ಬಿದ್ದಾನೆ. ಮೂರು ದಿನ ಗೆಳತಿ ಸ್ವರ್ಣಲತಾ ಅವರ ಮನೆಯಲ್ಲಿ ಕಳೆದು ಸ್ತ್ರೀಶಕ್ತಿಯವರ ಬೆಂಬಲದೊಂದಿಗೆ 20 ರಂದು ನಗರ ಠಾಣೆ ಮೆಟ್ಟಿಲು ಹತ್ತಿ ಗಂಡನ ವಿರುದ್ಧ ದೂರು ಕೊಟ್ಟು, ಬಂಡಾಯ ಸಾರಿದ್ದಾರೆ ವಾಣಿ.

ಕಲಂ 498(ಎ) (ಮಾನಸಿಕ-ದೈಹಿಕ ಹಿಂಸೆ), 506 (ಜೀವ ಬೆದರಿಕೆ), 323 (ಕೈಯಿಂದ ಹಲ್ಲೆ) 504 (ಅವಾಚ್ಯ ಶಬ್ದಗಳಿಂದ ನಿಂದೆ), 109 (ದುಷ್ಪ್ರೇರಣೆ) ರೆಡ್‌ವಿತ್ 34 (ಇಬ್ಬರು) ಭಾರತೀಯ ದಂಡ ಸಂಹಿತೆಯಡಿಯಲ್ಲಿ ಆಧುನಿಕ ಶಿವ-ಪಾರ್ವತಿಯರಾದ ರಾಮನಾಥಾಚಾರ್ಯ-ಪ್ರತಿಭಾ ವಿರುದ್ಧ ಮೊಕದ್ದಮೆ ದಾಖಲಿಸಿ ಸೆರೆಮನೆಗೆ ಕಳುಹಿಸಿಕೊಟ್ಟಿದ್ದಾರೆ ಉಡುಪಿ ಪೊಲೀಸರು.

15 ದಿನ ನ್ಯಾಯಾಂಗ ಬಂಧನ ಅನುಭವಿಸಿ ಜಾಮೀನು ಕೊಟ್ಟು ಬಿಡುಗಡೆಗೊಂಡಿರುವ ಅಕ್ರಮ ಜೋಡಿಗಳು ಇದೀಗ ವಾಣಿ ಇಲ್ಲದಿರುವುದರಿಂದ ಸ್ವೇಚ್ಛೆಯಾಗಿದ್ದಾರೆ.

ಮಕ್ಕಳನ್ನು ಬಂಧಮುಕ್ತಗೊಳಿಸುವುದೇ ತನ್ನ ಮುಂದಿನ ಗುರಿ ಎಂದಿರುವ ವಾಣಿಗೆ ಸರ್ವರ ಬೆಂಬಲದ ಅಗತ್ಯವಿದೆ.

ಕೊನೆಯದಾಗಿ ಒಂದು ವಿಷಯ. ವಾಣಿ ಗಂಡು ಮಗು ಕೊಡದ ಕಾರಣ ರಾಮನಾಥಾಚಾರ್ಯ ಪ್ರತಿಭಾಳನ್ನು ಇಟ್ಟುಕೊಂಡಿದ್ದಾನಂತೆ. ಮುಂದೆ ಅಧಿಕೃತವಾಗಿ ಮದುವೆಯಾಗುತ್ತಾನಂತೆ. ಮದುವೆಯಾಗದಿದ್ದರೂ ಗಂಡು ಮಗುವನ್ನು ಪಡೆಯುತ್ತಾನಂತೆ. ಜ್ಯೋತಿಷಿ ಹಾಗೆಂದು ಹೇಳಿದ್ದಾನಂತೆ.

ಕಾಮಾತುರಾಣಾಂ ನ ಭಯಂ, ನ ಲಜ್ಜಾ ಎಂಬ ಮಾತಿಗೆ ಇದಕ್ಕಿಂತ ಉತ್ತಮ ಉದಾಹರಣೆ ಬೇರೆ ಬೇಕೇ?

-ಶ್ರೀರಾಮ ದಿವಾಣ

ಪುತ್ತೂರು ಮಿನಿ ವಿಧಾನಸೌಧಕ್ಕಾಗಿ ಜಗ್ಗಾಟ!

ಕೋಲು ಕೊಟ್ಟು ಹೊಡೆಸಿಕೊಂಡ ಡಿ.ವಿ

"ಪ್ರಸ್ತಾವಿತ ಪುತ್ತೂರಿನ ಮಿನಿ ವಿಧಾನಸೌಧವನ್ನು ಈಗಿರುವ ಸಹಾಯಕ ಕಮಿಷನರ್ ಕಚೇರಿಯನ್ನು ಹೊಡೆದುರುಳಿಸಿ ಅಲ್ಲಿಯೇ ನಿರ್ಮಿಸಬೇಕು. ಇದು ವಾಸ್ತು ಪ್ರಕಾರವೂ ಸೂಕ್ತ ಮತ್ತು ಇದು ಎತ್ತರದ ಪ್ರದೇಶದಲ್ಲಿರುವುದರಿಂದ ಎಲ್ಲದಕ್ಕೂ ಅನುಕೂಲ." - ಇದು ಮಂಗಳೂರು ಸಂಸದ ಕಂ ಪುತ್ತೂರಿನ ಕುವರ ಡಿ.ವಿ. ಸದಾನಂದ ಗೌಡರ ವಾದ. ಸಂಸದರ ಈ ವಾದವನ್ನು ಹಿಮ್ಮೇಳದಲ್ಲಿ ನಿಂತು ಸಮರ್ಥಿಸುತ್ತಿರುವವರಲ್ಲಿ ಪುತ್ತೂರು ವಕೀಲರ ಸಂಘ ಮತ್ತು ಪಿಡಬ್ಲ್ಯೂಡಿ ಕಂಟ್ರಾಕ್ಟುದಾರರ ಸಂಘದವರು ಮುಂಚೂಣಿಯಲ್ಲಿದ್ದಾರೆ.

"ಇದು ಕೂಡದು. ಈಗಿರುವ ಎ.ಸಿ. ಕಚೇರಿ ಒಂದು ಅಮೂಲ್ಯವಾದ ಕಟ್ಟಡ. ಅದನ್ನು ಕೆಡವಿದರೆ ಮತ್ತೆ ಅಂತಹ ಕಟ್ಟಡ ಕಟ್ಟಲು ಸಾಧ್ಯವಿಲ್ಲ. ಬಹಳಷ್ಟು ಪುರಾತನ ಐತಿಹ್ಯವಿರುವ, ಇವತ್ತಿಗೂ ಗಟ್ಟಿಮುಟ್ಟಾಗಿರುವ ಈ ಎ.ಸಿ. ಕಚೇರಿಯನ್ನು ಒಂದು ಸ್ಮಾರಕ ಮ್ಯೂಸಿಯಂ ಆಗಿ ಉಳಿಸಿಕೊಂಡು ಬೇರೊಂದು ಜಾಗದಲ್ಲಿ ಮಿನಿ ವಿಧಾನಸೌಧ ಕಟ್ಟೋದು ಸೂಕ್ತ. ತಾಲ್ಲೂಕು ಆಫೀಸು ಕಚೇರಿಯಿರುವ ಜಾಗವೇ ಮಿನಿ ವಿಧಾನಸೌಧಕ್ಕೆ ಸೂಕ್ತ." - ಇದು ಪುತ್ತೂರಿನ ಮಾಜಿ ಶಾಸಕ ಕಂ ಹಿರಿಯ ಸಹಕಾರಿ ಧುರೀಣ ಉರಿ ಮಜಲು ರಾಮ ಭಟ್ಟರ ಅಭಿಪ್ರಾಯ. ಪುತ್ತೂರಿನ ಎ.ಸಿ. ವಸಂತ್ ಕುಮಾರ್ ಸೇರಿದಂತೆ ಹತ್ತು ಹಲವು ಗಣ್ಯರ ಅಭಿಪ್ರಾಯವೂ ಇದೇ ಆಗಿದೆ. ಪುತ್ತೂರಿನ ಕಾಂಗ್ರೆಸಿಗರೂ ತಾಲ್ಲೂಕು ಕಚೇರಿಯೇ ಸೂಕ್ತವೆಂದು ರಾಮಭಟ್ಟರ ಅಭಿಪ್ರಾಯವನ್ನೇ ಸಮರ್ಥಿಸಿಕೊಂಡಿದ್ದಾರೆ.


ಈಗಿರುವ ಎಸಿ ಕಚೇರಿ


ಈ ಮಧ್ಯೆ ಈ ಮಿನಿ ವಿಧಾನ ಸೌಧಕ್ಕಾಗಿ ಸರ್ಕಾರದೊಂದಿಗೆ ಬಡಿದಾಡಿ, ಪಿಡಬ್ಲ್ಯೂಡಿ ಮತ್ತು ಕಂದಾಯ ಇಲಾಖೆಗಳು 5.2 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ಕಾರಣಕರ್ತರಾಗಿದ್ದ ಪುತ್ತೂರಿನ ಮಾಜಿ ಶಾಸಕಿ ಶಕುಂತಳಾ ಶೆಟ್ಟಿಗೆ ಮಾತ್ರ ಈ ಇತ್ತಂಡಗಳ ಹಗ್ಗ ಜಗ್ಗಾಟದಲ್ಲಿ ಎಲ್ಲಿ ಈ ಕಟ್ಟಡದ ಕಾರ್ಯ ನೆನೆಗುದಿಗೆ ಬಿದ್ದು ಹಣವೆಲ್ಲ ವಾಪಾಸು ಸರಕಾರಕ್ಕೇ ಹೋಗಿಬಿಡುತ್ತದೋ ಎಂಬ ಆತಂಕ.


ಅಂತೂ ಪುತ್ತೂರಿನ ಈ 'ಮಿನಿ ವಿಧಾನಸೌಧ'ದ ವಿವಾದವೀಗ 'ಟಾಕ್ ಆಫ್ ದಿ ಟೌನ್' ಆಗಿ ಪುತ್ತೂರಿನ ಎ.ಸಿ. ಮತ್ತು ಸಂಸದ ಸದಾನಂದಗೌಡ ನಡುವಿನ ಗುದ್ದಾಟದ ಅಖಾಡವಾಗಿ ಮಾರ್ಪಟ್ಟಿದೆ.

ಶಾಸಕಿ ಶಕುಂತಲಾ ಶೆಟ್ಟಿಯ ಒತ್ತಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎರಡನೇ ಪ್ರಮುಖ ಕೇಂದ್ರವಾಗಿರುವ ಪುತ್ತೂರಿನ ಅಗತ್ಯತೆಗಳ ಕಾರಣಕ್ಕೆ ಕಂದಾಯ ಇಲಾಖೆಯು 2.2 ಕೋಟಿ ಮತ್ತು ಲೋಕೋಪಯೋಗಿ ಇಲಾಖೆಯು 3 ಕೋಟಿ (ಒಟ್ಟು 5.2 ಕೋಟಿ) ರೂಪಾಯಿಗಳನ್ನು ಮಿನಿ ವಿಧಾನ ಸೌಧದ ನಿರ್ಮಾಣಕ್ಕೆ ಬಿಡುಗಡೆ ಮಾಡಿವೆ. ಈ ಮಂಜೂರಾತಿ 2006ರ ಜುಲೈ 3ರಂದೇ ನಡೆದಿತ್ತು, ಆನಂತರ ಅಂದು ಪುತ್ತೂರು ಎ.ಸಿ. ಆಗಿದ್ದ ಅಪ್ಪಯ್ಯನವರು 2006ರ ಜುಲೈ 24 ರಂದು ಜನಪ್ರತಿನಿಧಿಗಳ ಸಭೆ ಕರೆದು, ಆ ಸಭೆಯಲ್ಲಿ ಮಿನಿ ವಿಧಾನಸೌಧಕ್ಕೆ ಎ.ಸಿ. ಕಚೇರಿಯಿರುವ ಜಾಗವೇ ಸೂಕ್ತವೆಂದು ತೀರ್ಮಾನಿಸಲಾಗಿತ್ತು.

ಅಂದು ಯಾವ ರೀತಿಯ ವಿರೋಧಾಭಾಸಗಳಿಲ್ಲದೆ, ಈ ವಿಷಯ ದೊಡ್ಡ ಪ್ರಚಾರಕ್ಕೂ ಬಾರದೇ 2007ರ ಜೂನ್‌ನಲ್ಲಿ ಎ.ಸಿ. ಕಚೇರಿ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಮಂತ್ರಿ ನಾಗರಾಜ ಶೆಟ್ಟಿ ಮತ್ತು ಸಂಸದ ಡಿ.ವಿ. ಸದಾನಂದ ಗೌಡರ ಉಪಸ್ಥಿತಿಯಲ್ಲಿ ಕಂದಾಯ ಸಚಿವ ಜಗದೀಶ್ ಶೆಟ್ಟರ್ ಸದರಿ ಸೌಧಕ್ಕೆ ಶಿಲಾನ್ಯಾಸ ಮಾಡಿದ್ದೂ ಆಯಿತು.

ಹೀಗಿರುವಾಗ, ಈ 'ಮಿನಿ ವಿಧಾನ ಸೌಧ'ವನ್ನು ಎ.ಸಿ. ಕಚೇರಿ ಇರುವ ಜಾಗಕ್ಕಿಂತ ತಾಲ್ಲೂಕು ಕಚೇರಿ ಕಟ್ಟಡ ವಿರುವ ಪ್ರದೇಶದಲ್ಲಿ ಕಟ್ಟುವುದು ಸೂಕ್ತ ಎಂದು ಪ್ರಥಮವಾಗಿ ಅಪಸ್ವರ ಎತ್ತಿದವರು ಬಿ. ರಾಮಭಟ್. ಆದರೆ ಇದನ್ನು ವಿರೋಧಿಸಿದ ಸದಾನಂದ ಗೌಡರು ಎ.ಸಿ. ಕಚೇರಿಯೇ ಸೂಕ್ತ, ಅಲ್ಲೇ ಆಗಬೇಕೆಂದು ಹಠ ಹಿಡಿದಾಗ ಅದೇ ಪಕ್ಷದ ಪುತ್ತೂರಿನ ಹಿರಿಯಣ್ಣ ರಾಮಭಟ್ಟರು ಬಹಿರಂಗವಾಗಿ ತಕರಾರು ತೆಗೆದು, ಅದೀಗ ವಿವಾದದ ಸ್ವರೂಪ ಪಡೆದು, ಪುತ್ತೂರು ಬಿಜೆಪಿಯೊಳಗಿನ ಬಿರುಕನ್ನು ಬಹಿರಂಗಪಡಿಸಿದೆ.


ಸದಾನಂದ ಗೌಡ


ಎಸಿ ವಸಂತ್ ಕುಮಾರ್

ಡಿ.ವಿ. ವಿರುದ್ಧ ಮಸಲತ್ತು

ಪುತ್ತೂರಿನ ಭಜರಂಗದಳದ ಲೀಡರ್ ... ಪ್ರವರ್ಧಮಾನಕ್ಕೆ ಬಂದ ಅರುಣ್ ಕುಮಾರ್ ... ಯಾವಾಗ ಡಿ.ವಿ.ಯಂತಹ ಡಿ.ವಿ.ಗೇ ಪ್ರತಿಸ್ಪರ್ಧಿಯ... ಬೆಳೆದು ನಿಂತರೋ ಆಗ ಡಿ... ಆತಂಕ ಪ್ರಾರಂಭವಾಯಿತು. ಬುಡಕ್ಕೇ ನೀರು ತಂದ ಹೈಗರ ... ಪುತ್ತಿಲರನ್ನು ಉಪಾಯವಾಗಿ ... ರಂಗದಳದಿಂದಲೇ ಡಿ.ವಿ. ಹೊ... ಹಾಕಿದರು. ಆದರೆ ಇದ... ರಾಮಭಟ್ಟರಂತಹವರು ಡಿ.ವಿ ... ಮುನಿಸಿಕೊಂಡರು. ಅಲ್ಲಿಗೆ ಪುತ್ತೂ... ಬಿಜೆಪಿಯಲ್ಲಿ ಡಿ.ವಿ.ಯ ಗೌಡ ಬ... ಪ್ರತಿಯಾಗಿ ರಾಮಭಟ್ಟರ ಬ್ರಾ... ಬಣ ಪ್ರತಿಸ್ಪರ್ಧಿಯಾಗಿ ಮೂ... ರಾಮಭಟ್ಟರ ಪಾಳಯದೊ... ಮಾಜಿ ಶಾಸಕಿ ಶಕುಂತಲಾ ಶೆಟ್ಟಿ ... ಪುರಸಭೆಯ ಮಾಜಿ ಅ...

ಐತಿಹಾಸಿಕ ಪಳೆಯುಳಿಕೆಯಾಗಿಯೇ ಉಳಿಸಿ!

ಮಿನಿ ವಿಧಾನಸೌಧದ ನೆಪದಲ್ಲಿ ಪುತ್ತೂರಿನಲ್ಲಿ ಜರುಗುತ್ತಿರುವ ರಾಜಕೀಯ ಪರ-ವಿರೋಧಗಳೇನೇ ಇರಲಿ, ಈ ಯಾವುದೇ ರಾಜಕೀಯ ಉಸಾಬರಿಗೆ ಸೇರದ, ಜನಪರ ಕಾಳಜಿಯನ್ನು ಮಾತ್ರ ಹೊಂದಿರುವ ಗಣ್ಯರು "ಎ.ಸಿ. ಕಚೇರಿ ಕೆಡುವುದು ಸುಲಭ. ಆದರೆ ಮತ್ತೆ ಕೋಟಿ ಖರ್ಚು ಮಾಡಿದರೂ ಅಂತಹ ಕಟ್ಟಡ ಕಟ್ಟಲು ಸಾಧ್ಯವೇ?" ಎಂಬ ಪ್ರಶ್ನೆಯೊಂದಿಗೆ ಬೇರೆಯೇ ಸಮರ್ಥನೆಗಳನ್ನೂ ನೀಡುತ್ತಿದ್ದಾರೆ. ಈಗ ಪುತ್ತೂರು ಎ.ಸಿ. ಕಚೇರಿಯಾಗಿರುವ ಈ ಕಟ್ಟಡ ಒಂದು ಶತಮಾನದ ಇತಿಹಾಸವನ್ನು ಸಾರಿ ಹೇಳುವ ಕಟ್ಟಡವಾಗಿದೆ. ಕಲ್ಲು ಹಾಸಿನ ನೆಲ, ಗಟ್ಟಿ ಮುಟ್ಟಾದ ಗೋಡೆ, ಬೆಲೆಬಾಳುವ ಮರದ ಪೀಠೋಪಕರಣಗಳು- ಇವೆಲ್ಲ ನೂರು ವರ್ಷಗಳ ಕಾಲ ಬಾಳುವಂತಹದು. ಬ್ರಿಟಿಷರ ಕಾಲದಲ್ಲಿ ಈ ಕಟ್ಟಡ ಕಲೆಕ್ಟರ್ ಆಫೀಸ್ ಆಗಿತ್ತು. ಇದನ್ನು ಐತಿಹಾಸಿಕ ಪಳೆಯುಳಿಕೆಯಾಗಿ ಉಳಿಸಿಕೊಂಡು ಈ ಕಟ್ಟಡವನ್ನು ಜನೋಪಯೋಗಿ ಲೈಬ್ರರಿ, ಮ್ಯೂಸಿಯಂ, ಅಧ್ಯಯನ ಪೀಠಗಳಿಗೆ ಬಳಸಬಹುದಾಗಿದೆ.

ಒಂದು ವೇಳೆ ಇಲ್ಲೇ ಮಿನಿ ವಿಧಾನಸೌಧ ಕಟ್ಟುವುದಾದರೆ ಅನೇಕ ತಾಂತ್ರಿಕ ಅನಾನುಕೂಲತೆಗಳೂ ಇವೆ. ಇಲ್ಲಿ ಸುಮಾರು 15ರಿಂದ 25 ಸರ್ಕಾರಿ ಕಚೇರಿಗಳು ಬರಲಿದ್ದು ಸರಿಯಾದ ಪಾರ್ಕಿಂಗ್ ವ್ಯವಸ್ಥೆಯಿಲ್ಲ. ವಾರದ ಸಂತೆ ಇದರ ಪಕ್ಕದಲ್ಲಿಯೇ ನಡೆಯುವುದು ಕೂಡಾ ಸಾಕಷ್ಟು ಸಮಸ್ಯೆಗಳಿಗೆ ಎಡೆಮಾಡುತ್ತದೆ. ಪುತ್ತೂರಿನಲ್ಲಿ ಸರ್ಕಾರಿ ಸ್ಥಳ ಬೇರೆ ಕಡೆ ಇರುವಾಗ ಎ.ಸಿ. ಕಚೇರಿಯಂತಹ 78 ಸೆಂಟ್ಸು ಸ್ಥಳದಲ್ಲಿಯೇ ಮಿನಿ ವಿಧಾನಸೌಧ ಕಟ್ಟುವ ಹಠ ಸಲ್ಲದು. ಅದಕ್ಕಿಂತಲೂ ಒಂದೂವರೆ ಎಕರೆಯಷ್ಟು ವಿಸ್ತೀರ್ಣವಿರುವ ತಾಲ್ಲೂಕು ಕಚೇರಿಯೇ ಸೂಕ್ತ ಎನ್ನುವುದು ಪುತ್ತೂರಿನ ಕೆಲ ಚಿಂತಕರ ಅಭಿಪ್ರಾಯ.

ಈ ಒಂದು ಬೇಕು-ಬೇಡಗಳ ಹಗ್ಗ ಜಗ್ಗಾಟದಲ್ಲಿ ಡಿ.ವಿ. ಸದಾನಂದ ಹಠ ಗೆಲ್ಲುತ್ತದೋ...

ಎ.ಸಿ. ಕಚೇರಿ ಉಳಿಯುತ್ತದೋ....

ಕೊನೆಗೂ ಮಿನಿ ವಿಧಾನಸೌಧ ಸಾಕಾರಗೊಳ್ಳುತ್ತದೋ....

ಎಲ್ಲವೂ ಪುತ್ತೂರಿನ ಜನರ ಕೈಯಲ್ಲಿದೆ ಎಂದಷ್ಟೇ ಕೊನೆಗೂ ಹೇಳಬಹುದಾಗಿದೆ.

ಯುವ ಚೈತನ್ಯ ಸಮಾವೇಶ ರೈ ವಿರುದ್ಧ ಮಸಲತ್ತು!

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್‌ನಲ್ಲಿ ಹಾಸು ಹೊಕ್ಕಾಗಿದ್ದ ಭಿನ್ನಮತದಿಂದಾಗಿ ಖಾಲಿ ಬಿದ್ದಿದ್ದ ಡಿಸಿಸಿ ಅಧ್ಯಕ್ಷಗಾದಿಗೆ ರಮಾನಾಥ್ ರೈ ಏರಿದ್ದೂ ಆಯಿತು. ಮಾಜಿ ಅಧ್ಯಕ್ಷರೂ ಆದ, ಇನ್ನೊಂದು ಬಣದ ಹಿರಿಯಣ್ಣನೂ ಆದ ಬ್ಲೇಸಿಯಸ್ ಡಿಸೋಜಾ ಮಣ್ಣು ಸೇರಿದ್ದೂ ಆಯಿತು. ಇವೆರಡು ಬೆಳವಣಿಗೆಗಳಿಂದ ಜಿಲ್ಲಾ ಕಾಂಗ್ರೆಸ್‌ನಲ್ಲಿದ್ದ ಭಿನ್ನಮತವೆಂಬ ಶಾಪ ವಿಮೋಚನೆಯಾಗಿ, ಇನ್ನು ಮುಂದಾದರೂ ಮಂಗಳೂರಿನ ಕಾಂಗ್ರೆಸ್ಸಿಗರು ಜೊತೆಯಾಗಿರುತ್ತಾರೆ ಎಂದು ಎಲ್ಲರು ಭಾವಿಸಿದ್ದರು.

ಆದರೆ ಇತ್ತೀಚೆಗೆ ಪುತ್ತೂರಿನಲ್ಲಿ ನಡೆದ 'ಯುವ ಚೈತನ್ಯ ಸಮಾವೇಶ'ವೆಂಬ ಕಾರ್ಯಕ್ರಮ ಈ ಒಂದು ಐಕ್ಯತೆಗೆ ಮುನ್ನುಡಿಯಾಗುವುದರ ಬದಲಾಗಿ ರಮಾನಾಥ ರೈ ವಿರುದ್ಧ ಬಂಡೆದ್ದವರ ಬಡಾಯಿಯಾಗಿ ಪರಿಣಮಿಸಿತು. ಹೀಗೆ ಏಕಾಏಕಿ ತನ್ನೂರು ಪುತ್ತೂರಲ್ಲೇ ಇಂತಹ ಒಂದು ಸಮಾವೇಶ ಸಂಘಟಿಸಿ ರಮಾನಾಥ ರೈಯ ವಿರುದ್ಧ ಬಹಿರಂಗವಾಗಿ ಭಿನ್ನಮತವನ್ನು ಸಾರಿದ್ದು ಇನ್ಯಾರೂ ಅಲ್ಲ, ರಮಾನಾಥ ರೈ ಮತ್ತು ತಾನು 'ಕೋಟಿ ಚೆನ್ನಯ' ಎಂದು ಭುಜಕ್ಕೆ ಭುಜ ತಾಕಿಸುತ್ತಲೇ ಬಂದ ವಿನಯ ಕುಮಾರ್ ಸೊರಕೆ!

ಹೀಗೆ ಈ 'ಕೋಟಿ ಚೆನ್ನಯ'ರ ನಡುವೆ ಹುಳಿ ಹಿಂಡಿದ ಪ್ರಸಂಗ ಯಾವುದೆಂದರೆ ಡಿಸಿಸಿ ಅಧ್ಯಕ್ಷನಾದ ರೈ ಬಳಿ ಸೊರಕೆ ತಾನು ಪುತ್ತೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಬಯಕೆ ತೋರ್ಪಡಿಸಿದ್ದು. ಅದಕ್ಕೆ ರೈ ವ್ಯಂಗ್ಯವಾಗಿ "ನೀವು ಪುತ್ತೂರಿನಲ್ಲಿ ಯಾವಾಗ ಗೆಲ್ಲುವುದು?" ಅಂದದ್ದು!

ಸಾಮೂಹಿಕ ಬಂಡಾಯ

ಅಂದು ಪುತ್ತೂರಿನ 'ಯುವ ಚೈತನ್ಯ ಸಮಾವೇಶ'ದಲ್ಲಿ ಎದ್ದು ಕಾಣಿಸುತ್ತಿದ್ದ ಪ್ರಮುಖ ಅಂಶ ಯಾವುದೆಂದರೆ ರಮಾನಾಥ್ ರೈಯನ್ನು ಕಂಡರಾಗದವರ ಸಾಮೂಹಿಕ ಬಂಡಾಯ. ರಮಾನಾಥ್ ರೈಯನ್ನು ಬಂಟ್ವಾಳದಲ್ಲಿ ಮಣಿಸಲು ಗುದ್ದಕ್ಕೆ ಗುದ್ದ ಅಡ್ಡವಿರಲಿ ಎಂಬಂತೆ ಬ್ರೋಕರ್ ಮಂಜುನಾಥ ಭಂಡಾರಿ ಸಾಕಿ ಬೆಳೆಸಿದ ಸರ್ಪ ಬೊಂಡಾಲ ಜಗನ್ನಾಥ ಶೆಟ್ಟಿ. ಜಿಲ್ಲಾ ಯು... ಕಾಂಗ್ರೆಸ್ ಅಧ್ಯಕ್ಷನೂ ಆಗಿರು... ಈತನಿಗೆ ಪುತ್ತೂರಿನಿಂದ ಸ್ಪರ್ಧಿಸುವ ಅವಕಾಶ ಸಿಕ್ಕಿದರ... ಒಂದು ಕೈ ನೋಡುವ ಆಸೆ... ಬೆಳ್ತಂಗಡಿಯಲ್ಲಿ ವಸಂತ ಬಂಗೇರಾ ಕಾಂಗ್ರೆಸ್ ಪಕ್ಷದ ತಟ್ಟುತ್ತಲೇ ಎಲ್ಲಿಲ್ಲದ ಉತ್ಸಾಹದಿಂದ ಮೈಕೊಡವಿ ಎದ್ದು ನಿಂತಿರುವವನೇ ಗಂಗ... ಗೌಡ. ಈತನಿಗೂ ತನ್ನ ಮ... ಪವರ್‌ಅನ್ನು ಪ್ರದರ್ಶಿಸಲು ಒಂದು ಕಾಲದ ಶಿಷ್ಯನೇ ಆ... ವಿನಯಕುಮಾರ್ ಸೊರಕೆ ಸೃಷ್ಟಿಸಿದ ವೇದಿಕೆ ಅನುಕೂಲಕರವಾಯಿತು. ಇನ್ನು ರೈ... ಸಾಂಪ್ರದಾಯಿಕ ಶತ್ರು ರಾಕೇಶ್ ಮ... ಕೂಡ ಇದೀಗ ಇಂಟಕ್ ಜಿಲ್ಲಾಧ್ಯಕ್ಷ... ಕಾಂಗ್ರೆಸ್ ಮುಖ್ಯವಾಹಿನಿಗೆ ಬರುತ್ತಿ... ಈತನಿಗೂ ಈ ವೇದಿಕೆ ರೈ ವಿರುದ್ಧ ಮಸಲತ್ತು ನಡೆಸಲು ಒಂದೊಳ್ಳೆ ಅವಕಾಶ ನೀಡಿತು. ಈ ಎಲ್ಲದುದರ...


ರಮಾನಾಥ ರೈ

ಬಿಜೆಪಿಗೆ ಭಾರವಾದ ಶಕು ಆಂಟಿ!

ಪುತ್ತೂರಿನಲ್ಲಿ ಸಣ್ಣಪುಟ್ಟದಕ್ಕೆಲ್ಲಾ ಕೈ ಹಾಕುವ 'ಹಲ್ಕುಖಿ' ಡಿ.ವಿ. ಸದಾನಂದ ಗೌಡ ಅಧಿಕಾರಿ ವಲಯದಲ್ಲಿ ಮಾತ್ರವಲ್ಲ, ಈಗ ಬಿಜೆಪಿಯ ಒಂದು ವಲಯದಲ್ಲೂ ವಿಲನ್ ಆಗಿ ಬಟ್ಟಿದ್ದಾರೆ. ಇದೇ ಹೊತ್ತಿಗೆ ಮಾಜಿ ಶಾಸಕಿ ಶಕುಂತಳಾ ಶೆಟ್ಟಿ ಈ ಕ್ಷೇತ್ರದಲ್ಲೂ, ಪಕ್ಷದಲ್ಲೂ ಮಿಂಚುತ್ತಿದ್ದಾರೆ.

ತಮ್ಮ ದಕ್ಷತೆಯಿಂದಲೇ ಜನರ ಪ್ರೀತಿ ಗಳಿಸಿರುವ ಎ.ಸಿ. ಮತ್ತು ತಹಶೀಲ್ದಾರ ರಕ್ಷಣೆಗೆ ನಿಂತು, ಅಭಿವೃದ್ಧಿಪರ ವಿಚಾರದಲ್ಲಿ ಕಾಂಗ್ರೆಸ್ಸಿಗರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಸಮತೂಕದ ರಾಜಕಾರಣ ನಡೆಸುತ್ತಿರುವ ಬಿಜೆಪಿಯ ಶಕುಂತಳಾ ಶೆಟ್ಟಿ ಅಪಾರ ಮೆಚ್ಚುಗೆ ಪಡೆಯುತ್ತಿದ್ದಾರೆ. ಕಳೆದ ಬಾರಿ ಈಕೆ ಮಂತ್ರಿಯಾಗುವ ಅವಕಾಶದಿಂದ ವಂಚಿತರಾಗಲು ಡಿ.ವಿ.ಯೇ ಕಾರಣ ಎಂಬ ಜನರ ಅನುಕಂಪವೂ ಈಕೆಯ ಬೆನ್ನಿಗಿದೆ. ಇದನ್ನೆಲ್ಲಾ ಸಹಿಸದ ಡಿ.ವಿ. ಗ್ಯಾಂಗ್ ಹೇಗಾದರೂ ಮಾಡಿ ಶಕುಂತಳಾ ಶೆಟ್ಟಿಗೆ ಈ ಬಾರಿ ಟಿಕೆಟ್ ತಪ್ಪಿಸಲು ತಂತ್ರ ರೂಪಿಸಿದೆ.

ಶ್ರೀರಾಮಸೇನೆಯವರ ಶನಿ ಪೂಜೆಯ ಸಂದರ್ಭದಲ್ಲಿ ಪೊಲೀಸರ ದೌರ್ಜನ್ಯವನ್ನು ಖಂಡಿಸಿದ್ದು, ಕಳೆದ ವರ್ಷ ಕಾಂಗ್ರೆಸ್‌ನ ಪುತ್ತೂರು ಕಂಬಳದ ವೇದಿಕೆಯೇರಿದ್ದು, ಈ ಎಲ್ಲಾ ಸಂಗತಿಗಳನ್ನು ಇಟ್ಟುಕೊಂಡು ಬಂಟರ ನಿಯೋಗವೊಂದು ಈಗಾಗಲೇ ಕಲ್ಲಡ್ಕದ ಹೈಕಮಾಂಡ್‌ನ ಕಿವಿಯೂದಿದೆ. ಅದರ ಫಲವಾಗಿ ನಡೆದ ಬಿಜೆಪಿ ಬೈಠಕ್‌ವೊಂದರಲ್ಲಿ ಶಕುಂತಲಾ ಶೆಟ್ಟಿಯ ಅನುಪಸ್ಥಿತಿಯಲ್ಲಿ ಪುತ್ತೂರಿನ ಚೆಡ್ಡಿ ಮುಖಂಡ ಡಾ. ಪ್ರಸಾದ್ ಭಂಡಾರಿ ಪತ್ನಿ ಕಾಣಿಸಿಕೊಂಡಿದ್ದು, ಮುಂದಿನ ದಿನಗಳಲ್ಲಿ ಶಕುಂತಲಾ ಶೆಟ್ಟಿಯ ಸೀಟಿಗೆ ಸಂಚಕಾರ ಬಂದಿರುವುದರ ವಾಸನೆ ಬಡಿಯುತ್ತಿದೆ. ಇದನ್ನು ಗ್ರಹಿಸಿದ ಕಾಂಗ್ರೆಸ್ ಕೂಡಾ ಶಕುಂತಲಾ ಶೆಟ್ಟಿಯನ್ನು ತನ್ನತ್ತ ಸೆಳೆಯಲು ಬಲೆ ಬೀಸಿ ಕಾಯುತ್ತಿದ್ದೆ.

ಲೋಕೇಶ್ ಹೆಗ್ಡೆಯವರು ಗುರುತಿಸಿಕೊಂಡರೆ, ಡಿ.ವಿ. ಣದಲ್ಲಿ ಸಂಜೀವ ಮದಂದೂರು, ಚನಿಲ ತಿಮ್ಮಪ್ಪ ಟ್ಟಿ, ಜೀವಂಧರ್ ಜೈನ್ ಕಾಣಿಸಿಕೊಂಡರು.

ಈ ನಡುವೆ ಪುತ್ತೂರಿನ ರಾಜಕೀಯ ವಿದ್ಯಮಾನದಲ್ಲಿ ಕಷ್ಟು ಘಟನಾವಳಿಗಳು ನಡೆದುಹೋಗಿವೆ. ಅಕ್ಷತಾ ರೆ ಪ್ರಕರಣ ಮತ್ತು ಶನಿಪೂಜೆಗಳಲ್ಲಿ ಅರುಣ್ ಕುಮಾರ್ ತ್ತಿಲರನ್ನು ಮೊಟಕಲು ಹೋದ ಡಿ.ವಿ.ಗೆ ಕೋಲು ಟ್ಟು ಹೊಡೆಸಿಕೊಂಡ ಅನುಭವವಾಗಿದೆ. ಈ ಸಂದರ್ಭ ಲ್ಲೆಲ್ಲಾ ಶತ್ರುವಿನ ಶತ್ರು ಮಿತ್ರ ಎನ್ನುವ ರೀತಿಯಲ್ಲಿ ಂಗ್ರೆಸ್ ಕೂಡಾ ವರ್ತಿಸುತ್ತಾ ಬಂದಿದ್ದು ಇದೀಗ ಮಿನಿ ಧಾನಸೌಧದ ವಿಚಾರದಲ್ಲೂ ಅದೇ ಲುವನ್ನು ಹೊಂದಿದೆ.

ಎ.ಸಿ. V/s ಎಂ.ಪಿ.

ಡಿ.ವಿ. ಸದಾನಂದ ಗೌಡ ಬಿಜೆಪಿ ಜ್ಯಾಧ್ಯಕ್ಷರಾಗಿ ರಾಜಧಾನಿಯಲ್ಲಿ ಮಿಂಚುತ್ತಿರುವಂತೆ' ಪುತ್ತೂರಲ್ಲಿ ದೇ ಅಹಂ ಅನ್ನು ಪ್ರದರ್ಶಿಸಲು ಯತ್ನಿಸಿ ಪದೇಪದೇ ಹಾಸ್ಯಾಸ್ಪದ ಗಿದ್ದಾರೆ. ರಾಜ್ಯದಲ್ಲಿ ರಾಜಕೀಯ ಶ್ಚಿತತೆಯ ಪರಿಣಾಮವಾಗಿ ರಾಷ್ಟ್ರ ಆಡಳಿತವಿದ್ದಾಗ್ಯೂ, ಪುತ್ತೂರಲ್ಲಿ ದರ ಪರಿಣಾಮ ಧನಾತ್ಮಕವಾ ಯೇ ಇದೆ.



ಶಕುಂತಲಾ ಶೆಟ್ಟಿ

ಪುತ್ತೂರಿನ ಸಹಾಯಕ ಕಮೀ ನರ್ ಆಗಿರುವ ಪಿ. ವಸಂತ ಮಾರ್‌ರವರ ಖದರ್ ಮತ್ತು ಪಾರದರ್ಶಕ ರ್ಯವೈಖರಿ ಜನಸಾಮಾನ್ಯರ ಪ್ರಶಂಸೆಗೆ ಕಾರಣ ಗಿದೆ. ಕಾನೂನು ಪಾಲನೆಯಲ್ಲಿ ಯಾರಿಗೂ ಕ್ಯಾರೇ ನ್ನದ ಇವರ ನಿಷ್ಠುರ ನಿಲುವು ಮಾತ್ರ ಸಂಸದ ದಾನಂದ ಗೌಡರಿಗೆ ಬಿಸಿತುಪ್ಪವಾಗಿ ಪರಿಣಮಿಸಿದೆ. ಷಣಗಳಲ್ಲಿ "ಅಧಿಕಾರಿಗಳ ಕರ್ತವ್ಯ ಪಾಲನೆಯಲ್ಲಿ ರಾಜಕಾರಣಿಗಳು ಮೂಗು ತೂರಿಸಬಾರದು" ಎಂದೆಲ್ಲ ಒತ್ತಿ ಒತ್ತಿ ಹೇಳುವ ಡಿ.ವಿ. ಪುತ್ತೂರಿನಲ್ಲಿ ಅದನ್ನು ತಾವು ಮಾತ್ರ ಪಾಲಿಸುವುದಿಲ್ಲ!

ಉದಾಹರಣೆಗೆ ಪುತ್ತೂರು ನಗರದಲ್ಲಿ ರಸ್ತೆ ಅಗಲೀಕರಣಕ್ಕೆ ತೊಡಕಾಗಿರುವ ಕಟ್ಟಡಗಳನ್ನು ಎ.ಸಿ.ಯವರು ಯಾವುದೇ ತಾರತಮ್ಯ ತೋರದೆ ಕೆಡವಲು ಹೊರಟಾಗ ಮೂಗು ತೂರಿಸಲು ಬಂದ ಡಿ.ವಿ. ಮುಖಭಂಗಕ್ಕೀಡಾಗಿದ್ದಾರೆ.

ಪುತ್ತೂರಿನ ಮುಖ್ಯ ರಸ್ತೆಯಲ್ಲಿನ 'ಬಿಗ್ ಬುಲ್' ಪಾರ್ಟಿ ಡೋನರ್‌ಗಳಾದ ಸಂಜೀವ ಶೆಟ್ಟಿಯಂತವರ ಕಟ್ಟಡವನ್ನೇ ಕೆಡವಲು ಎ.ಸಿ. ಆದೇಶಿಸಿದಾಗ ಡಿ.ವಿ.ಯ ಮಾತಿಗೆ ಯಾವ ಬೆಲೆಯೂ ಸಿಗಲಿಲ್ಲ, ಪುತ್ತೂರು ಬಸ್‌ಸ್ಟ್ಯಾಂಡ್‌ನಲ್ಲಿ ಪಬ್ಲಿಕ್ ನ್ಯೂಸೆನ್ಸ್ ಸೃಷ್ಟಿಸಿದ್ದ ಖಾಸಗಿ ಬಸ್ಸುಗಳ ವಿಚಾರದಲ್ಲೂ ಡಿ.ವಿ. ಖಾಸಗಿ ಬಸ್ಸುಗಳ ಪರ ನಡೆಸಿದ ಯಾವ ಒತ್ತಡಕ್ಕೂ ಎ.ಸಿ. ಮಣಿಯಲಿಲ್ಲ, ಆಗಲೂ ಡಿ.ವಿ.ಗೆ ಮುಖಭಂಗವಾಗಿತ್ತು.

ಇದೀಗ ಮಿನಿ ವಿಧಾನಸೌಧದ ವಿಚಾರದಲ್ಲೂ ಎಲ್ಲಾ ಪರ-ವಿರೋಧಗಳ ನಡುವೆ ಜಿಲ್ಲಾಡಳಿತ ತಾಲ್ಲೂಕು ಕಚೇರಿಯೇ ಸೂಕ್ತವೆಂಬ ತೀರ್ಮಾನಕ್ಕೆ ಬಂದಿದ್ದು ಕೂಡಾ ಡಿ.ವಿ. ಸದಾನಂದ ಗೌಡರಿಗೆ ಕೋಲು ಕೊಟ್ಟು ಹೊಡೆಸಿಕೊಂಡಂತಾಗಿದೆ. ಇದನ್ನೆಲ್ಲಾ ಒಂದು ವರ್ಷದ ಹಿಂದಿನ ಶ್ರೀರಾಮ ಸೇನೆಯ ಶನಿಪೂಜೆಯ ಪ್ರಕರಣಕ್ಕೆ ಸಮೀಕರಿಸುವ ಅವರ ರಾಜಕೀಯ ಹಿತಶತ್ರುಗಳ 'ಇದು ಗೌಡರ ಮೇಲೆ ಶನಿದೇವರ ಶಾಪ' ಅಂತಲೂ ಲೇವಡಿ ಮಾತಾಡುತ್ತಿದ್ದಾರೆ.

-ಪ್ರಕಾಶ್ ಪಿಂಟೋ

ಷ್ಟು ಮೊತ್ತವೇ ಪುತ್ತೂರಿನಲ್ಲಿ ನಡೆದ 'ಯುವ ನ್ಯ ಸಮಾವೇಶ'ವಾಗಿತ್ತು.

ಪುತ್ತೂರಿನ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮನಾಥ ಶೆಟ್ಟಿಯವರನ್ನು ವಿಶ್ವಾಸಕ್ಕೆ ದುಕೊಳ್ಳದೆ ಪುತ್ತೂರಿನಲ್ಲಿ ತನ್ನ ಪವರ್ ಬುದನ್ನು ತೋರಿಸಿ ಕೊಡುತ್ತೇನೆ ದು ಹೊರಟ ಸೊರಕೆ, ರಮಾನಾಥ ಬನ್ನೂ ಸಮಾವೇಶಕ್ಕೆ ಹ್ವಾನಿಸಿದ್ದರೇನೋ ನಿಜ. ಆದರೆ ದಿಕೆಯಲ್ಲಿ ರೈಗೆ ಕೂರಲೂ ಸೂದ ಆಸನ ವ್ಯವಸ್ಥೆ ಡಿರಲಿಲ್ಲ. ಇದರಿಂದಾಗಿ ಭದಲ್ಲಿಯೇ ರೈ ಚಡಪಡಿಕೆಗೆ ಳಗಾದರು. ಡಿ.ಕೆ. ಶಿವಕುಮಾರ್ ಣ ಮಾಡುವವರೆಗೆ ಕೆಂಡದ ಲೆ ಕೂತವರಂತೆ ಕೂತಿದ್ದ ರೈ ಶಿವಕುಮಾರ್ ಕೆಳಗಿಳಿಯುತ್ತಲೇ ತಾನೂ ದು ಅವರ ಹಿಂದೆಯೇ ಹೊರ ದರು. ಅನಂತರ ಬೋಳ್ವಾರಿನ ಹೋಟೆಲ್ ನಲ್ಲಿ ಟೀ ಕುಡಿದು ಬಂದ ದಾರಿಗೆ ಸುಂಕವಿಲ್ಲದಂತೆ ಹೊರಟುಹೋದರು.



ವಿನಯ್ ಕುಮಾರ್ ಸೊರಕೆ

ಇದಕ್ಕೂ ಮೊದಲು ಪುತ್ತೂರಿನಲ್ಲಿ ಆಯೋಜಿಸಿದ್ದ ಭವ್ಯ ಮೆರವಣಿಗೆಯಲ್ಲೂ ಕಾಣಿಸಿಕೊಳ್ಳದ ರೈ, ಸಮಾರಂಭ ನಡೆಯುವ ಆಣತಿ ದೂರದಲ್ಲಿರುವ ಗುರು ನಾರಾಯಣ ಸಭಾಂಗಣದಲ್ಲಿ ತಮ್ಮ ಬೆಂಬಲಿಗ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಜೊತೆ ಮೀಟಿಂಗ್ ಮಾಡಿ ತನ್ನ ಅಪಥ್ಯತೆಯನ್ನು ತೋರಿಸಿಕೊಟ್ಟರು.

ಕೊನೆ ಕಿಡಿ

ಬರಲಿರುವ ಚುನಾವಣೆಗಳಲ್ಲಿ ಕಾಂಗ್ರೆಸ್‌ಗೆ ಕಾದಿರುವ ಅವಸಾನಕ್ಕೆ ಪೀಠಿಕೆಯಾದ ಪುತ್ತೂರಿನ ಈ 'ಯುವ ಚೈತನ್ಯ ಸಮಾವೇಶ'ದಲ್ಲಿ ರಮಾನಾಥ್ ರೈರವರ ವೈರಿ ದಿವಂಗತ ಬ್ಲೇಸಿ ಬೆಂಬಲಿಗರೇ ತುಂಬಿದ್ದು ಒಂದು ವಿಶೇಷ ಸಂಗತಿಯಾದರೆ, ಅದೇ ಹೊತ್ತಿಗೆ ಮಂಗಳೂರಿನಲ್ಲಿ ನಡೆದ 'ಬ್ಲೇಸಿಗೆ ನುಡಿ ನಮನ' ಸಲ್ಲಿಸುವ ಕಾರ್ಯಕ್ರಮದಲ್ಲಿ ಬ್ಲೇಸಿ ಬದುಕಿದ್ದಾಗ ಆತನ ವಿರುದ್ಧ ಹಲ್ಲು ಮಸೆಯುತ್ತಲೇ ಬಂದಿದ್ದ ಐವನ್ ಡಿಸೋಜಾ ಮಿಂಚಿದ್ದು ಇನ್ನೂ ವಿಚಿತ್ರವಾಗಿತ್ತು!

ಸಂಸ್ಕಾರ ಓದಿದರೆ ಮಕ್ಕಳು ನಾರಣಪ್ಪನಂತಾಗ್ತರೆ ಗೊತ್ತುಂಟ!

ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯನ್ನು ಮಂಗಳೂರಿನ ವಿಶ್ವವಿದ್ಯಾನಿಲಯದ ಎರಡನೇ ಬಿಎಸ್ಸಿ ಪದವಿಗೆ ಪಠ್ಯವಾಗಿಟ್ಟು ಈಗ ಆ ಪುಸ್ತಕ ಕೈಲಿಡಿದು ಪಾಠ ಮಾಡಲು ಸಾಧ್ಯವೇ ಇಲ್ಲ ಎಂದು ಉಪನ್ಯಾಸಕರು ತಿರುಗಿಬಿದ್ದಿದ್ದಾರಂತಲ್ಲಾ, ಈ ಸಂಬಂಧವಾಗಿ ಮಂಗಳೂರು ಮೂಲದ ನಿಕ್ಕರ್ ಗೆಳೆಯನನ್ನು ಸಂಪರ್ಕಿಸಿ ಮಾತನಾಡಿಸಲಾಯ್ತಲ್ಲಾ.

"ಓಯ್ ಮಂಜುನಾಥರೆ, ನಾನು ಯಾಹು. ಮಂಗಳೂರು ವಿ.ವಿ. ಗಲಾಟೆ ಏನು ಅಂತ ವಸಿ ಹೇಳ್ತಿರಾ?"

"ಯಾವ ಗಲಾಟೆ, ಇಲ್ಲಂತ ಗಲಾಟೆ ಆಗಿಲ್ವಲ್ಲಾ?"

"ಅನಂತಮೂರ್ತಿಯವರ 'ಸಂಸ್ಕಾರ' ಪುಸ್ತಕದ ಬಗ್ಗೆ ಕಣ್ರೀ. ಒಸಿ ಹೇಳ್ರೀ."

"ಓ ಅದಾ, ಅದರದ್ದು ಗಲಾಟೆ" ಇಂದು ನಿನ್ನೆಯದಲ್ಲ ಮಾರಾಯ್ರೆ. ಅದನ್ನು ಬರೆದ ಸಮಯದಿಂದ ಇಲ್ಲಿಯವರೆಗೆ ವಿವಾದವುಂಟಲ್ಲಾ."

"ಈಗೇನು ವಿವಾದ ನೈಡಿತಾಯಿದೆ?"

"ಆ ಪುಸ್ತಕವನ್ನು ಮಕ್ಕಳಿಗೆ ಪಾಠ ಮಾಡಲು ಸಾಧ್ಯವಿಲ್ಲಂತೆ."

"ಮಕ್ಕಳು ಅಂದ್ರೆ ಮಿಡ್ಲ್‌ಸ್ಕೂಲ್ ಹುಡುಗರಾ?"

"ಅಲ್ಲ ಮಾರಾಯ್ರೆ, ಬಿಎಸ್ಸಿ ಎರಡನೇ ವರ್ಷದ ಮಕ್ಕಳು."

"ಅಲ್ರೀ ಮಂಜುನಾಥ್, ಆ ಹುಡುಗ್ರು ಖಂಡಿತ ಮಕ್ಕಳು ಮಾಡೋ ವಯಸ್ಸಿನವು. ಈಗಾಗ್ಲೆ ಹದಿನೆಂಟು ವರ್ಷಕ್ಕೆ ಹುಡುಗರಿಗೆ ಮದುವೆ ಮಾಡಬಹುದು ಅನ್ನೋ ಕಾನೂನು ಬರ್ತಾಯಿದೆ. ಆ ಲೆಕ್ಕದಲ್ಲಿ ಈ ಹುಡುಗರಿಗೆ ಒಂದು ವರ್ಷ ಜಾಸ್ತಿನೇ ಆಯ್ತಲ್ರೀ?"

"ಅದೌದು. ಇಲ್ಲಿ ಹುಡುಗರ ತಕರಾರು ಏನೂಯಿಲ್ಲ, ಆದರೆ ಪಾಠ ಮಾಡುವ ಜನಕ್ಕೆ ಅಶ್ಲೀಲ ಶಬ್ದ ಗೋಚರಿಸಿವೆಯಂತೆ."

"ಏನು, ಅಶ್ಲೀಲ ಶಬ್ದ ಅಂದ್ರೇನು?"

"ನಿಮಗೆ, ನಿಮ್ಮ ಪತ್ರಿಕೆಯವರಿಗೆ, ಅನಂತಮೂರ್ತಿಯವರಿಗೆ ಕೆಲ ಶಬ್ದಗಳು ಆಪ್ಯಾಯಮಾನವಾಗಿ ಕಾಣಿಸಬಹುದು. ಆದರೆ ಬೇರೆಯವರಿಗೆ ಹಾಗೆ ಕಾಣಬೇಕಲ್ಲಾ?"

"ಯಾಕೊ ನಿಮ್ಮ ತಕರಾರಿನ ಮೂಲದಲ್ಲಿ ಮೂಲಭೂತವಾದಿಗಳ ಕೈವಾಡ ಇರಂಗೆ ಕಾಣ್ತಾಯಿದೆಯಲ್ಲಾ?"

"ಇದರಲ್ಲಿ ಕೈವಾಡದ ಪ್ರಶ್ನೆ ಯಂತ ಬಂತು? 'ಸಂಸ್ಕಾರ' ಬುಕ್ಕಿನ ಪಾಠ ಕೇಳಿದ ಮಕ್ಕಳು ನಾರಣಪ್ಪನಂತಾಗ್ತರೆ ಗೊತ್ತುಂಟ?"

"ಈ ಮೊದ್ಲು ಪ್ರಾಣೇಶಚಾರಿಯಂಗಿದ್ರಾ?"

"ನೀವು ಕಟಕಿಯಾಡುವುದು ಬೇಡ. 'ಸಂಸ್ಕಾರ' ಕಾದಂಬರಿಯಲ್ಲಿ ಅಶ್ಲೀಲ ಪದಗಳುಂಟು. ನಾರಣಪ್ಪ ಬ್ರಾಹ್ಮಣರಿಗೆ ಬೈಯ್ಯುವುದನ್ನು ಕೇಳಲಿಕ್ಕಾಗ್ತದ? ಹೋಗಲಿ, ಪ್ರಾಣೇಶಾಚಾರ್ಯರು ಚಂದ್ರಿಯನ್ನು ಕೂಡುವ ಗಳಿಗೆಯನ್ನು ವಿವರಿಸಿದ್ದರಿಂದ ನಮ್ಮ ಹಲವಾರು ಹುಡುಗರು ಕ್ಯಾಬರೆ ನೋಡಲು ಹೋಗಿದ್ದವಂತೆ. ಮತ್ತ ಕೆಲವರು ಬ್ಲೂಫಿಲಂ ನೋಡಿದರಂತೆ."

"ಸಂಸ್ಕಾರ ಕಾದಂಬರಿ ಬಂದಮೇಲೆ ಕ್ಯಾಬರೆ, ಬ್ಲೂಫಿಲಂ ಶುರುವಾದೊ ಅನ್ನಿ?"


"ಶುರುವಾಗಿದ್ದಲ್ಲ, ರಶಾಗಿದ್ದು. ಪ್ರಾಣೇಶಾಚಾರ್ಯರು ಶಾಕುಂತಲೆ ವರ್ಣನೆ ಮಾಡಿದ್ದು ಕೇಳಿ

ಧೂತ್ತೋರಿ

ಯಾಹೂ

ಓಡಿಹೋದವ ಹೊಳೆದಂಡೆಯಲ್ಲಿ ಬೆಳ್ಳಿ ಎಂಬ ಹೆಂಗಸಿನೊಡನೆ ಸಂಭೋಗ ಮಾಡಿದ ಅಂತ 'ಸಂಸ್ಕಾರ'ದಲ್ಲಿ ಬರ್ತದೆ. ಇನ್ನ ಪೂರ್ತಿ ಸಂಸ್ಕಾರ ಓದಿದವರ ಕತೆಯಂತ ಆಗಬೇಕು ಹೇಳಿ?"

"ನೋಡ್ರಿ, ಅಶ್ಲೀಲ ಪದಗಳಿಗೇ ಸೀಮಿತವಾದ ಮೇಷ್ಟ್ರು ಈ ತರದ ಪುಸ್ತಕ ಪಾಠ ಮಾಡಕ್ಕಾಗಲ್ಲ, ಕನ್ನಡದಲ್ಲಿ ಪದ ಸಂಪತ್ತಿಲ್ಲವೆ? ಮರ್ಮಾಂಗವನ್ನ ಅನಂತಮೂರ್ತಿಯವರು ಗರ್ಭಗುಡಿಗೆ ಹೋಲಿಸಿದ್ದಾರಲ್ಲ, ಆ ಥರ ಪಾಠ ಹೇಳಕ್ಕೇನೂ?"



"ನೋಡಿ ಯಾಹೂ, 'ಸಂಸ್ಕಾರ' ಬ್ರಾಹ್ಮಣರ ನೈತಿಕತೆಯನ್ನು ಹಾಳು ಮಾಡಲೆಂದೇ ಬರೆದ ಪುಸ್ತಕ. ಆಗ ಕಾರಣಾಂತರದಿಂದ ಸುಮ್ಮನಿದ್ದ ಜನ ಈಗ ಪ್ರತಿಭಟಿಸಿದ್ದಾರೆ. ಯಾಕೆ ಗೊತ್ತುಂಟೊ? ಈಗ ಅವರ ಪ್ರತಿಭಟನೆಗೆ ಜಯಸಿಕ್ತವುಂಟು ಅದಕ್ಕೆ."

"ಜಯ ಸಿಗಬಹುದು, ಆದ್ರೆ 'ಸಂಸ್ಕಾರ'ಕ್ಕೆ ಜಯ ಸಿಕ್ಕಿ ಮೂರು ದಶಕ ಆಗಿದೆ ಕಂಡ್ರಿ."

"ಈಗಿನ ಪ್ರತಿಭಟನೆಯಿಂದ ಏನೂ ಪ್ರಯೋಜನ ಇಲ್ಲದಿರಬಹುದು. ಆದರೆ ಮುಂದೆ ಬರೆಯುವವರಿಗೆ ಎಚ್ಚರಿಕೆ ಆಗ್ತದಲ್ಲ, ಅಷ್ಟು ಸಾಕು. ನಮ್ಮ ಭೈರಪ್ಪನವರು ಎಷ್ಟು ಚಂದ ಬರಿತರೆ ನೋಡಿ. ಹಾಗೆ ಬರೆದರೆ ಎಲ್ಲರೂ ಓದುವುದುಂಟು. ಅವರ ಕಾದಂಬರಿಗಳು ಎಷ್ಟು ಮುದ್ರಣ ಕಂಡಿವೆ ಗೊತ್ತುಂಟ? ನಾವು ಈಗಲೂ ವರ್ಷಕ್ಕೊಮ್ಮೆ ಧರ್ಮಶ್ರೀ ಓದುವುದುಂಟು. ಅವರನ್ನಂತೂ ನಮ್ಮ ಮನೆಗಳಲ್ಲಿ ಭಗವದ್ಗೀತೆಯಂತೆ ಇಟ್ಟುಕೊಂಡು ಓದುತ್ತಿದ್ದೇವೆ. ಈ ನಮ್ಮ ಸಾಯಿತಿಗಳು ಬರೆದರೆ ಅಂತ ಪುಸ್ತಕ ಬರೀಬೇಕು, ಗೊತ್ತುಂಟ?"

"ಥೂ, ಥೂ, ಥೂತ್ತೇರಿ!!!"

ಪಾಯ್ಸನ್ ರಾಮನ ಅಟ್ಟಹಾಸ

ಸ್ಕೆಚ್ಚು ಮಿಸ್ಸಾಗಿದೆ. ಬೇಟೆಗೆ ಬಂದವರೇ ಬೋನಿಗೆ ಬಿದ್ದಿದ್ದಾರೆ.


ಕಡಬಗೆರೆಯ ಪಾಯ್ಸನ್ ರಾಮನ ಹತ್ಯೆಗೆಂದು ಬಂದಿದ್ದ ವಾಲೇ ಸೀನನ ಹಿಂದು ಪೂರ್ತಿಯಾಗಿ ಸಿಸಿಬಿ ಇನ್ಸ್‌ಪೆಕ್ಟರ್ ಬಾಳೇಗೌಡರ ಬಲೆಗೆ ಬಿದ್ದಿದ್ದು, ಇದಕ್ಕೆ ಪ್ರತಿಯಾಗಿ ಬೈಚಕುಪ್ಪೆ ಜಾನಿಯ ಅಣ್ಣ ಗಿರಿಯನ್ನು ಮುಗಿಸಲೆಂದು ಪಾಯ್ಸನ್ ರಾಮನ ಗ್ಯಾಂಗ್ ನಡುರಾತ್ರಿಯಲ್ಲಿ ಗೊಲ್ಲರಹಟ್ಟಿಗೆ ನುಗ್ಗಿ ಹಾವಳಿಯಿಟ್ಟಿದ್ದು, ಮಾಗಡಿ ಪೊಲೀಸರು ಯಾರೋ ಕಡಬಗೆರೆಯ ಶಿಷ್ಯರೆಂದು ಮೂವರು ಅಬ್ಬೇಪಾರಿಗಳನ್ನು ಹಿಡಿದು ಮೀಸೆ ತಿರುವಿದ್ದು, ಇತ್ತ ಮಚ್ಚನ ಯಾರೇ ಶಿಷ್ಯರು ಸಿಕ್ಕರೂ ಕತ್ತರಿಸಿ ಹಾಕಲೆಂದು ಮುಲಾಮನ ಬಂಟರಾದ ರಾಮ-ಲಕ್ಷ್ಮಣ ಸುಂಕದಕಟ್ಟೆ ಏರಿಯಾದಲ್ಲಿ ರೌಂಡಿಂಗ್‌ಗಿಳಿದದ್ದು...

ತಾವರೆಕೆರೆ ಎಂಬ ಪೊಲೀಸ್ ಠಾಣೆಯ ಸರಹದ್ದಿನಲ್ಲಿ ಬೀಡುಬಿಟ್ಟ ಅರ್ಧ ಬೆಂಗಳೂರಿನ ರೌಡಿಗಳ ಪಾಲಿಗೆ ಇದಕ್ಕಿಂತ ಅಭಯಾರಣ್ಯ ಎಲ್ಲಾದರೂ ಉಂಟೆ?

ಫೆಬ್ರವರಿ 6 ರ ಬುಧವಾರಕ್ಕೆ ಸಿಸಿಬಿ ಪೊಲೀಸರು ಸೆರೆಹಿಡಿದ ವಾಲೇ ಸೀನ ಮತ್ತು ಬೈಚಕುಪ್ಪೆಯ ಅಪ್ಪಿ ಗ್ಯಾಂಗ್ ಯಾಮಾರದೆ ಹೋಗಿದ್ದರೆ ಈ ಹೊತ್ತಿಗಾಗಲೇ ಕಡಬಗೆರೆ ಪಾಯ್ಸನ್ ರಾಮನ ಕತೆ ಏನಾಗುತ್ತಿತ್ತೊ? ನಡೆದ ದಾಳಿ ಮತ್ತು ಅದಕ್ಕೆ ಪ್ರತಿಯಾಗಿ ಕಡಬಗೆರೆ ಗ್ಯಾಂಗ್ ಇಡೀ ಗೊಲ್ಲರಹಟ್ಟಿಗೇ ನುಗ್ಗಿ ಮಾಡಿದ ಹಾವಳಿಗಳು ಕೊತ್ವಾಲ್-ಜಯರಾಜ್ ಕಾಲದ ನಡು ಬೀದಿ ಕಾಳಗಗಳನ್ನು ನೆನಪಿಸಿದ್ದಂತೂ ಸತ್ಯ.

ಅತ್ತ ಆಂಧ್ರದಲ್ಲಿ ಬಾಂಬ್ ಸಿಡಿದು ಕೊರಂಗು ಕಾಲು ಕಳಕೊಂಡ ಸುದ್ದಿ, ಇತ್ತ ಕಾಮಾಕ್ಷಿಪಾಳ್ಯದಿಂದ ಸಿಸಿಬಿ ಪೊಲೀಸರು ಮಚ್ಚನ ಬಂಟ ದಿನೇಶನನ್ನು ಹೊತ್ತೊಯ್ದು ಜೈಲಿಗೆ ದಬ್ಬಿದ ರೀತಿ, ಇನ್ನೊಂದೆಡೆ ಮಚ್ಚನ ಮತ್ತೊಬ್ಬ ಶಿಷ್ಯ ಕಳ್ಳಾ ಜಗ್ಗನ ನಿಗೂಢ ಓಡಾಟಗಳು, ಇದೆಲ್ಲಕ್ಕೂ ಒಪ್ಪವಿಟ್ಟಂತೆ ನಡೆದದ್ದು ಫೆಬ್ರವರಿ 2 ರ ಮಾಗಡಿ ರೋಡ್‌ನ ಸ್ಟ್ರೀಟ್ ಫೈಟಿಂಗ್.

ಅಂಜನಾನಗರದಿಂದ ಅನತಿದೂರದ ಚಿಕ್ಕಗೊಲ್ಲರಹಟ್ಟಿಯ ಬಸ್‌ಸ್ಟ್ಯಾಂಡ್‌ನ ಎದುರು ಬರುತ್ತಿದ್ದ ಒಂದು ಇನೋವಾ ಮತ್ತೊಂದು ಇಂಡಿಕಾ ಕಾರುಗಳ ಮೇಲೆ ಇದ್ದಕ್ಕಿದ್ದಂತೆ ಹದಿನೈದು ಮಂದಿ ಹುಡುಗರ ಗ್ಯಾಂಗೊಂದು ಅಟ್ಯಾಕ್ ಮಾಡುತ್ತದೆ. ಗಾಡಿ ಒಳಗಿದ್ದ ಒಂದಿಬ್ಬರನ್ನು ಹೊರಕ್ಕೆಳೆದಿದ್ದೇ ನಡುರಸ್ತೆಯಲ್ಲಿ ಹಿಡಿದು ಕತ್ತರಿಸುತ್ತಾರೆ. ಅಷ್ಟರಲ್ಲಿ ಒದೆ ತಿನ್ನುತ್ತಿದ್ದ ಒಂದಿಬ್ಬರು ಏನ್ ಗುರೂ ನಾವೆಲ್ಲ ಒಂದೇ ಅಲ್ವಾ? ನಮ್ಮನ್ನೇ ಕತ್ತರಿಸ್ತಿದ್ದೀರಲ್ಲಾ? ಎಂದು ಕಿರುಚಿದ್ದಾರೆ. ಅಲ್ಲಿಗೆ ಹೊಡೆದವರು ಮತ್ತು ಹೊಡೆಸಿಕೊಂಡವರಿಬ್ಬರೂ ಒಂದೇ ತಂಡದ ರೌಡಿಗಳೆಂಬುದು ಪರಸ್ಪರರಿಗೆ ಗೊತ್ತಾಗಿಬಿಟ್ಟಿದೆ. ಹೊಡೆದವರೇ ಹೊಡೆಸಿಕೊಂಡವರನ್ನು ಯಾವುದೋ ಆಸ್ಪತ್ರೆಗೊಯ್ದು ಹಾಕಿದ್ದಾರೆ. ಹೀಗೆ ಹೊಡೆಸಿಕೊಂಡವರ ಪೈಕಿ ಬಸವೇಶ್ವರನಗರದ ಬಿಜೆಪಿ ಕೌನ್ಸಿಲರ್ ಪದ್ಮರಾಜ್‌ರ



ಪಾಯ್ಸನ್ ರಾಮ

ಭಾಮೈದನೂ ಒಬ್ಬ!

ವಾಸ್ತವ ಸಂಗತಿಯೇನೆಂದರೆ ಆವತ್ತು ಒಂದು ಇನೋವಾ ಮತ್ತು ಇನ್ನೊಂದು ಇಂಡಿಕಾ ಗಾಡಿಗಳಲ್ಲಿ ಬರುತ್ತಿದ್ದದ್ದು ಮಚ್ಚನ ಶಿಷ್ಯ ಪೆದ್ದುಗುಂಡನ ಗ್ಯಾಂಗು. ಅದೂ ಕಡಬಗೆರೆ ಪಾಯ್ಸನ್ ರಾಮನನ್ನು ಹೊಂಚು ಹಾಕೇ ಹೊರಟಿತ್ತು. ಅವರ ಮೇಲೆ ದಾಳಿ ಮಾಡಿದ ವಾಲೇ ಸೀನನ ಗ್ಯಾಂಗಿಗೂ ಕಡಬಗೆರೆ ರಾಮನೇ ಬೇಕಾಗಿತ್ತು. ಒಂದೇ ಉದ್ದೇಶಕ್ಕೆಂದು ಬೇಟೆಗಿಳಿದ ಎರಡು ಹಂತಕ ಪಡೆಗಳು ಸಂಪರ್ಕ ಮತ್ತು ಸಮನ್ವಯದ ಕೊರತೆಯಿಂದಾಗಿ ಪರಸ್ಪರ ಅವರವರಲ್ಲೇ ಡಿಕ್ಕಿ ಹೊಡೆದುಕೊಂಡವು.

ರಾ. ಸೋಮನಾಥ್

ಘಟನೆ ಏನೇ ಆಗಿರಲಿ, ಅಲ್ಲಿಗೆ ಕಡಬಗೆರೆ ಪಾಯ್ಸನ್ ರಾಮನ ತಲೆ ತೆಗೆಯಲು ಮಚ್ಚನ ಶಿಷ್ಯರ ಅಸಂಖ್ಯಾತ ತಂಡಗಳು ಬೀದಿಗಿಳಿದದ್ದಂತೂ ಸತ್ಯವಾಗಿತ್ತು. ಬಹುಶಃ ಇದು ಅಲ್ಲಿಗೇ ಮುಗಿಯಬೇಕಿತ್ತು, ಆದರೆ ಹೇಗೋ ಇದು ಪಾಯ್ಸನ್ ರಾಮನ ಕಿವಿಗೆ ಮುಟ್ಟಿದೆ. ಆತ ತಕ್ಷಣವೇ ಸಿಸಿಬಿ ಇನ್ಸ್‌ಪೆಕ್ಟರ್ ಬಾಳೇಗೌಡರಿಗೆ ವಿಷಯ ಮುಟ್ಟಿಸಿದ್ದಾನೆ. ಇನ್ನ ಸತ್ಯನಿಷ್ಠ(!) ಇನ್ಸ್‌ಪೆಕ್ಟರ್ ಬಾಳೇಗೌಡರು ಕೇಳಬೇಕೆ? ತಕ್ಷಣವೇ ಅಶೋಕನ್ ಕರೇಗೌಡರ್, ವಾಸುದೇವ ನಾಯಕ್ ಮುಂತಾದವರಿದ್ದ ಸಿಸಿಬಿ ಪೊಲೀಸ್ ಪಡೆಗಳು ಮಾಗಡಿ ರೋಡಿನ ಗೊಲ್ಲರಹಟ್ಟಿ, ತಾವರೆಕೆರೆ, ಅಂಜನಾಗರ, ಸುಂಕದಕಟ್ಟೆಗಳಲ್ಲಿ ಕೋಂಬಿಂಗ್ ಶುರು ಹಚ್ಚಿಕೊಂಡಿದ್ದಾರೆ.



ಪಾಯ್ಸನ್ ಗ್ಯಾಂಗ್ ದಾಳಿಗೆ ನಲುಗಿದ ಗೊಲ್ಲರಹಟ್ಟಿ

ಸಿಕ್ಕಿದ್ದು ವಾಲೇ ಸೀನನ ಗ್ಯಾಂಗು!

ವಿಚಿತ್ರವೆಂದರೆ ಸೀನನ ಜೊತೆ ಸಿಕ್ಕಿಬಿದ್ದ ಅಪ್ಪಿ ಅಲಿಯಾಸ್ ಸಂತೋಷ್ ಸ್ವತಃ ಕಡಬಗೆರೆ ರಾಮನ ಬಲಗೈ ಬಂಟ ವೈನ್ಸ್ ಲೋಕಿಯ ಬಾಮೈದ. ಈ ವೈನ್ಸ್ ಲೋಕಿಯ ಅಣ್ಣನೇ ಪಟಾಕಿ ರಾಜ. ಸದ್ಯ ಮಾಚೋಹಳ್ಳಿ ಪಂಚಾಯ್ತಿಗೆ ಅಧ್ಯಕ್ಷನಾಗಿರುವ ಕಡಬಗೆರೆ ಪಾಯ್ಸನ್ ರಾಮನ ಅಣ್ಣನೇ ಡಾಬಾ ಸೀನ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಷ್ಟೂ ದಿನ ಮಾಗಡಿ ತಾಲ್ಲೂಕಿನ ತಾವರೆಕೆರೆ ಪೊಲೀಸ್ ಠಾಣೆಯ ಅನಭಿಷಕ್ತ ದೊರೆಯಂತೆ ಮೆರೆದವನು ಇದೇ ಜೇಕೆ ಸೀನ ಅಲಿಯಾಸ್ ಡಾಬಾ ಸೀನ. ಅಂಜನಾನಗರದ ಬಳಿ ಈತನಿಗೆ ಜೇಕೆ ಡಾಬಾ ಹೆಸರಿನ ಬಾರ್ ಇದೆ. ಮಾಗಡಿ ಶಾಸಕ ಬಾಲಕೃಷ್ಣ, ಡೆಪ್ಯೂಟಿ ಮೇಯರ್ ಪುಟ್ಟರಾಜು ಜೊತೆ ಮಾಚೋಹಳ್ಳಿ ಸುತ್ತಮುತ್ತ ರಿಯಲ್ ಎಸ್ಟೇಟ್ ದಂಧೆ ನಡೆಸಿಕೊಂಡಿದ್ದ ಡಾಬಾ ಸೀನ ತಮ್ಮ ಕಡಬಗೆರೆ ರಾಮನಷ್ಟೇ ಕ್ರಿಮಿನಲ್.

ತಾವರೆಕೆರೆ ಪೊಲೀಸ್ ಠಾಣೆಗೆ ಈತನಕ ಬಂದ ಸಬ್‌ಇನ್ಸ್‌ಪೆಕ್ಟರ್‌ಗಳ ಪೈಕಿ ಅನೇಕರನ್ನು ಡಾಬಾ ಸೀನನೇ ಹಾಕಿಸಿಕೊಂಡಿದ್ದ. ಜೆಡಿಎಸ್ ಅಧಿಕಾರಕ್ಕೆ ಬಂದ ಮೇಲಂತೂ ಕಾಮಾಕ್ಷಿಪಾಳ್ಯದಿಂದ ಹಿಡಿದು ಬ್ಯಾಡರಹಳ್ಳಿ, ತಾವರೆಕೆರೆ, ಮಾಗಡಿ ತನಕ, ಇತ್ತ ಯಶವಂತಪುರದಿಂದ ಹಿಡಿದು ಪೀಣ್ಯ, ನೆಲಮಂಗಲ ಮತ್ತು ತುಮಕೂರಿನ ದಾಬಸ್‌ಪೇಟೆ, ಕುಣಿಗಲ್ ತನಕ ಜೆಡಿಎಸ್ ಹಂಗಿನ ಪೊಲೀಸ್ ಇನ್ಸ್‌ಪೆಕ್ಟರ್‌ಗಳೇ ವಕ್ಕರಿಸಿಕೊಂಡರು. ನೆಲಮಂಗಲ ಸುತ್ತಮುತ್ತ ಸರಣಿ ಹಂತಕ ಚೆತ್ತನಗೆರೆ ಸೀನನ ಸಾಮ್ರಾಜ್ಯವಾದರೆ, ಮಾಗಡಿ ರೋಡ್, ಕಡಬಗೆರೆ, ತಾವರೆಕೆರೆ ಏರಿಯಾಗಳನ್ನು ಕಡಬಗೆರೆ ರಾಮ ನಿಯಂತ್ರಿಸತೊಡಗಿದ. ಪಕ್ಕದ ಸುಂಕದಕಟ್ಟೆ ಏರಿಯಾಕ್ಕೆ ಮುಲಾಮನ ಬಂಟರಾದ ರಾಮ-ಲಕ್ಷ್ಮಣ ಆಮರಿಕೊಂಡರೆ ಗುರು ಮುಲಾಮ ಲಗ್ಗೆರೆ, ರಾಜಗೋಪಾಲನಗರದ ರಿಯಲ್ ಎಸ್ಟೇಟ್ ಸಂಭಾಳಿಸುತ್ತಿದ್ದ. ಇತ್ತ ಕಾಮಾಕ್ಷಿಪಾಳ್ಯದ ಪಾರುಪತ್ತೆ ಪೂರ್ತಿ ಗೂಳಿ ಬಸವ ಮತ್ತು ಧರಣಿಯ ಅಧಿಪತ್ಯಕ್ಕೊಳಪಟ್ಟಮೇಲೆ ಈ ಭಾಗದಲ್ಲಿದ್ದ ಮಚ್ಚನ ಶಿಷ್ಯರೆಲ್ಲ ಚೆಲ್ಲಾಪಿಲ್ಲಿಯಾಗಿ ಹೋದರು.



ಮಾಗಡಿ ಇನ್ಸ್‌ಪೆಕ್ಟರ್ ರವಿಶಂಕರ್

2005 ರ ನವೆಂಬರ್ ಒಂದರಂದು ಯಲಹಂಕದ ಜ್ಯುಡಿಷಿಯಲ್ ಲೇಔಟನಲ್ಲಿ ನಡೆದ ಮಚ್ಚನ ಹತ್ಯೆಯಲ್ಲಿ ಇವರೆಲ್ಲರ ಪಾತ್ರವಿದ್ದೇ ಇತ್ತು. ಮಚ್ಚನ ಪರಮಾಪ್ತರಾದ ಕೋತಿರಾಮ ಮತ್ತು ಜಾನಿ ಮಂಡ್ಯ ಕೃಷ್ಣನ ಕೆ... ಕೇಸು ಹೊತ್ತು ಚಿತ್ರದುರ್ಗ ಜೈಲು ಸೇರಿಕೊ... ಮೇಲೆ ಕಡಬಗೆರೆ ರಾಮನದೇ ಸಾಮ್ರಾಜ್ಯ... ಹೋಯಿತು. ಅಸಲಿಗೆ ಮಚ್ಚನನ್ನು ಮಾಗಡಿ ರೋ... ಕಡಬೆಗೆರೆಗೆ ಕರೆತಂದಿದ್ದೇ ಪಾಯ್ಸನ್ ರಾಮ. ... ಕಡುವೈರಿ ಬೈಚಕುಪ್ಪೆ ಜಾನಿ ಮತ್ತು ರಾಮ ಇಬ್ಬ... ಸಂಬಂಧಿಗಳು. ಕಳೆದ ಪಂಚಾಯ್ತಿ ಚುನಾವಣೆಯ... ಮಚ್ಚ ರಾಮನ ಅಣ್ಣ ಕೃಷ್ಣಮೂರ್ತಿಯನ್ನು ಬೆಂಬಲಿ... ತನಗೆ ಸಿಗಬೇಕಿದ್ದ ಪಂಚಾಯ್ತಿ ಅಧ್ಯಕ್ಷತೆ ತನ್ನ ಅ... ಹೆಂಡತಿಗೆ (ಈಕೆ ಜಾನಿಯ ಅಕ್ಕ) ಸಿಕ್ಕಿದ್ದಕ್ಕೆ ಮುಚ್ಚ... ಕಾರಣ ಎಂದು ಬಗೆದ ರಾಮ ಮಚ್ಚನ ಕಡುವೈರಿಗಳ... ಮುಲಾಮ ಮತ್ತು ಕಾಮಾಕ್ಷಿಪಾಳ್ಯದ ಧರಣಿಯ ಜೊ... ಕೈಜೋಡಿಸಿ ಉಪಾಯವಾಗಿ ಮಚ್ಚನನ್ನೇ ಮುಗಿಸಿಬಿ... ಒಬ್ಬ ಮಚ್ಚ ಮುಗಿದದ್ದೇ ಇಡೀ ಬೆಂಗಳೂ... ಅಂಡರ್‌ವರ್ಲ್ಡ್ ಹುಚ್ಚೆದ್ದ ಜೇನುಗೂಡಿನಂತಾಯ... ಮಚ್ಚನ ಪರವಹಿಸಿ ನೇರಾನೇರ ಅಖಾಡಕ್ಕಿಳಿದವ... ಕೊರಂಗು. ಮಚ್ಚ ಸತ್ತ ಹನ್ನೊಂದನೇ ದಿ... ತಿಥಿಯಂದೇ ಕೋತಿರಾಮನ ಪಡೆ ಮುಲಾಮನ ಬ... ಮಂಡ್ಯ ಕೃಷ್ಣನನ್ನು ಕತ್ತರಿಸಿ ಹಾಕಿತು. ಅದಾಗಿ ... ದಿನಕ್ಕೇ ತಿಮ್ಮೇನಹಳ್ಳಿ ಸೂರಿಯನ್ನು ಆತನ ಥೇ... ಟೋನಿಯ ಜೊತೆಗೇ ಕೆಂಗೇರಿ ಬಳಿ ಕೊಂದರು.

ಸೂರಿ ಹತ್ಯೆಗೆ ಪ್ರತಿಯಾಗಿ... ಹೆಬ್ಬೆಟ್ ಮಂಜನ ಗ್ಯಾಂಗ್ ಕೊರಂಗು ಕೈ ಕತ್ತರಿಸಿದ್ದು ದಾವಾನಿಲಕ್ಕೆ ತುಪ್ಪ ಸುರಿದಂತಾಯಿತು. ಕೆರಳಿದ ಕೊರಂಗು ಒಂದೋ ಮುಲಾ... ತೆಗೀತೀನಿ, ಇಲ್ಲಾ ಕಡಬಗೆರೆ ರಾಮ, ಗೂಳಿ ಬಸವ, ಹೀಗೆ ... ಮಚ್ಚನ ಕೊಲೆಗೆ ಕಾರಣರಾದ ... ಯಾರನ್ನಾದ್ರೂ ತೆಗಿತೀನಿ ಎಂದವನೇ ಜೈಲಿಂದ ಬಂದ... ನೇರವಾಗಿ ಆಂಧ್ರ ಸೇರಿಕೊಂಡ... ಡಜನ್ನುಗಟ್ಟಲೇ ಕೈಬಾಂಬ್‌ಗಳ... ರೆಡಿಮಾಡಿಕೊಂಡ. ಮತ್ತೊಂದು... ಕೋತಿರಾಮ, ಬೈಚಕುಪ್ಪೆ ಜಾ... ಮತ್ತು ಕತ್ರಿಗುಪ್ಪೆ ಲಿಂಗನ ಗ್ಯಾಂಗ್ ತಮ್ಮ ಒಬ್ಬೊಬ್ಬನೇ ವೈರಿಯನ್ನು ಮುಗಿಸಲು ಹೊಂಚು ಹಾಕುತ್ತಿತ್ತು. ಇದರ... ಪ್ರತಿಫಲವೇ ಮಂಡ್ಯದ ಜಡೇ... ರವಿಯ ಹತ್ಯೆ.

ಹೆಸರಿಗದು ಅಶೋಕ್ ... ಕೃತ್ಯವಾಗಿತ್ತಾದರೂ ಇಡೀ ಕಾರ್ಯಾಚರಣೆಯ ಹೊಣೆ... ಕೊರಂಗು ಮತ್ತು ಕೋತಿರಾ... ದಾಗಿತ್ತು. ಇದಾದ ತಿಂಗಳಿಗೇ... ತಿಮ್ಮೇನಹಳ್ಳಿ ಗೋವಿಂದನ ಕೊಲೆಯಾಯಿತು. ಅಲ್ಲಿಗೆ ಕೊರಂಗು ಕೋತಿರಾ... ವಿರೋಧಿ ಗ್ಯಾಂಗಿನ ಕೆಲ ಪ್ರಮುಖ ವಿಕೆಟ್ಟುಗಳು ಬಿ... ದರೂ ಮಚ್ಚನ ಹತ್ಯೆಯ ಸೇಡು ಮಾತ್ರ ಹಾಗೇ ಉ... ಬಿಟ್ಟಿತು. ಚಿತ್ರದುರ್ಗ ಜೈಲಲ್ಲಿ ಕುಳಿತೇ ಸಾವಿನ ... ಹೆಣೆಯುತ್ತಿದ್ದ ಕೋತಿರಾಮ ಮತ್ತು ಜಾನಿಗೆ ... ತಿಂಗಳ ಹಿಂದೆ ಕುತೂಹಲಕರ ಸುದ್ದಿಯೊಂದು ...

ಅದು ಅಪ್ಪಿ ಉರ್ಫ್ ಸಂತೋಷ್ ಎಂಬ ರೌಡಿಗೂ ಕಡಬಗೆರೆ ರಾಮನಿಗೂ ಮಧ್ಯೆ ಸಂ... ಹಳಸಿದ ಸುದ್ದಿಯಾಗಿತ್ತು!

ಅಪ್ಪಿ ನಿನ್ನೆ ಮೊನ್ನೆಯತನಕ ಕಡಬಗೆರೆ ರಾ... ಪಡೆಯಲ್ಲಿದ್ದ. ಈತನನ್ನು ಮುಂದಿಟ್ಟುಕೊ... ಮಾಚೋಹಳ್ಳಿ ಕಾಲೋನಿಯಲ್ಲಿ ಕೇಬಲ್ ನಡೆಸು... ರನ್ನು ಹೆದರಿಸಿ ರಾಮ ಅವರ ಕೇಬಲ್ ಕಿತ್ತುಕೆ... ಹಾಗೇ ಕಿತ್ತುಕೊಂಡ ಕೇಬಲ್ ಸಾಮ್ರಾಜ್ಯದ ... ಭಾಗವನ್ನು ತನಗೆ ಬಿಟ್ಟುಕೊಡುವಂತೆ ಅಪ್ಪಿ ರಾಮ... ಕೇಳಿದ್ದಾನೆ. ರಾಮ ಖತರ್‌ನಾಕ್. 'ಕೊಡಾಕಿಲ್ಲ ... ಮಾಡ್ಕೋತಿಯೋ ಮಾಡ್ಕ....!' ಎಂದುಬಿಟ್ಟ.

ಅಷ್ಟಕ್ಕೆ ರೊಚ್ಚಿಗೆದ್ದ ಅಪ್ಪಿ ಸೀದಾ ಚಿತ್ರದುರ್ಗ ... ಬಂದವನೇ ಜಾನಿಗೆ 'ಎಂಟ್ರಿ' ಹಾಕಿದ್ದಾನೆ. ಅಪ್ಪಿ ... ನಂಬಿಕೆಗೆ ಪಾತ್ರನಲ್ಲ, ಯಾವಾಗ ಯಾರಿಗೆ ... ಬಗೆಯುತ್ತಾನೋ ಹೇಳುವಂತಿಲ್ಲ, ಇದು ಗೊತ್ತಿದ್ದೂ... ಬಂದಷ್ಟು ಬರಲಿ ಎಂದು ಅಪ್ಪಿಯ ಜೊತೆ... ಜೋಡಿಸಿದ್ದಾನೆ. ಒಂದೋ ವೈನ್ ಲೋಕೀನಾ ಮು... ಸಿಕ್ಕಿದ್ರೆ ಕಡಬಗೆರೆ ರಾಮನ್ನೇ ತೆಗೀತೀನಿ. ನನ್ನ ... ಹತ್ತು ಮಂದಿ ಹುಡುಗರನ್ನ ಕಳಿಸು' ಎಂದಿದ್ದಾನೆ.

ಇಷ್ಟಾಗಿದ್ದೇ ಜಾನಿಯ ದೋಸ್ತ್ ಲಿಂಗ ತನ್ನ ... ಪ್ರಮುಖ ಬ್ಯಾಟ್ಸ್‌ಮನ್ ವಾಲೇ ಸೀನನ ಜೊತೆ ತ್ಯಾ... ನಗರದ ಸಂತೋಷ, ರಘುವನಹಳ್ಳಿಯ

ಸುಂಕದಕಟ್ಟೆಯಲ್ಲಿ ರಾಮ-ಲಕ್ಷ್ಮಣರ ಹಾವಳಿ

ಸುಂಕದಕಟ್ಟೆಯಿಂದ ತಾವರೆಕೆರೆ ತನಕದ ಪಾತಕ ಜಾಲದಲ್ಲಿ ಕಡಬಗೆರೆ ರಾಮನಿಗಿಂತಲೂ ಬಲಾಢ್ಯನಾದವನು ಮುಲಾಮ. ಒಂದಾನೊಂದು ಕಾಲಕ್ಕೆ ಆತನ ನಂಬಿಕಸ್ಥ ಬಂಟರಂತಿದ್ದ ರಾಮ-ಲಕ್ಷ್ಮಣ ಎಂಬ ರಕ್ತಪಿಪಾಸು ಸಹೋದರರಿಬ್ಬರೂ ಸದ್ಯ ಮುಲಾಮನ ವಿರುದ್ಧ ತಿರುಗಿಬಿದ್ದಾರೆಂದೂ, ಆ ಕಾರಣಕ್ಕೇ ಮುಲಾಮ ಊರುಬಿಟ್ಟು ದೇವನಹಳ್ಳಿ, ರಾಜರಾಜೇಶ್ವರಿನಗರ ಮತ್ತು ಚಿಕ್ಕಮಗಳೂರುಗಳಲ್ಲಿ ತಲಾ ಒಂದೊಂದು ಬಂಗಲೆ ಕಟ್ಟಿಕೊಂಡು ಅಜ್ಞಾತವಾಸದಲ್ಲಿದ್ದಾನೆಂದೂ ಹಬ್ಬಿದ ವದಂತಿಯನ್ನು ಆತನ ಯಾರೇ ದುಷ್ಮನ್‌ಗಳೂ ನಂಬುತ್ತಿಲ್ಲ.



ರಾಮ

ಅದು ಮುಲಾಮ ಹೂಡಿದ ನಾಟಕವಲ್ಲದೇ ಮತ್ತೇನಿಲ್ಲ, ಹಾಗೇ ತನ್ನ ವಿರೋಧಿಗಳನ್ನು ಯಾಮಾರಿಸಿ ಮುಗಿಸುವುದು ಮುಲಾಮನ ತಂತ್ರ. ಸದ್ಯ ಮಚ್ಚನ ಯಾರೇ ಶಿಷ್ಯರನ್ನು ಕಂಡರೂ ಮುಗಿಸಿಬಿಡಿ ಎಂದು ತಮ್ಮ ಶಿಷ್ಯರಿಗೆ ರಾಮ-ಲಕ್ಷ್ಮಣ ಆದೇಶ ಕೊಟ್ಟಿದ್ದಾರೆ. ಇಡೀ ಸುಂಕದಕಟ್ಟೆ ಮತ್ತದರ ಸುತ್ತಲ ಏರಿಯಾಗಳಲ್ಲಿ ಸಣ್ಣದೊಂದು ಲ್ಯಾಂಡ್‌ವಾರ್ ನಡೆದರೂ ಅದರಲ್ಲಿ ರಾಮ-ಲಕ್ಷ್ಮಣರದ್ದೇ ಕೈವಾಡವಿರುತ್ತದೆ. ಇಲ್ಲಿಗೆ ತಿಂಗಳ ಹಿಂದಷ್ಟೇ ಮಚ್ಚನ ಶಿಷ್ಯ ಕುರಿ ಮತ್ತಾತನ ಗ್ಯಾಂಗ್ ರಾಮ-ಲಕ್ಷ್ಮಣರ ಶಿಷ್ಯ ಕಾಪರ್‌ನನ್ನು ಹಿಡಿದು ಬಡಿದಿದೆ. ಅದಕ್ಕೆ ಪ್ರತಿಯಾಗಿ ಕುರಿ, ಮಾಯಣ್ಣ, ರಾಜ ಮತ್ತು ಪ್ರಸಾರ ಯಾರೇ ಸಿಕ್ಕರೂ ಮುಗಿಸುವಂತೆ ರಾಮ-ಲಕ್ಷ್ಮಣ ಸುತ್ತೋಲೆ ಹೊರಡಿಸಿದ್ದಾರೆ.

ಹಾಗಂತ ಮಚ್ಚನ ಶಿಷ್ಯರೇನೂ ಸುಮ್ಮನೇ ಕೂತಿಲ್ಲ, ಮುಲಾಮ ಸಿಗದಿದ್ದರೇನಂತೆ ಆತನ ಬಂಟರಾದ ರಾಮ-ಲಕ್ಷ್ಮಣ ಯಾರೇ ಸಿಕ್ಕರೂ ರಕ್ತ ಕುಡಿಯುತ್ತೇವೆಂದು ಫೀಲ್ಡಿಗಿಳಿದಿದ್ದಾರೆ. ಏನಾಗುತ್ತೋ...?



ಲಕ್ಷ್ಮಣ

ಮುಸ್ಲಿಂ ಉಗ್ರ–ಮೀಡಿಯಾ ವ್ಯಗ್ರ


ಕರ್ನಾಟಕ ಪೊಲೀಸರಿಗೆ ಹೊಸದೊಂದು ತಲೆನೋವು ತರಲಿರುವ ಆತಂಕಕಾರಿ ಘಟನೆಗಳಿವು. ಕಳೆದ ಜನವರಿ 11 ರಂದು ದಾವಣಗೆರೆ ಜಿಲ್ಲೆಯ ಹೊನ್ನಾಳಿಯಲ್ಲಿ ಆಕಸ್ಮಾತಾಗಿ ಅರೆಸ್ಟಾದ ರಿಯಾಜುದ್ದೀನ್ ಅಲಿಯಾಸ್ ಮಹಮದ್ ಗೌಸ್ ಹಾಗೂ ಹುಬ್ಬಳ್ಳಿ ಕಿಮ್ಸ್‌ನ ಡ್ರಾಪ್‌ಔಟ್ ವಿದ್ಯಾರ್ಥಿ ಅಸಾದುಲ್ಲಾ ಅಬುಬಕರ್‌ರನ್ನು ಮೊದಮೊದಲು ಸಾಧಾರಣ ಬೈಕ್ ಕಳ್ಳರೆಂದು ಲೋಕಲ್ ಪೊಲೀಸರು ಭಾವಿಸಿದ್ದರು. ಅವತ್ತು ಇವರಿಬ್ಬರ ಹತ್ತಿರ ನಾಲ್ಕಾರು ಮೋಟಾರ್ ಬೈಕ್‌ಗಳ ನಂಬರ್ ಪ್ಲೇಟ್‌ಗಳು ಸಿಕ್ಕವೆಂಬ ಅನುಮಾನದ ಮೇಲೆ ಈ ಬಂಧನ ನಡೆದಿತ್ತು. ನಂತರ ಏನಾಯಿತೆಂಬುದು ಈಗ ರಾಜ್ಯದ ಬಹುತೇಕರಿಗೆ ಗೊತ್ತಾಗಿದೆ. ಈ ಬಂಧಿತರ ಪೈಕಿ ಒಬ್ಬನಾದ ರಿಯಾಜುದ್ದೀನ್ ಅಲಿಯಾಸ್ ಮಹಮದ್ ಗೌಸ್ ಸಾಮಾನ್ಯನಲ್ಲ. ಅವನಿಗೆ ವಿದೇಶಿ ಉಗ್ರಗಾಮಿ ಸಂಘಟನೆಗಳೊಂದಿಗೆ ಲಿಂಕ್‌ಗಳಿವೆ. ಭಾರತದ ನಾನಾ ಕಡೆ ಕಳೆದ 2-3 ವರ್ಷಗಳಲ್ಲಿ ನಡೆದಿರುವ ಬಾಂಬ್ ಸ್ಫೋಟಗಳಲ್ಲಿ ಇವನ ಕೈವಾಡವಿರಬಹುದೆಂಬ ಭಾರಿ ಶಂಕೆ ರಾಜ್ಯ ಪೊಲೀಸರಿಗೆ ಬಂದಿದೆ. ಜೊತೆಗೆ 2005ರ ಡಿಸೆಂಬರ್‌ನಲ್ಲಿ ನಡೆದ ಬೆಂಗಳೂರಿನ IISC ದಾಳಿಯಲ್ಲೂ ರಿಯಾಜುದ್ದೀನ್ ಭಾಗಿಯಾಗಿದ್ದಿರಬಹುದೆಂದು ರಾಜ್ಯ ಪೊಲೀಸರಿಗೆ ಅನುಮಾನ ಬಂದಿದೆ. ಒಮ್ಮೆ ಇಂಥ ಅನುಮಾನದ ಭೂತ ಪೊಲೀಸರ ತಲೆ ಹೊಕ್ಕಿತೆಂದರೆ ಅವರು ರಿಯಾಜುದ್ದೀನ್ ಥರದವರು ಏನೇನು ಮಾಡಿರಬಹುದೆಂಬ ಅನೇಕ ಸಾಧ್ಯತೆಗಳನ್ನು ಪರಿಶೀಲಿಸಲೇಬೇಕು, ಅದು ಸರಿ ಕೂಡಾ.

ಕರ್ನಾಟಕದಲ್ಲಿ ಈಗಾಗಲೇ ಹಿಂದೂ ಮೂಲಭೂತವಾದಿ ಭಯೋತ್ಪಾದಕ ಗುಂಪುಗಳ ಟೆರರಿಸ್ಟ್ ಚಟುವಟಿಕೆಗಳು ಎಲ್ಲೆ ಮೀರುವಂತೆ ಬೆಳೆಯುತ್ತಲೇ ಹೋಗುತ್ತಿವೆ. ಇವರ ಉಪಟಳದ ಜೊತೆಗೆ ಬೆಲೆ ಏರಿಕೆ, ರೈತರ ಆತ್ಮಹತ್ಯೆಗಳ ಸರಮಾಲೆ, ಪುರೋಹಿತಶಾಹಿಗಳ ಪುಂಡಾಟಿಕೆಗಳು ನಡೆಯುತ್ತಿವೆ. ಇಂಥ ಕಷ್ಟಕರ ಸನ್ನಿವೇಶದಲ್ಲಿ ಕೆಲ ಮುಸ್ಲಿಂ ಯುವಕರು ಉಗ್ರವಾದದತ್ತ ದೂಡಲ್ಪಟ್ಟರೆ ಕರ್ನಾಟಕದಲ್ಲಿ ಶಾಂತಿ ನೆಲೆಸುವ ಮಾತು ದೂರವೇ ಉಳಿಯುತ್ತದೆ.

ಇಂಥ ಸಂದರ್ಭದಲ್ಲೇ ನಡೆದಿರುವ ರಿಯಾಜುದ್ದೀನ್ ಎಂಬುವನ ಬಂಧನ ಹಾಗೂ ಅವನು ಪೊಲೀಸರಿಗೆ ಹೇಳಿದ್ದಾನೆ ಎನ್ನಲಾಗಿರುವ ಅಸ್ಪಷ್ಟ ವಿವರಗಳು ನಿಜಕ್ಕೂ ಆತಂಕ ಹುಟ್ಟಿಸುವಂತಿವೆ. ಇವೆಲ್ಲಕ್ಕಿಂತ ಹೆಚ್ಚಾಗಿ ಕರ್ನಾಟಕದ ಸುದ್ದಿ ಮಾಧ್ಯಮಗಳು ಸ್ವಯಂಪ್ರೇರಿತರಾಗಿ ನಡೆಸುತ್ತಿರುವ ತನಿಖೆ ಹಾಗೂ ಪ್ರಕಟಿಸುತ್ತಿರುವ 'ಸತ್ಯಾಂಶ'ಗಳಂತೂ ಯಾರು ಯಾರನ್ನೂ ನಂಬದಂತಹ ಪರಿಸ್ಥಿತಿ ಸೃಷ್ಟಿಸುತ್ತಿವೆ.

ಯಾರು ಈ ರಿಯಾಜುದ್ದೀನ್

ಮೇಲ್ನೋಟಕ್ಕೆ ಹಾಗೂ ಇದುವರೆಗಿನ ಲಭ್ಯ ಮಾಹಿತಿಗಳ ಪ್ರಕಾರ ಹೈದರಾಬಾದ್ ಮೂಲದ ಈ



ಶಂಕಿತ ಉಗ್ರ

ರಿಯಾಜುದ್ದೀನ್ ಹೆಚ್ಚಿನ ತನಿಖೆಗೆ ಒಳಪಡಬೇಕಾದ ವ್ಯಕ್ತಿ ಎನಿಸುತ್ತಿದೆ. ಹುಬ್ಬಳ್ಳಿಯ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿ ಅಸಾದುಲ್ಲಾ ಅಬೂಬಕರ್ ಎಂಬುವನ ಬಳಿ ಅಡುಗೆ ಸಹಾಯಕನಾಗಿದ್ದೆ ಎಂದು ಹೇಳಿಕೊಂಡಿರುವ ಈ ರಿಯಾಜುದ್ದೀನ್ ಮೂಲತಃ ಹೈದರಾಬಾದಿನವನು. ಅವನ ತಂದೆ ನಾಸಿರುದ್ದೀನ್ ಓರ್ವ ಮೌಲ್ವಿ. ಈಗ್ಗೆ ಕೆಲ ವರ್ಷಗಳ ಹಿಂದೆ ಈ ನಾಸೀರುದ್ದೀನ್ **Tehreek-Tahfooz Shaer-e-Islam (TTSI)** ಎಂಬ ಪಂಥ ಹುಟ್ಟು ಹಾಕಿದ. ಇದು ಇಸ್ಲಾಂ ಧರ್ಮ ಪ್ರಚಾರದ ಉದ್ದೇಶಕ್ಕಾಗಿ ರೂಪಿಸಲಾಗಿದ್ದ ಪಂಥ ಎನ್ನಲಾಗಿದೆ.

2004ರಲ್ಲಿ ಗುಜರಾತಿನ ಸರಭಕ್ಷಕ ಬಿಜೆಪಿ ನಾಯಕ ಹರೇನ್ ಪಾಂಡ್ಯನ ಹತ್ಯೆಯಾಯಿತಲ್ಲ, ಆ ಕೊಲೆ ಸಂಚಿನಲ್ಲಿ ಹೈದರಾಬಾದಿನ ಈ ನಾಸೀರುದ್ದೀನ್ ಕೂಡ ಭಾಗಿ ಎಂದು ಆರೋಪಿಸಿ ಗುಜರಾತ್ ಪೊಲೀಸರು ನಾಸಿರ್‌ನನ್ನು ಬಂಧಿಸಿ ಕರೆದೊಯ್ದಿದ್ದರು. ಅದೇ ದಿನ ಈ ಬಂಧನ ವಿರೋಧಿಸಿ ಹೈದರಾಬಾದಿನಲ್ಲಿ ಮುಸ್ಲಿಮರು ಪ್ರತಿಭಟಿಸಿದಾಗ ಗುಜರಾತ್ ಪೊಲೀಸರು ಗೋಲಿಬಾರ್ ನಡೆಸಿ ಮುಜಾಹಿದ್ ಎಂಬ ಯುವಕರನ್ನು ಕೊಂದು ಹಾಕಿದ್ದರು. ಈ ಮುಜಾಹಿದ್ ಹೊನ್ನಾಳಿಯಲ್ಲಿ ಅರೆಸ್ಟ್ ಆದ ರಿಯಾಜುದ್ದೀನ್‌ಗ ಗೆಳೆಯ ಕೂಡಾ ಹೌದು.

ಅಂದಹಾಗೆ ರಿಯಾಜ್‌ನ ತಂದೆ ನಾಸಿರುದ್ದೀನ್ ಈಗಲೂ ಗುಜರಾತಿನ ಜೈಲಿನಲ್ಲಿದ್ದಾನೆ ವಿಚಾರಣೆಗಾಗಿ ಕಾಯುತ್ತ. ಆದರೆ ಹರೇನ್ ಪಾಂಡ್ಯನನ್ನು ಕೊಲ್ಲಿಸಿದ್ದು ಈಗಿನ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯ ಗ್ಯಾಂಗ್ ಎಂಬುದು ಈಗಾಗಲೇ ಸಾಬೀತಾಗಿರುವ ರಾಜಕೀಯ ಸತ್ಯವೂ ಹೌದು.

ಈ ನಾಸಿರುದ್ದೀನ್ ಅರೆಸ್ಟ್‌ಗೆ ಸಂಬಂಧಿಸಿದಂತೆ ಹೇಳಲೇಬೇಕಾದ ಇನ್ನೊಂದು ವಿಚಾರ ಏನೆಂದರೆ ಅವನನ್ನು ಬಂಧಿಸಿದ್ದು ಗುಜರಾತ್ ಪೊಲೀಸ್ ಆಫೀಸರ್ ವೆಂಜಾರಾ! ಈತ ಸೊಹ್ರಾಬುದ್ದೀನ್ ಶೇಕ್ ಎಂಬುವನನ್ನು ಟೆರರಿಸ್ಟ್ ಎಂದು ಬ್ರ್ಯಾಂಡ್ ಮಾಡಿ ನಕಲಿ ಎನ್‌ಕೌಂಟರಿನಲ್ಲಿ ಕೊಲ್ಲಿಸಿದ್ದ ಎಂಬ ಆರೋಪದ ಮೇಲೆ ಹಾಗೂ ಸುಪ್ರೀಂಕೋರ್ಟ್ ಆದೇಶದಂತೆ ಬಂಧನಕ್ಕೊಳಗಾಗಿರುವಾತ.

ಹೀಗೆ ತನ್ನ ತಂದೆಯ ಬಂಧನ ಹಾಗೂ ಗೆಳೆಯನ ಹತ್ಯೆಯಿಂದ ವಿಚಲಿತನಾದ ರಿಯಾಜುದ್ದೀನ್ ಮನಶಾಂತಿಗಾಗಿ ಮೆಕ್ಕಾಗೆ ಹೋಗಿಬರುತ್ತೇನೆಂದು ಈಗ್ಗೆ ಎರಡೂವರೆ ವರ್ಷಗಳ ಹಿಂದೆ ಹೈದರಾಬಾದ್‌ನಿಂದ ಹೊರಟವನು ಮತ್ತೆ ಮನೆ ಕಡೆ ತಲೆ ಹಾಕಲೇ ಇಲ್ಲ. ಆ ಅವಧಿಯಲ್ಲಿ ಅವನು ಪಾಕಿಸ್ತಾನದ ನಿಯಂತ್ರಣದಲ್ಲಿರುವ ಕಾಶ್ಮೀರದಲ್ಲಿ ಮಿಲಿಟರಿ ತರಬೇತಿ ಪಡೆದಿರಬಹುದು ಎಂದು ಶಂಕಿಸಲಾಗಿದೆ. ಅಲ್ಲದೆ ಇನ್ನೊಬ್ಬ 'ಹುಜಿ' ಸಂಘಟನೆಯ ಬಿಲಾಲ್ ಎಂಬುವನೊಂದಿಗೂ ರಿಯಾಜನಿಗೆ ಲಿಂಕ್ ಇತ್ತೆಂಬ ಶಂಕೆ ಪೊಲೀಸರಿಗೆ ಬಂದಿದೆ.

ಇವೆಲ್ಲಾ ಮುಂದಿನ ತನಿಖೆಯಲ್ಲಿ ಪತ್ತೆಯಾಗಬೇಕಾದ ವಿಚಾರ. ಅಂತಿಮವಾಗಿ ಇದೇ ರಿಯಾಜುದ್ದೀನ್ ಪೊಲೀಸರೊಂದಿಗೆ ಮಾತಾಡುವಾಗ ತಾನು ಇರಾಕ್ ಹಾಗೂ ಆಫಘಾನಿಸ್ತಾನಕ್ಕೆ ಹೋಗಿ ದುಷ್ಟ ಅಮೆರಿಕಾ ಸೈನಿಕರ ವಿರುದ್ಧ ಹೋರಾಟದಲ್ಲಿ ಪಾಲ್ಗೊಳ್ಳಲು ಬಯಸಿದ್ದೆ ಎಂತಲೂ ಹೇಳಿಕೊಂಡಿದ್ದಾನೆ.

ರಿಯಾಜುದ್ದೀನ್‌ನ ಒಟ್ಟಾರೆ ಅನುಮಾನಾಸ್ಪದ ಚಟುವಟಿಕೆಗಳ ಹಿನ್ನೆಲೆಯಲ್ಲಿ ಅಮೆರಿಕಾ ಸೈನ್ಯ ಮುಸ್ಲಿಮರನ್ನು ಬೇಟೆಯಾಡುತ್ತಿರುವುದರ ಬಗ್ಗೆ ಆಕ್ರೋಶವೂ, ಅದೇ ವೇಳೆಗೆ ಕರ್ನಾಟಕ ಸೇರಿದಂತೆ ಭಾರತದಾದ್ಯಂತ ಹಿಂದೂ ಟೆರರಿಸ್ಟ್ ಸಂಘಟನೆಗಳು ಮುಸ್ಲಿಮರ ವಿರುದ್ಧ ನಡೆಸುತ್ತಿರುವ ದಾಳಿಗಳ ವಿರುದ್ಧವೂ ಅಪಾರ ಸಿಟ್ಟು ಇರುವಂತೆ ಕಾಣುತ್ತಿದೆ.

ಇದಕ್ಕೆಲ್ಲಾ ಪರಿಹಾರವೆಂಬುದು ಸರಳವಾಗಿರಲು ಸಾಧ್ಯವೇ?

–ಈಶ

ಪೊಲೀಸರು ಗಮನಿಸಲಿ

ಈಗಿನ ರಿಯಾಜುದ್ದೀನ್, ಅಬುಬಕರ್ ಹಾಗೂ ಆಸೀಫ್ ಅರೆಸ್ಟ್ ಸೇರಿದಂತೆ ಕರ್ನಾಟಕ ಪೊಲೀಸರು ಈ ಮೊದಲು ಮುಸ್ಲಿಂ ಉಗ್ರರೆಂದು ಯಾರನ್ನೆಲ್ಲಾ ಬಂಧಿಸಿದ್ದಾರೋ ಆವಾಗೆಲ್ಲಾ ಕೊಂಚ ಬೇಜವಾಬ್ದಾರಿತನದಿಂದಲೇ ವರ್ತಿಸಿದ್ದಾರೆ ಎನ್ನಬಹುದು. ಕಾನೂನು ಮತ್ತು ಶಾಂತಿ ಪಾಲನೆ ನಿರ್ವಹಿಸಬೇಕಾದ ಗುರುತರ ಜವಾಬ್ದಾರಿಯಿರುವ ಪೊಲೀಸರ ಮೇಲೆ ನಾನಾ ರೀತಿಯ ಒತ್ತಡಗಳಿರುತ್ತವೆಂಬುದೇನೋ ನಿಜ. ಆದರೆ ಇಂಥ ಘಟನೆಗಳು ಬೆಳಕಿಗೆ ಬಂದಾಗ ಒಂದಿಡೀ ಸಮುದಾಯದ (ಮುಸ್ಲಿಂ) ಮೇಲೆ ಜನಸಾಮಾನ್ಯರ ಅಸಹನೆ, ಅನುಮಾನ ಬೆಳೆಯದಂತೆ ನೋಡಿಕೊಳ್ಳಬೇಕಾದ ಹೊಣೆಯೂ ಪೊಲೀಸರ ಮೇಲೆ ಇರುತ್ತದೆ.



ವಿಚಾರಣೆಗೆ ಕರೆಸಿಕೊಂಡವರನ್ನೆಲ್ಲಾ ಉಗ್ರರೆಂಬಂತೆ ಬಿಂಬಿಸುವುದು, ಮೀಡಿಯಾಗಳೊಂದಿಗೆ ತಮ್ಮ ಅರಿವಿಗೆ ಬಂದ ಸಂಗತಿಗಳೊಂದಿಗೆ ಕಲ್ಪನೆಗಳನ್ನು ಬೆರೆಸಿ ಉತ್ಪ್ರೇಕ್ಷಿಸಿ ಬಿಂಬಿಸುವುದು ಎಷ್ಟು ಸರಿ?

ಇಂಥ ಗಂಭೀರ ಸಂದರ್ಭಗಳು ಮುಂದೆಯೂ ಬರಬಹುದು. ಆಗಲಾದರೂ ರಾಜ್ಯ ಪೊಲೀಸರು **off the record** ಎಂದು ಮೀಡಿಯಾದವರಿಗೆ ಏನೇನೊ ಹೇಳುವ ಬದಲಾಗಿ ಒಂದೋ ಹೇಳಬೇಕಾದ್ದನ್ನು ಅಧಿಕೃತವಾಗಿ ಹೇಳಿ ಉಳಿದ ಸಂಗತಿ ಸ್ಪಷ್ಟವಾಗುವರೆಗೂ ಕಾಯುವುದು ಉತ್ತಮ.

ಈಗಿನ ಬೆಳವಣಿಗೆಗಳ ಬಗ್ಗೆ 'ಲಂಕೇಶ್' ಜೊತೆ ಮಾತನಾಡಿದ **DIG** ಶಂಕರ್ ಬಿದರಿಯವರು "ತನಿಖೆ ಪೂರ್ತಿ ಮುಗಿಯುವವರೆಗೂ ಏನೇನೋ ಮಾತಾಡಿ ಪರಿಸ್ಥಿತಿ ಹದಗೆಡಿಸದಂತೆ ನಮ್ಮ ಆಫೀಸರ್‌ಗಳಿಗೆ ಸೂಚಿಸಿದ್ದೇನೆ. ಇಲ್ಲದಿದ್ದರೆ ಹನೀಫ್ (ಆಸ್ಟ್ರೇಲಿಯಾ) ಕೇಸಿನಂತೆ, ಇಂಗ್ಲೆಂಡಿನ ಗ್ಲಾಸ್ಗೋ ಏರ್‌ಪೋರ್ಟ್ ಬಾಂಬಿಂಗ್ ಘಟನೆಯ ಶಂಕಿತರೆನ್ನಲಾದ ಕಫೀಲ್-ಶಫೀಲ್ ಪ್ರಕರಣದಂತೆ ಬರೀ ಕೊನೆಯಿಲ್ಲದ **speculation** ಆಗುತ್ತ, ಜೊತೆಗೆ ಮುಗ್ಧ ಮುಸ್ಲಿಂ ತರುಣರ ಭವಿಷ್ಯವೂ ನಾಶವಾಗುತ್ತದೆ. ಹೀಗೆ ಮಾಡುವುದರಿಂದ ಕೆಲ ಯುವಕರನ್ನು ನಾವೇ ಉಗ್ರರಾಗಲು ಪ್ರಚೋದನೆ ನೀಡಿದಂತಾಗುತ್ತದೆ" ಎಂದು ವಿವೇಚನೆಯ ಮಾತಾಡಿದ್ದಾರೆ.

ಮುಖ್ಯವಾಗಿ ಮೀಡಿಯಾಗಳು ಪರಿಗಣಿಸಬೇಕಾದ ವಿಚಾರವಿದು. ತಪ್ಪು ಮಾಡಿದವರ ಬಗ್ಗೆ ಯಾರೂ ಕನಿಕರಪಡಬೇಕಾದ ಅಗತ್ಯವಿಲ್ಲ. ಆದರೆ ಪೊಲೀಸರಾಗಲಿ ಅಥವಾ ಕೋರ್ಟ್ ಆಗಲಿ ಏನೇ ಅಂತಿಮ ನಿಲುವು ತಾಳುವ ಮೊದಲೇ ಕರ್ನಾಟಕದ ಪ್ರತಿ ಊರಿನಲ್ಲೂ ಮುಸ್ಲಿಂ ಉಗ್ರರನ್ನು ಕಂಡು ಹಿಡಿಯುವ ಮೀಡಿಯಾಗಳ ಅವಿವೇಕಿ ವರ್ತನೆ ಕರ್ನಾಟಕಕ್ಕಂತೂ ಒಳ್ಳೆಯದು ಮಾಡುವುದಿಲ್ಲ.

ಹಿಂದೂ ಟೆರರಿಸ್ಟರಿಗೆ ಕಾನೂನಿಲ್ಲವೆ?

ಕರ್ನಾಟಕದಲ್ಲಿ ಕಳೆದ ಕೆಲವು ವರ್ಷಗಳಿಂದ ಅಪಾಯಕಾರಿಯಾಗಿ ಹಬ್ಬುತ್ತಿರುವ ಹಿಂದೂ ಟೆರರಿಸಂ ಬಗ್ಗೆ ಪೊಲೀಸರು ಅತ್ಯಂತ ನಿಷ್ಕ್ರಿಯ ಪ್ರತಿಕ್ರಿಯೆ ತೋರಿಸುತ್ತಿರುವುದು ಸತ್ಯ. ಮುಸ್ಲಿಂ ಉಗ್ರರೆಂಬ ಮಾತು ಬಂದ ಕೂಡಲೇ ಇಡೀ ಇಲಾಖೆ ಮೈಕೊಡವಿಕೊಂಡು ಕಾರ್ಯಚರಣೆಗಿಳಿಯುವ ಕೆಲಸವನ್ನು ಎಲ್ಲರೂ ನೋಡುತ್ತಿದ್ದಾರೆ. ಆದರೆ ಅದೇ ಭಜರಂಗ ದಳ, ಶ್ರೀರಾಮ ಸೇನೆ ಹಾಗೂ ಇನ್ನಿತರ ಹಿಂದೂ ಮೂಲಭೂತವಾಗಿ ಭಯೋತ್ಪಾದಕರು ಪ್ರಗತಿಪರರ ವಿರುದ್ಧ ಹಿಂದುಳಿದ ದಲಿತರ ಹಾಗೂ ಮಹಿಳೆಯರ ವಿರುದ್ಧ ದಾಳಿ ನಡೆಸಿದಾಗ, ಮುಸ್ಲಿಂ-ಕ್ರಿಶ್ಚಿಯನ್ ಅಲ್ಪಸಂಖ್ಯಾರ ವಿರುದ್ಧ ಹಲ್ಲೆ ದೌರ್ಜನ್ಯ ನಡೆಸುತ್ತಿರುವಾಗ ಪೊಲೀಸರು ಕೈಕಟ್ಟಿ ನಿಲ್ಲುತ್ತಿದ್ದಾರೆಂಬುದರ ಅರ್ಥವೇನು?

ಭಾರತದಲ್ಲಿ ಜಾತಿವಾರು-ಧರ್ಮವಾರು ಕಾನೂನುಗಳಿವೆ ಎಂದಾ?

ಈಗಿನ ರಿಯಾಜುದ್ದೀನ್ ಅರೆಸ್ಟ್ ಪ್ರಕರಣದಲ್ಲೇ ಶ್ರೀರಾಮ ಸೇನೆಯ ಪ್ರಮೋದ್ ಮುತಾಲಿಕ್ ಕಿಮ್ಸ್ ಕಾಲೇಜಿಗೆ ಪುಂಡರನ್ನು ನುಗ್ಗಿಸಿ ದೊಂಬಿ ಮಾಡಿಸಿದ್ದಾನೆ. ಆರೋಪಿಗಳಿಗೆ ವಕೀಲರ ನೆರವು ಸಿಗದಂತೆ ಧಮಕಿ ಹಾಕಿಸಿದ್ದಾನೆ. ಇದೇ ನೆಪದಲ್ಲಿ ಉತ್ತರ ಕರ್ನಾಟಕದ ಕೆಲವೆಡೆ ಮಸೀದಿ ಕೆಡುವುದು, ಮುಸ್ಲಿಂ ಮಹಿಳೆಯರಿಗೆ ಅವಮಾನ ಮಾಡುವ ಕೃತ್ಯಗಳೂ ಶುರುವಾಗಿವೆ. ರಾಜ್ಯ ಪೊಲೀಸರು ವಿಚಾರಣೆ ನಡೆಸುವ ಹಾಗೂ ಶಿಕ್ಷೆ ವಿಧಿಸುವ ಹಕ್ಕನ್ನು ಹಿಂದೂ ಟೆರರಿಸ್ಟರಿಗೆ ವಹಿಸಿಕೊಟ್ಟಿದ್ದಾರಾ?

[illegible]ಜುನಾಥ ಕಾಲೋನಿಯ ಆಟೋಮಂಜ, ಟೆಂಪೋ [illegible] ಕೆಂಪೇಗೌಡ ನಗರದ ಸೀಮೆಎಣ್ಣೆ ಉರ್ಫ್ ಹರೀಶ, [illegible] ಗಾರ್ಡನ್ನಿನ ಭೀಮ, [illegible]ಬ್ರಹ್ಮಣ್ಯಪುರದ ಶಶಿಧರ್ ಮತ್ತು [illegible]ಗಸಂದ್ರದ ಈಶ ಮುಂತಾದ [illegible] ಡಜನ್ ಚಿಗುರು ಮೀಸೆಯ [illegible]ಡುಗರನ್ನು ಅಪ್ಪಿ ಜೊತೆ [illegible]ಸಿದ್ದಾನೆ. ಈ ಪೈಕಿ ವಾಲೇಸೀನ [illegible] ಆರು ತಿಂಗಳ ಹಿಂದಷ್ಟೇ [illegible] ವೆಂಕಟೇಶನನ್ನು [illegible] ಒಂದಲ್ಲಾ [illegible] ಜೈಲು [illegible] ಎಲ್ಲರೂ ಸೇರಿ ಎರಡು [illegible]ಗಳಲ್ಲಿ ಚಿಕ್ಕಗೊಲ್ಲರಹಟ್ಟಿಯ [illegible] [illegible]



ಧಾಬಾ ಸೀನ

[illegible]

ಸುಂಕದಕಟ್ಟೆಗೆ ಬರುತ್ತಿದ್ದಾರೆಂದು ಯಾರೋ ಸುದ್ದಿ ಕೊಟ್ಟಿದ್ದಾರೆ. ವಾಸ್ತವವಾಗಿ ಅದು ಪೆದ್ದುಗುಂಡನ ಶಿಷ್ಯರು ಬರುತ್ತಿದ್ದ ಗಾಡಿಯಾಗಿತ್ತು. ಅವರೂ ಕಡಬಗೆರೆ ರಾಮನ ಬೇಟೆಗೆಂದು ನಿಂತ ಹುಡುಗರೆ. ಅದರ ನೇತೃತ್ವ ವಹಿಸಿದ್ದು ಬಿಜೆಪಿ ಕೌನ್ಸಿಲರ್ ಪದ್ಮರಾಜ್‌ನ ಭಾಮೈದ ಮಂಜು. ವಾಲೆಸೀನ ಮತ್ತು ಅಪ್ಪಿ ಗ್ಯಾಂಗ್ ನುಗ್ಗಿದ್ದೇ ಎರಡೂ ಗಾಡಿಗಳ ಗ್ಲಾಸ್ ಒಡೆದು ಒಂದಿಬ್ಬರ ಬುರುಡೆಗೆ ಲಾಂಗ್ ಬೀಸಿದೆ. ಇದು ಗೊತ್ತಾಗಿದ್ದೇ ಸಿಸಿಬಿ ಇನ್ಸ್‌ಪೆಕ್ಟರ್ ಬಾಳೇಗೌಡರ ಪಡೆ ತಾವರೆಕೆರೆ ಸುತ್ತಮುತ್ತ ವಾಲೆಸೀನ, ಅಪ್ಪಿ ಮುಂತಾದವರನ್ನು ರೌಂಡಪ್ ಮಾಡಿ ಜೈಲಿಗೆ ಹಾಕಿದೆ.

ಇಷ್ಟೇ ಆಗಿದ್ದರೆ ಕಡಬಗೆರೆ ರಾಮನ ಬಗ್ಗೆ ವಿಶೇಷವಾಗಿ ಬರೆಯುವ ಅಗತ್ಯವಿರಲಿಲ್ಲ. ಯಾವತ್ತು ತನ್ನ ಹತ್ಯೆಗೆಂದು ಬಂದಿದ್ದ ಹುಡುಗರೇ ಯಾಮಾರಿ ಹೊಡೆದಾಡಿಕೊಂಡ ಸುದ್ದಿ ಬಂತೋ ಅದರ ಮರುದಿನವೇ ತನ್ನ ಬಲಗೈ ಬಂಟ ದಾಸರಹಳ್ಳಿ ಹೇಮಂತ, ಭವಾನಿ ಮುಂತಾದವರನ್ನು ರೆಡಿ ಮಾಡಿ ಸರಿಸುಮಾರು ನಲವತ್ತು ಮಂದಿಯನ್ನು ಸೇರಿಸಿದ್ದೇ ಗೊಲ್ಲರಹಟ್ಟಿಯ ಮೇಲೆ ದಾಳಿಗೆ ಛೂಬಿಟ್ಟಿದ್ದಾನೆ. ಆವತ್ತು ಜಾನಿಯ ಅಣ್ಣ ಗಿರಿ ಗೊಲ್ಲರಹಟ್ಟಿಗೆ ಬಂದಿದ್ದನೆಂದೂ ಆತನೊಂದಿಗೆ ಮಚ್ಚನ ಶಿಷ್ಯರಾದ ಕುರಿ ಮಾಯಣ್ಣ, ರಾಜ ಮತ್ತು ಪ್ರಕಾಶ ಕೂಡ ಇದ್ದಾರೆಂದು ಯಾರೋ ಕಟಾಯಿಸಿದ್ದಾರೆ.

ಏಳೆಂಟು ಗಾಡಿಗಳಲ್ಲಿ ಸಂಜೆ ಎಂಟು ಗಂಟೆಯ ಹೊತ್ತಿಗೆ ಗೊಲ್ಲರಹಟ್ಟಿಗೆ ನುಗ್ಗಿದ್ದೇ ಭವಾನಿ ಮತ್ತು ಹೇಮಂತರ ಗ್ಯಾಂಗುಗಳು ಜಾನಿಗೆ ಪರಿಚಯದ ಬೀಡಿ ಅಂಗಡಿಯೊಂದನ್ನು ಸುಟ್ಟು ಹಾಕಿದ್ದಾರೆ. ಪಕ್ಕದ ಚಿಲ್ಲರೆ ಅಂಗಡಿಯೊಂದಕ್ಕೆ ನುಗ್ಗಿ ದಾಂಧಲೆ ನಡೆಸಿದ್ದಾರೆ. ಇಡೀ ಗೊಲ್ಲರಹಟ್ಟಿಗೇ ಬೆಂಕಿ ಹಚ್ಚಲು ಸಿದ್ಧವಾಗಿದ್ದ ಪಾಯ್ಸನ್ ರಾಮನ ಗ್ಯಾಂಗ್ ವಿರುದ್ಧ ಇಡೀ ಗೊಲ್ಲರಹಟ್ಟಿಯೇ ತಿರುಗಿಬಿದ್ದಿದೆ. ಬಹುಶಃ ಪೊಲೀಸರು ಬರದೇ ಹೋಗಿದ್ದರೆ ಏನಾಗುತ್ತಿತ್ತೊ?



ಪಟಾಕಿ ರಾಜ

ಸದ್ಯ ಗೊಲ್ಲರಹಟ್ಟಿಯಲ್ಲಿ ಪೊಲೀಸ್ ಪಹರೆಯೇನೊ ಬಿಗಿಯಾಗಿದೆ ನಿಜ. ಆದರೆ ಮಾಗಡಿ ಇನ್ಸ್‌ಪೆಕ್ಟರ್ ರವಿಶಂಕರ್ ಸಾಹೇಬರಾಗಲಿ, ತಾವರೆಕೆರೆ ಎಸ್‌ಐ ಶಂಕ್ರಾಚಾರಿಯವರಾಗಲಿ ಈತನಕ ಕಡಬಗೆರೆ ರಾಮನನ್ನು ಬಂಧಿಸಿಲ್ಲ. ಕನಿಷ್ಠ ಆತನ ಬಂಟರಾದ ದಾಸರಹಳ್ಳಿ ಹೇಮಂತ ಮತ್ತು ಭವಾನಿಯ ಗ್ಯಾಂಗನ್ನೂ ಹಿಡಿದಿಲ್ಲ. ಇತ್ತ ಸಿಸಿಬಿ ಪೊಲೀಸರಾದರೂ ಹಿಡಿಯಬೇಕಿತ್ತಲ್ಲವೆ? ಅವರಿಗೆ ಮಚ್ಚನ ಶಿಷ್ಯರನ್ನು ಬಿಟ್ಟರೆ ಕಡಬಗೆರೆ ಕೇಡಿಗಳು ಕಣ್ಣಿಗೆ ಕಾಣುತ್ತಲೇ ಇಲ್ಲ.

ಹೀಗಾದರೆ ಕಡಬಗೆರೆ ಪಾಯ್ಸನ್ ರಾಮನ ಅಟ್ಟಹಾಸಕ್ಕೆ ಕೊನೆಯೆಂದು?



ಲೋಕಾಯುಕ್ತವನ್ನೇ ದಾರಿ ತಪ್ಪಿಸುವ ಕೆಲಸವನ್ನು ಸಿವಿಲ್ ಪೊಲೀಸ್ ಆಫೀಸರ್‌ಗಳೇ ಮಾಡಿರಬಹುದಾದ ಸಣ್ಣ ಎಳೆಯೊಂದು ಕಾಣಿಸುತ್ತದೆ. 'ಖಾಕಿ ಕವಿ' ಎಂದೇ ಹೆಸರಾಗಿರುವ ರಾಜಪ್ಪನವರು ಈಗ ತಮ್ಮ ಮೇಲಿನ ಲೋಕಾಯುಕ್ತರ ದಾಳಿಗೆ ಗೌರವ ನೀಡಿಯೇ ಈ ದಾಳಿಗೆ ಚಿತಾವಣೆ ನೀಡಿರುವವರ ಬಗ್ಗೆ ಸ್ವತಃ ಲೋಕಾಯುಕ್ತರಿಗೆ ಹಾಗೂ ಸರ್ಕಾರಕ್ಕೆ ಮನವಿ ನೀಡಿ ಸತ್ಯಾಸತ್ಯತೆಯನ್ನು ಪರಿಶೀಲಿಸಿ ತಮಗೆ ನ್ಯಾಯ ದೊರಕಿಸಿಕೊಡುವಂತೆ ಕೇಳಿದ್ದಾರೆ ಎನ್ನಲಾಗಿದೆ.

ಡಾ. ಡಿ.ಸಿ. ರಾಜಪ್ಪ ಮೇಲಿನ ದಾಳಿ ಪ್ರಕರಣ

ಲೋಕಾಯುಕ್ತರಿಗೇ ದಾರಿ ತಪ್ಪಿಸಿದ ಪೊಲೀಸರು

ಭ್ರಷ್ಟ ಸರ್ಕಾರಿ ಉನ್ನತಾಧಿಕಾರಿಗಳ ಹುಟ್ಟಡಗಿಸುವ ಬ್ರಹ್ಮಾಸ್ತ್ರದಂತಿರುವ ಕರ್ನಾಟಕ ಲೋಕಾಯುಕ್ತ ವ್ಯವಸ್ಥೆಯನ್ನೇ ದುರುಪಯೋಗಪಡಿಸಿಕೊಂಡು ತಮಗಾಗದವರ ವಿರುದ್ಧ ಛೂಬಿಡುವ ಪ್ರವೃತ್ತಿಯೊಂದು ಬೆಳೆಯುತ್ತಿದೆಯೇ?

ಕಳೆದ ಜನವರಿ 31 ರಂದು ರಾಜ್ಯಾದ್ಯಂತ ನಡೆದ 10 ಅಧಿಕಾರಿಗಳ ಮೇಲಿನ ಲೋಕಾಯುಕ್ತರ ದಾಳಿಯ ವಿವರಗಳನ್ನು ಪರಿಶೀಲಿಸಿದರೆ ಅಂಥದ್ದೊಂದು ಅನುಮಾನ ಹುಟ್ಟುತ್ತದೆ.

ಮತ್ತು ಹೀಗೆ ಲೋಕಾಯುಕ್ತವನ್ನೇ ದಾರಿ ತಪ್ಪಿಸುವ ಕೆಲಸವನ್ನು ಸಿವಿಲ್ ಪೊಲೀಸ್ ಆಫೀಸರ್‌ಗಳೇ ಮಾಡಿರಬಹುದಾದ ಸಣ್ಣ ಎಳೆಯೊಂದು ಕಾಣಿಸುತ್ತದೆ.

ಭ್ರಷ್ಟರ ನಿಯಂತ್ರಣಕ್ಕೆ ಸೃಷ್ಟಿಯಾಗಿರುವ ಲೋಕಾಯುಕ್ತ ವ್ಯವಸ್ಥೆ ಹಾಲಿ ಮುಖ್ಯಸ್ಥರಾಗಿರುವ ನ್ಯಾ. ಸಂತೋಷ್ ಹೆಗ್ಡೆ ಹಾಗೂ ನ್ಯಾ. ಪತ್ರಿ ಬಸವನಗೌಡರ ನೇತೃತ್ವದಲ್ಲಿ ಜನಮೆಚ್ಚುವಂಥ ಕೆಲಸ ಮಾಡುತ್ತಿದೆ. ಆಗಿಂದಾಗ್ಗೆ ನಡೆಯುತ್ತಿರುವ ದಿಢೀರ್ ದಾಳಿಗಳಿಂದ ಹಿಡಿದು ಭ್ರಷ್ಟ ಉನ್ನತಾಧಿಕಾರಿಗಳು ಸರ್ಕಾರಿ ಖಜಾನೆಗೇ ಬಿಲ ಕೊರೆದು ಕದ್ದ ಸಂಪತ್ತನ್ನು ಪತ್ತೆಹಚ್ಚಿ ವಶಪಡಿಸಿಕೊಳ್ಳುವತನಕ ಹಾಲಿ ಕರ್ನಾಟಕ ಲೋಕಾಯುಕ್ತ ತನ್ನ ಜವಾಬ್ದಾರಿಯನ್ನು ನಿರ್ಭೀತಿಯಿಂದ ಮುಂದುವರೆಸುತ್ತಿದೆ.

ಆದರೆ ಚಕ್ರದೊಳಗೊಂದು ಚಕ್ರವಿರುವಂತೆ ಈ ಲೋಕಾಯುಕ್ತ ವ್ಯವಸ್ಥೆಯನ್ನೇ ತಮಗಾಗದವರನ್ನು ತುಳಿದು ಸದೆಬಡಿಯಲು ಬಳಸಿಕೊಳ್ಳುವ ವಿಲಕ್ಷಣ ಪ್ರಕರಣವೊಂದು ಈಗ ಬೆಳಕಿಗೆ ಬಂದಿದೆ.

ಅದು ಬಳ್ಳಾರಿ ಆಡಿಷನಲ್ ಎಸ್‌ಪಿ ಡಾ. ಡಿ.ಸಿ. ರಾಜಪ್ಪನವರ ಮೇಲಿನ ದಾಳಿಯ ಪ್ರಕರಣ.

'ಖಾಕಿ ಕವಿ' ಎಂದೇ ಹೆಸರಾಗಿರುವ ರಾಜಪ್ಪನವರು ಈಗ ತಮ್ಮ ಮೇಲಿನ ಲೋಕಾಯುಕ್ತರ ದಾಳಿಗೆ ಗೌರವ ನೀಡಿಯೇ ಈ ದಾಳಿಗೆ ಚಿತಾವಣೆ ನೀಡಿರುವವರ ಬಗ್ಗೆ ಸ್ವತಃ ಲೋಕಾಯುಕ್ತರಿಗೆ ಹಾಗೂ ಸರ್ಕಾರಕ್ಕೆ ಮನವಿ ನೀಡಿ ಸತ್ಯಾಸತ್ಯತೆಯನ್ನು ಪರಿಶೀಲಿಸಿ ತಮಗೆ ನ್ಯಾಯ ದೊರಕಿಸಿಕೊಡುವಂತೆ ಕೇಳಿದ್ದಾರೆ ಎನ್ನಲಾಗಿದೆ.


ರಾಜ್ಯ ಪೊಲೀಸ್ ಉನ್ನತಾಧಿಕಾರಿಗಳ ಒಳವಲಯದಲ್ಲಿ ಈಗ ಹಬ್ಬಿರುವ ರೂಮರ್ ಏನೆಂದರೆ ಇನ್ನೊಬ್ಬ ಪೊಲೀಸ್ ಆಫೀಸರ್ ಎಸ್.ಬಿ. ಬಿಸನಳ್ಳಿ ಎಂಬುವರೇ ಈ ದಾಳಿಯ ಮೂಲ ಕಾರಣ.

ಮತ್ತು...

ಐಪಿಎಸ್ ಹುದ್ದೆಗೆ ಪ್ರಮೋಷನ್ ಗಳಿಸುವ ಹಾದಿಯಲ್ಲಿದ್ದ ರಾಜಪ್ಪನವರನ್ನು ತುಳಿದು ತಾನೇ ಆ ಛಾನ್ಸ್ ಪಡೆಯಲು ಬಿಸನಳ್ಳಿ ಇಂಥದ್ದೊಂದು ದಾಳಿ ನಡೆಯುವಂತೆ ವ್ಯವಸ್ಥೆ ಮಾಡಿದರೆಂಬ ರೂಮರ್ ಅದು. ಈಗ ಬಿಸನಳ್ಳಿ ಎಂಬುವರೇ ಸ್ವತಃ ಚಿತ್ರದುರ್ಗ ಜಿಲ್ಲೆಯ ಲೋಕಾಯುಕ್ತ ಎಸ್‌ಪಿಯಾಗಿರುವರೆಂಬ ಹಿನ್ನೆಲೆ ಗಮನಿಸಿದರೆ ಅಂಥದ್ದೊಂದು ಚಿತಾವಣೆ ನಡೆದಿರಲಿಕ್ಕೂ ಸಾಧ್ಯವಿರಬಹುದು ಎನ್ನಿಸುವಂತಿದೆ.

ಸಾರಾಂಶದಲ್ಲಿ ಹೇಳಬೇಕೆಂದರೆ ಇದೇ 2008 ನೇ ವರ್ಷದ ಜೂನ್‌ನೊಳಗಾಗಿ ಕರ್ನಾಟಕದ ಎಂಟು ಮಂದಿ Non IPS ಆಫೀಸರ್‌ಗಳಿಗೆ ಐಪಿಎಸ್ ಗ್ರೇಡ್‌ಗೆ ಪ್ರಮೋಷನ್ ನೀಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯೊಂದು ಹೋಗಲಿಕ್ಕಿದೆ. ಈಗಿರುವ Non IPS ಗಳ ಸೀನಿಯಾರಿಟಿ ಲಿಸ್ಟ್‌ನಲ್ಲಿ ಡಾ. ಡಿ.ಸಿ. ರಾಜಪ್ಪ ಮೂರನೇ ಕ್ರಮಾಂಕದಲ್ಲಿದ್ದಾರೆ. ಅದೇ ರೀತಿ ಇನ್ನೊಬ್ಬ Non IPS ಆಫೀಸರ್ ಬಿಸನಹಳ್ಳಿಯವರು ಕ್ರಮ ಸಂಖ್ಯೆ 9 ರಲ್ಲಿದ್ದಾರೆ. ಆದರೆ ಸರ್ಕಾರ ಪ್ರತೀ ವರ್ಷ ಆದ್ಯತೆಯ ಆಧಾರದ ಮೇಲೆ ಕೇವಲ 8 ಮಂದಿ ಹೆಸರನ್ನಷ್ಟೇ IPS ಗ್ರೇಡಿಗೆ ಶಿಫಾರಸ್ಸು ಮಾಡಬೇಕು ಮತ್ತು ಅತೀ ಮುಖ್ಯವಾಗಿ ಪ್ರಮೋಷನ್ ಲಿಸ್ಟ್ ಕಳುಹಿಸುವಾಗ ಏನೇ ಸೀನಿಯಾರಿಟಿ ಇದ್ದರೂ 54 ವರ್ಷ ತುಂಬಿದ ಆಫೀಸರ್‌ಗಳ ಹೆಸರನ್ನು ಪರಿಗಣಿಸಬಾರದೆಂಬ ಸರ್ಕಾರಿ ನಿಯಮ ಒಂದಿದೆ.

ಎಸ್.ಬಿ. ಬಿಸನಹಳ್ಳಿಯವರಿಗೆ IPS ಪಡೆಯಲು ಅಡ್ಡಿಯಾಗಿದ್ದೇ ಈ ನಿಯಮ. ಯಾಕೆಂದರೆ ಬರುವ ಜೂನ್ ವೇಳೆಗೆ ಅವರಿಗೆ 54 ವರ್ಷ ತುಂಬಿರುತ್ತದೆ. ಈ ವರ್ಷ ಸರ್ಕಾರ ಕೇವಲ 8 ಆಫೀಸರ್‌ಗಳ ಬಡ್ತಿ ಪಟ್ಟಿ ಕಳಿಸುವ ಕಾರಣ ಕ್ರಮಸಂಖ್ಯೆ 9 ರಲ್ಲಿರುವ ಬಿಸನಹಳ್ಳಿಯವರು IPS ಆಗಲು ಮುಂದಿನ ವರ್ಷ ಅಂದರೆ 2009 ರ ಜೂನ್ ತನಕ ಕಾಯಬೇಕು. ಆದರೆ ಇದೇ 2008 ರ ಜೂನ್‌ಗೇನೆ ಅವರಿಗೆ 54 ವರ್ಷ ಆಗುತ್ತಿದೆಯಾದ್ದರಿಂದ ಅವರು ಒಂದು ವರ್ಷ ಕಾದರೂ IPS ಗ್ರೇಡ್ ಸಿಗುವುದಿಲ್ಲ. ಹಾಗಾಗಿ ಹೇಗಾದರೂ ಮಾಡಿ ಈ ವರ್ಷವೇ IPS ಬಡ್ತಿ ಪಟ್ಟಿಗೆ ಸೇರಿಕೊಳ್ಳಲು ಬಿಸನಳ್ಳಿಯವರು ಕ್ರಮಸಂಖ್ಯೆ 1 ರಿಂದ 8 ರೊಳಗಿರುವ ಯಾರಾದರೂ ಒಬ್ಬರನ್ನು ಬಡ್ತಿಗೆ ಅನರ್ಹರಾಗುವಂತೆ ಮಾಡಿಬಿಟ್ಟರೆ 9 ನೇ ಸ್ಥಾನದಲ್ಲಿರುವ ತಾವು 8 ನೇ ಸ್ಥಾನಕ್ಕೆ



ಜಂಪ್ ಆಗಿ ಈಗಲೇ IPS ಗಿಟ್ಟಿಸಬಹುದೆಂದು ಪ್ಲಾನ್ ಮಾಡಿದ್ದರು...

ಡಾ. ಡಿ.ಸಿ. ರಾಜಪ್ಪ ಈ ಸ್ಕೆಚ್‌ಗೆ ಬಲಿಪಶುವಾಗಿದ್ದಾರೆ...

-ಎಂಬಿತ್ಯಾದಿ ಪ್ರತಿತರ್ಕಗಳು ಈಗ ಪೊಲೀಸ್ ವಲಯದಲ್ಲಿ ಹರಿದಾಡುತ್ತಿವೆ.

ಇದರ ಹಿಂದಿನ ಸತ್ಯ-ಸುಳ್ಳುಗಳನ್ನು ಲೋಕಾಯುಕ್ತರೇ ಈಗ ಪರಿಶೀಲಿಸಿದರೆ ಉತ್ತಮ. ಆದರೆ ಲೋಕಾಯುಕ್ತರನ್ನೇ ದುರ್ಬಳಕೆ ಮಾಡಿಕೊಳ್ಳುವ ಪ್ರವೃತ್ತಿಯೊಂದನ್ನು ಬೆಳೆಯಲು ಬಿಟ್ಟರೆ ಆ ಸಂಸ್ಥೆಯ ಘನತೆ-ಗೌರವಗಳಿಗೇ ಧಕ್ಕೆ ಎಂಬುದಂತೂ ನಿಜ.

ದಾಳಿಯ ಮೂಲ-ಸಿಕ್ಕ ಆಸ್ತಿ

ಜನವರಿ 31 ರಂದು ನಡೆದ ಲೋಕಾಯುಕ್ತ ದಾಳಿಯಲ್ಲಿ ಕೆಲ ಭ್ರಷ್ಟ ತಿಮಿಂಗಿಲಗಳು ಸಿಕ್ಕಿಬಿದ್ದಿದಂತೂ ನಿಜ. ಅವರ ಪೈಕಿ ಬೆಳಗಾವಿಯ ಅಬಕಾರಿ ಡಿವೈ... ಪಿ.ಜಿ. ವಾಂಡಕರ ಮೇಲೆ ನಡೆದ ದಾಳಿಯ ದಿ... ದಿನವೇ 5 ಕೋಟಿ ರೂಪಾಯಿಯಷ್ಟು ಅಕ್ರಮ... ಪತ್ತೆಯಾಗಿತ್ತು. ಒಟ್ಟಾರೆ ತನ್ನ ಸಂಬಳದ ಆದಾಯ... ಏಳುನೂರು ಪಟ್ಟು ಹೆಚ್ಚು ಆಸ್ತಿಯನ್ನು ವಾಂಡ... ಗುಡಿಸಿ ಗುಡ್ಡೆ ಹಾಕಿಕೊಂಡಿದ್ದ.

ಇನ್ನುಳಿದಂತೆ ಸಮಾಜ ಕಲ್ಯಾಣ ಇಲಾಖೆ... ನಿರ್ದೇಶಕರಾಗಿದ್ದ ಬಾಬುರಾವ್ ಮುಡಬಿ, ಬ... ಅರಣ್ಯಾಧಿಕಾರಿ ಡಾ. ರಾಜಶೇಖರ್, ಜಗಳೂರು ಸ... ಇನ್ಸ್‌ಪೆಕ್ಟರ್ ರೇವಣ್ಣ, ಗುಲ್ಬರ್ಗಾ ನಾಗರಿಕ ... ನಿರ್ದೇಶನಾಲಯದ ಎಸ್ಪಿ ಪೀತಾಂಬರ ಹೆರಾಜೆಯ... ಮೇಲಿನ ದಾಳಿಗಳೂ ಪೂರ್ತಿ ಅಕ್ರಮ ಆಸ್ತಿ ವಿ... ಸಂಬಂಧಿಸಿದವು. ರಾಜಪ್ಪನವರ ಮೇಲಿನ ದಾಳಿ... ಈ ಪ್ರಕರಣಗಳಿಗೆ ಪ್ರಮೋಷನ್ ಕುರಿತಂತೆ ಒಳಸ... ಹಾಗೂ ಪಿತೂರಿ ನಡೆಸಿ ದಾಳಿಗೆ ಚಿತಾ... ನೀಡಲಾಯಿತೆಂಬ ಆಯಾಮವಿಲ್ಲ.

ಹಾಗೆ ನೋಡಿದರೆ ಈಗ್ಗೆ ಎರಡು ವರ್ಷದ ಹಿಂದೆ... ಇದೇ ಡಿ.ಸಿ. ರಾಜಪ್ಪನವರ ಮೇಲೆ ಲೋಕಾಯುಕ್ತ ದಾ... ಒಂದು ಸ್ಕೆಚ್ ಹೆಣೆಯಲಾಗಿತ್ತು ಎನ್ನಲಾಗಿದೆ. ... ಜನವರಿ 31 ರಂದೇ ನಿವೃತ್ತರಾದ ಬಳ್ಳಾರಿ ಲೋಕಾ... ಎಸ್ಪಿಯಾಗಿದ್ದ ಹಂಚಿನಮನಿ ಎಂಬುವರು ಈ ... ವಹಿಸಲು ಮುಂದಾಗಿದ್ದರಂತೆ. ಆದರೆ ಅದೇಕೋ ವಿ... ಲೋಕಾಯುಕ್ತ ಕೇಂದ್ರ ಕಚೇರಿಯಲ್ಲಿ ಅದಕ್ಕೆ ಚಾ... ಸಿಕ್ಕಿರಲಿಲ್ಲ. ಆದರೆ ಈ ಬಾರಿ ದಾಳಿ ನಡೆದೇಹೋಯಿ...

ಡಿ.ಸಿ. ರಾಜಪ್ಪನವರು ಈ ವರ್ಷ IPS ಗೆ ... ಪಡೆಯುವ ನಿರೀಕ್ಷೆಯಲ್ಲಿರುವಾಗಲೇ ಮತ್ತೆ ಈ ದಾ... ತಯಾರಿ ನಡೆದಿತ್ತು. ದೂರದ ಬಳ್ಳಾರಿಯಲ್ಲಿ ಅಡಿಷ... ಎಸ್ಪಿಯಾಗಿದ್ದ ರಾಜಪ್ಪನವರ ಆಸ್ತಿ-ಪಾಸ್ತಿಗಳ ... ಬೆಂಗಳೂರು ಗ್ರಾಮಾಂತರ ಲೋಕಾಯುಕ್ತರ ... ಕಚೇರಿಯಲ್ಲಿ ಫೈಲ್ ಒಂದು ರೆಡಿಯಾಗುತ್ತಿತ್ತು. ... ಮೂಲ ಮಾಹಿತಿ ಎಲ್ಲಿಂದ ಬಂತು, ಯಾರು ಪ್ರಾಥ... ತನಿಖೆ ನಡೆಸಿ ಈ ಮಾಹಿತಿ ಸಂಗ್ರಹಿಸಿದರೆಂಬ ರಹಸ್ಯ... ಸಾಮಾನ್ಯವಾಗಿ ಬಹಿರಂಗಪಡಿಸುವುದಿಲ್ಲ. ಬಹ... ಲೋಕಾಯುಕ್ತ ವ್ಯವಸ್ಥೆಯೊಳಗಿನ ಒಂದು ನಿಯಮವಿರ... ಅದು. ಇರಲಿ. 2008 ರ ಜನವರಿ 28 ರಂದು ಬೆಂಗ... ಲೋಕಾಯುಕ್ತ ಎಸ್ಪಿ ಶ್ರೀನಿವಾಸ್‌ರವರು ಲೋಕಾ... ಕೇಂದ್ರ ಕಚೇರಿಯ ಅಡಿಷನಲ್ ಡೈರೆಕ್ಟರ್ ಜನ... ಆಫ್ ಪೊಲೀಸ್‌ಗೆ ಒಂದು ರಹಸ್ಯ ವರದಿ ಕಳ... ಬಳ್ಳಾರಿ ಎಎಸ್ಪಿ ಡಿ.ಸಿ. ರಾಜಪ್ಪನವರು ಅಪಾರ ಪ್ರಮಾ...



ರಾಜಪ್ಪನವರ ಶಿವಮೊಗ್ಗದ ಬಾಡಿಗೆ ಮನೆ. ...
ಅದರ ಅಸಲಿ ಮಾಲೀಕ ನಟರಾಜ್


ಅಕ್ರಮ ಆಸ್ತಿ ಸಂಗ್ರಹಿಸಿದ್ದಾರೆಂದು ಆರೋಪಿಸಿ ... ಅನುಮತಿ ಕೋರುತ್ತಾರೆ. ಅದರಂತೆ ಲೋಕಾ... ಕಚೇರಿಯಿಂದ ಅನುಮತಿಯೂ ಸಿಗುತ್ತದೆ. ದಾಳಿ... ನಡೆಯುತ್ತದೆ. ಆ ಪ್ರಾಥಮಿಕ ವರದಿಯಲ್ಲಿ ರಾಜಪ... ಒಟ್ಟಾರೆ ಸಂಬಳದ ಆದಾಯ 40 ಲಕ್ಷ, ಕೃಷಿ ಆ... 10 ಲಕ್ಷ, ಇನ್ನಿತರ ಆದಾಯ 2 ಲಕ್ಷ.... ಹೀಗೆ ... 52 ಲಕ್ಷದಷ್ಟು ಕಾನೂನು ಬದ್ಧ ಆದಾಯ ಇರ... ಆದರೆ ಅದಕ್ಕೂ ಮೀರಿದ ಒಂದು ಕೋಟಿ ಎಪ್ಪ... ಲಕ್ಷ ರೂಪಾಯಿ ಗಳಷ್ಟು ಆಸ್ತಿ ಅವರಿಗಿದೆ ... ನಮೂದಿಸಲಾಗಿತ್ತು.

ಅದರಲ್ಲಿ ಶಿವಮೊಗ್ಗದ ಹರಿಗೆಯಲ್ಲಿ 1 ಕೋಟಿ... ಬೆಲೆಯ ಬಂಗಲೆ ಹಾಗೂ 6 ಎಕರೆ ಜಮೀ... ಹಿರೇಹೆಮ್ಮಿಗನೂರಿನಲ್ಲಿ 20 ಲಕ್ಷ ಬೆಲೆಯ ... ಶಾಲೆ, ರಾಜಪ್ಪನವರ ಪತ್ನಿ ಪ್ರೇಮಾ ಹೆಸರಿನಲ್ಲಿ 6... ಬೆಲೆಯ 40 ಎಕರೆ ಜಮೀನಿದೆ ಎಂದೆಲ್ಲಾ ಸೇರಿಸಲಾ...

ಆದರೆ ಜನವರಿ 31 ರಂದು ನಡೆದ ದಾ... ಈ ಶಂಕೆ ನಿಜವಾಗುವಂಥ ಒಂದೇ ಒಂದು... ಪುರಾವೆಗಳೂ ಲೋಕಾಯುಕ್ತರಿಗೆ ಸಿಗಲಿಲ್ಲ.

ರಾಜಪ್ಪನವರ ಹೆಸರಿನಲ್ಲಿ ಹರಿಗೆಯಲ್ಲಿ 1 ಕೋ... ಬಂಗಲೆ ಇದೆ ಎನ್ನಲಾಗಿತ್ತು. ಆದರೆ ಅದು ಸ... ಶೇಖರಪ್ಪನವರ ಪಿತ್ರಾರ್ಜಿತ ತೋಟದ ಮನೆ ... ಜಮೀನಾಗಿತ್ತು. ರಾಜಪ್ಪನವರ ಕುಟುಂಬವಿರು... ಮೊಗ್ಗದ ಮನೆ ನಟರಾಜ್ ಎಂಬುವರಿಗೆ ಸೇರಿದ್ದು ... ಸಹ ರಾಜಪ್ಪನವರ ಖಾಸಗಿ ಬಂಗಲೆ ಎಂಬಂತೆ ... ಲಾಯಿತು. ಅವರ ಪತ್ನಿ ಪ್ರೇಮಾರವರಿಗೆ ಹ... ತಾಲ್ಲೂಕಿನ ಹಿರೇಹೆಮ್ಮಿಗನೂರಿನಲ್ಲಿ 40 ಎಕರೆ... ಜಮೀನಿದೆ ಎಂದು ಲೋಕಾಯುಕ್ತ ಪೊಲೀಸರು... ಮಾನ ಪಟ್ಟಿದ್ದರು. ಆದರೆ ಹೊಳಲ್ಕೆರೆ ಸಬ್‌ರಿಜಿಸ್ಟ್ರಾರ...

ಸ್ವಿಮ್ಮಿಂಗ್ ಪೂಲ್ ಜರ್ಮನ್ ನಾಯಿ




ಸ್ವಿಮ್ಮಿಂಗ್ ಪೂಲ್ ಅಲ್ಲ, ನೀರಿನ ತೊಟ್ಟಿ

ಯಾವುದೇ ಊರಿನಲ್ಲಿ ಯಾರೇ ಅಧಿಕಾರಿಯ ಮೇಲೆ ಲೋಕಾಯುಕ್ತರ ದಾಳಿ ನಡೆಯಲಿ ಮೀಡಿಯಾಗಳ ಪಾಲಿಗೆ ಅದು ಹಬ್ಬ. ಭ್ರಷ್ಟರನ್ನು ಪತ್ತೆಹಚ್ಚಿ ದಂಡಿಸುವಾಗ ಅಂತಹುದಕ್ಕೆ ಚೂರಾದರೂ ಸಮರ್ಥನೆ ಇರಬಹುದು. ಆದರೆ ಯಾರದ್ದೋ ವೈಯಕ್ತಿಕ ಸೇಡಿಗಾಗಿ ಲೋಕಾಯುಕ್ತ ವ್ಯವಸ್ಥೆ ದುರ್ಬಳಕೆಯಾದಾಗ ಅದರ ಸತ್ಯಾಸತ್ಯತೆಗಳನ್ನು ಮಾಧ್ಯಮದವರಾದರು ಸ್ವಲ್ಪ ಸಹನೆಯಿಂದ ನೋಡಬೇಕಾಗುತ್ತದಲ್ಲವೆ?


ಉದಾಹರಣೆಗೆ ಡಿ.ಸಿ. ರಾಜಪ್ಪನವರ ಪತ್ನಿ-ಮಕ್ಕಳು ವಾಸವಿದ್ದ ಶಿವಮೊಗ್ಗ ಮನೆ ಬಾಡಿಗೆಮನೆಯಾಗಿದ್ದರೂ ಪ್ರಜಾವಾಣಿ ಸೇರಿದಂತೆ ಬಹುತೇಕ ಪತ್ರಿಕೆಗಳು ಅದನ್ನೇ 'ರಾಜಪ್ಪನವರ 1 ಕೋಟಿ ಬಂಗಲೆ, ಎಂದು ಫೋಟೋ ಸಹಿತ ಪ್ರಕಟಿಸಿದ್ದವು.

ಇನ್ನು ಹಿರೇಹೆಮ್ಮಿಗನೂರಿನ ಅವರ ತೋಟದಲ್ಲಿ ಸ್ವಿಮ್ಮಿಂಗ್ ಪೂಲ್ ಇತ್ತು ಎಂದು ಲೋಕಾಯುಕ್ತ ಪೊಲೀಸರು ಪ್ರಚಾರ ಮಾಡಿದ್ದಾರೆ. ಆದರೆ ಅದು ತೋಟಗಾರಿಕೆ ನಡೆಸುವ ರೈತರು ನೀರು ಸಂಗ್ರಹಿಸಿಟ್ಟುಕೊಳ್ಳುವ ನೆಲಮಟ್ಟದ ಟ್ಯಾಂಕೇ ವಿನಃ ಈಜುಕೊಳ ಆಗಿರಲಿಲ್ಲ. ದಾಳಿ ನಡೆಸಿದ ಪೊಲೀಸರು ಎಷ್ಟು ಅತಿರೇಕ ಪ್ರದರ್ಶಿಸಿದ್ದಾರೆಂದರೆ ರಾಜಪ್ಪನವರ ತೋಟದಲ್ಲಿದ್ದ ಒಂದು ಸಾಧಾರಣ ಜಾತಿ ನಾಯಿಯನ್ನು 'ಜರ್ಮನ್ ಶಫರ್ಡ್' ಎಂದು ದಾಖಲಿಸಿಕೊಂಡು ಅದಕ್ಕೂ 4 ಸಾವಿರ ಬೆಲೆ ಕಟ್ಟಿದ್ದಾರೆ!



ಇದು 'ಜರ್ಮನ್ ಶಫರ್ಡ್' ನಾಯಿಯೇ

ಒಬ್ಬರ ಪ್ರಮೋಷನ್‌ಗಾಗಿ ಇನ್ನೊಬ್ಬರ ಕಾಲೆಳೆಯುವ ದುರುದ್ದೇಶ ಇದ್ದರೆ ತಾನೆ ಇಂಥ ಅಸಂಬದ್ಧಗಳು ನಡೆಯುವುದು?



ಈಗ ಪ್ರೇಮರ ಹೆಸರಿನಲ್ಲಿ ಇಡೀ ತಾಲ್ಲೂಕಿನಲ್ಲೇ ಒಂದೆಕರೆ ಭೂಮಿಯೂ ನೋಂದಣಿಯಾಗಿಲ್ಲ ಎಂದು ದೃಢೀಕರಣ ಪತ್ರ ನೀಡಿದ್ದಾರೆ.

ಹೀಗೆ ಲೋಕಾಯುಕ್ತರ ಅನುಮಾನಗಳು ಏಕ್‌ದಂ ಉಲ್ಟಾ ಹೊಡೆದಿದ್ದು ಒಂದೆಡೆಯಾದರೆ ಅದಕ್ಕೆ ವ್ಯತಿರಿಕ್ತವಾಗಿ ರಾಜಪ್ಪನವರಿಗೆ ಬೇರೆ ಆಸ್ತಿಗಳಿದ್ದವು.

ಅವುಗಳ ಪೈಕಿ ಅವರ ಹುಟ್ಟೂರಿನಲ್ಲಿ 15 ಎಕರೆಯಷ್ಟು ಅಡಿಕೆ, ತೆಂಗಿನ ತೋಟ, ಒಂದು ಟ್ರ್ಯಾಕ್ಟರ್, ಒಂದು ಮಾರುತಿ 800 ಕಾರ್, ಮೈಸೂರು ಹಾಗೂ ಶಿವಮೊಗ್ಗದಲ್ಲೊಂದು ಸೈಟುಗಳು, ಒಂದಷ್ಟು ಚಿನ್ನ-ಬೆಳ್ಳಿ, ಬ್ಯಾಂಕ್ ಬ್ಯಾಲನ್ಸ್ ರಾಜಪ್ಪನವರಿಗಿತ್ತು.

ಪೊಲೀಸ್ ಇಲಾಖೆಯೊಳಗೆಯೇ ತಮ್ಮ ವಿರುದ್ಧ ಕೆಲವರು ಸಂಚು ನಡೆಸುತ್ತಿದ್ದಾರೆಂಬ ಅನುಮಾನವಿದ್ದುದಕ್ಕೊ, ಅಥವಾ ನಿಯಮ ಪಾಲನೆಗೆಂದೊ ರಾಜಪ್ಪನವರು ತಮಗಿರುವ ಪ್ರತಿ ಆಸ್ತಿಯ ವಿವರಗಳನ್ನು ಎಲ್ಲಾ ವರ್ಷ ಸರ್ಕಾರಕ್ಕೆ ವರದಿ ಕೊಟ್ಟುಕೊಂಡೇ ಬಂದಿದ್ದರು. ತಾವು ಹೊಸದಾಗಿ ಜಮೀನು ಅಥವಾ ಸೈಟು ಖರೀದಿಸಿದಾಗೆಲ್ಲಾ ಅದರ ಆದಾಯ ಮೂಲವನ್ನು ತೋರಿಸಿ ಸರ್ಕಾರದ ಒಪ್ಪಿಗೆ ಪಡೆದೇ ಖರೀದಿ ಮಾಡಿದ್ದರು. ಇನ್ನು ಸೈಟುಗಳ ವಿಚಾರಕ್ಕೆ ಬರುವುದಾದರೆ ಅವರಿಗಿರುವ ಮೈಸೂರು ಹಾಗೂ ಶಿವಮೊಗ್ಗ ಸೈಟುಗಳು ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘ ವತಿಯಿಂತ ಮಂಜೂರಾಗಿರುವಂತಹವು. ಇದಕ್ಕೆ ರಾಜಪ್ಪನವರು ಸರ್ಕಾರದಿಂದ ಸಂಖ್ಯೆ ಒಇ 139 ಪೊಸಿಪ 2000 ದಿನಾಂಕ 11.6.2001 ರಲ್ಲಿ ಅನುಮತಿ ಪಡೆದಿದ್ದರು. ಅಸಲಿಗೆ ಅವತ್ತು ಆ ಸೈಟಿನ ಬೆಲೆ ಕೇವಲ 2.25 ಲಕ್ಷ ರೂ. ಆಗಿತ್ತು, ಅದೇ ಸೈಟಿಗೆ ಇವತ್ತಿನ ರೇಟಿನಲ್ಲಿ ಒಂದು ವೇಳೆ 25 ಲಕ್ಷ ಬೆಲೆ ಇದ್ದರೆ ಅದು ಅಕ್ರಮ ಗಳಿಕೆ ಹೇಗಾಗುತ್ತದೆ?

ಉಳಿದಂತೆ ರಾಜಪ್ಪನವರಿಗಿರುವ 15 ಎಕರೆ ಜಮೀನಿನ ಪೈಕಿ ಬಹುತೇಕ ಅವರ ಪಿತ್ರಾರ್ಜಿತ ಆಸ್ತಿಯ ಮೂಲಕ ಅವರ ಪಾಲಿಗೆ ಬಂದಿರುವ ಆಸ್ತಿ, ಉಳಿದ ಮೂರು ಎಕರೆ ಜಮೀನು ಖರೀದಿಗೂ ಅವರು ಸರ್ಕಾರದ ಅನುಮತಿ ಪಡೆದು (ಸಂಖ್ಯೆ 2ಇ139 ಪೊಸಿಪ 2000 ದಿನಾಂಕ 25.3.2003) ಕೊಂಡಿದ್ದಾರೆ.

ಲೋಕಾಯುಕ್ತ ಪೊಲೀಸರು ಶಂಕೆಪಟ್ಟಂತೆ ರಾಜಪ್ಪನವರಿಗೆ ಒಂದು ಕೋಟಿಯ ಬಂಗಲೆ ಇಲ್ಲ, ಶಾಲೆ ಇಲ್ಲ, ಅವರ ಪತ್ನಿ ಪ್ರೇಮಾರಿಗೆ 40 ಎಕರೆ ಜಮೀನಿಲ್ಲ...

ಇರುವ ಜಮೀನು, ಸೈಟು, ಚಿನ್ನದ ವಿವರಗಳೆಲ್ಲದರ ಬಗ್ಗೆ ರಾಜಪ್ಪ ಪ್ರತಿ ವರ್ಷ ಸರ್ಕಾರಕ್ಕೆ ಮಾಹಿತಿ ನೀಡಿದ್ದಾರೆ.

ವಿಷಯ ಇಷ್ಟು ನೇರ ಹಾಗೂ ಸರಳವಾಗಿದ್ದಾಗಲೂ ಲೋಕಾಯುಕ್ತ ಪೊಲೀಸರು ರಾಜಪ್ಪನವರನ್ನು ಟಾರ್ಗೆಟ್ ಮಾಡಿದ್ದೇಕೆ? ಲೋಕಾಯುಕ್ತ ವ್ಯವಸ್ಥೆಗೆ ರಾಜಪ್ಪನವರ ಮೇಲೆ ವೈಯಕ್ತಿಕವಾಗಿ ಯಾವುದೇ ಸೇಡಿಲ್ಲದಿರಬಹುದು. ಆದರೆ ಈ IPS ಗೆ ಪ್ರಮೋಷನ್ ಪಡೆಯುವ ಪೈಪೋಟಿಯಲ್ಲಿ ಅವಕಾಶ ವಂಚಿತರು [illegible] ರಾಜಪ್ಪನವರನ್ನು ಇಕ್ಕಟ್ಟಿಗೆ ಸಿಕ್ಕಿಸುವ [illegible] ನಡೆಸಿ. ಅದಕ್ಕೆ, ಲೋಕಾಯುಕ್ತ ವ್ಯವಸ್ಥೆಯನ್ನು ಬಳಸಿಕೊಂಡರಾ ಎಂಬ ಅನುಮಾನ ಈಗ ಹುಟ್ಟಿಕೊಂಡಿದೆ.

ಡಾ. [illegible] ಹೆಗ್ಡೆ ಹಾಗೂ ಉಪ ಲೋಕಾಯುಕ್ತರಾದ ಡಾ. ಪತ್ರಿ ಬಸವನಗೌಡರವರು [illegible] ಬಗ್ಗೆ ಗಮನಹರಿಸಿ. ಲೋಕಾಯುಕ್ತರೊಂದು [illegible] ದುರುಪಯೋಗವಾಗಿದೆಯೋ [illegible] ಮಾಡಬೇಕಿದೆ ■



ಡಾ.ದ್ವಾರಕನಾಥ್ ಮೇಲೆ ಹಲ್ಲೆ!

ಧರ್ಮ ಮತ್ತು ಸಂಸ್ಕೃತಿಯ ಕಾವಲು ಪೊಲೀಸರು ತಾವು ಎಂದು ಭಾವಿಸಿಕೊಂಡಿರುವ ಬಿಜೆಪಿ [illegible] ಕರ್ನಾಟಕದಲ್ಲಿ ಮತ್ತೊಮ್ಮೆ, ಅಂಬೇಡ್ಕರ್‌ರ ಕಲ್ಪನೆಯ 'ಸಂವಿಧಾನ' ಹಾಗು 'ನಾಗರಿಕ ನ್ಯಾಯ ವ್ಯವಸ್ಥೆ'ಯೇ ಈ ನೆಲಕ್ಕೆ ತಕ್ಕುದಾದ ಪ್ರಜಾಸಂಹಿತೆ ಎಂದು ನಂಬಿರುವ ಏಕಾಂಗಿ ವ್ಯಕ್ತಿಯೊಬ್ಬರ ಮೇಲೆ ಗುಂಪು ಹಲ್ಲೆ ನಡೆಸಿ ತಮ್ಮ ಅಸಹನೆ ಹಾಗು ಕೋಳ್ಳಗಳ 'ಫ್ಯಾಸಿಸ್ಟ್' ಸಂಸ್ಕೃತಿಯನ್ನು ಮೆರೆದಿದ್ದಾರೆ.

ಕರ್ನಾಟಕದ 'ಹಿಂದುಳಿದ ವರ್ಗಗಳ ಆಯೋಗ'ದ ಅಧ್ಯಕ್ಷರಾದ ಸಿ.ಎಸ್.ದ್ವಾರಕನಾಥ್, ತಮ್ಮ ಪದನಿಮಿತ್ತ ಕೊಡಗು ಜಿಲ್ಲೆಯ ಪ್ರವಾಸ ಕೈಗೊಂಡಿದ್ದರು. ದ್ವಾರಕನಾಥ್ ಕರ್ನಾಟಕದ ದಲಿತರು, ನಿರ್ಗತಿಕರು ಹಾಗು ದುರ್ಬಲ ಸಮುದಾಯಗಳ ಸ್ಥಿತಿಗತಿಗಳ ಬಗ್ಗೆ ವಾಸ್ತವಿಕ ಅರಿವಿರುವವರು ಮಾತ್ರವಲ್ಲ, ಅಂತಹ ಜನಸಮೂಹದ ಒಳಿತಾಗಿ ಕರ್ನಾಟಕದಲ್ಲಿ ಸಂಘಟಿತವಾದ ಚಳವಳಿಗಳ ಮುಂಚೂಣಿಯಲ್ಲಿ ಬಲ್ಲಂತಹ ವ್ಯಕ್ತಿ. ದ್ವಾರಕನಾಥ್ ಕೊಡಗು ಜಿಲ್ಲೆಯ ಪ್ರವಾಸ ಕೈಗೊಂಡ ಸಂದರ್ಭದಲ್ಲಿ, ಕರ್ನಾಟಕದ ಸಚ್ಛ ಇತಿಹಾಸ- ಸಂಸ್ಕೃತಿಗಳು ನಿರ್ಲಕ್ಷಿಸಿದಂತಹ ಒಂದು ಸಮುದಾಯದ ಅಸ್ತಿತ್ವ ಆ ಜಿಲ್ಲೆಯಲ್ಲಿರುವ ಸಂಗತಿ ಅವರ ಗಮನಕ್ಕೆ ಬಂದಿತು. ಬ್ರಿಟಿಷ್ ವಸಾಹತುಶಾಹಿ ಕಾಲದಲ್ಲಿ ಆ ಪ್ರಾಂತ್ಯವನ್ನಾಳಿದ್ದ ಚಿಕವೀರ ರಾಜೇಂದ್ರ ಸಂಕಷ್ಟದ ಸಮಯದಲ್ಲಿ ತನ್ನ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು, ಕೊಡಗು ಜಿಲ್ಲೆಯ ತಲಕಾವೇರಿ ಸುತ್ತಮುತ್ತಲಿನಲ್ಲಿರುವ ದುರ್ಗಮ ಅರಣ್ಯ ಪ್ರದೇಶದಲ್ಲಿ ತನ್ನ ಠಿಕಾಣಿಯನ್ನು ಕಟ್ಟಿಕೊಂಡಿದ್ದ. ಅಂತಹ ಸಂಕಷ್ಟದ ಗಳಿಗೆಗಳಲ್ಲಿ ಚಿಕವೀರ ರಾಜೇಂದ್ರನ ರಕ್ಷಣೆಗೆ ನಿಂತವರು ಕಾಪಲಿಕರೆಂಬ ಆದಿವಾಸಿ ಸಮುದಾಯದವರು. ಕಾಪಲಿಕ ಸಮುದಾಯದ ಜನ, ತಲಕಾವೇರಿಯಿಂದ 6 ಕಿ.ಮಿ. ದೂರದಲ್ಲಿರುವ ದಟ್ಟ ಕಾಡು ಪ್ರದೇಶದಲ್ಲಿ ಕಡುಕಷ್ಟದಲ್ಲಿ ಬದುಕುತ್ತಿದ್ದಾರೆ ಎನ್ನುವುದು ತಿಳಿದದ್ದೇ, ದ್ವಾರಕನಾಥ್ ಆ ಪ್ರದೇಶಕ್ಕೆ ಅಧಿಕಾರಿಗಳು ಹಾಗು ಆಯೋಗದ ಸದಸ್ಯರ ಜೊತೆ ಹೋಗಿ ಕಾಪಲಿಕರ ಸ್ಥಿತಿಗತಿಗಳನ್ನು ಕಣ್ಣಾರೆ ಕಂಡು, ಕೂಡಲೇ ಸಾಧ್ಯವಿರುವ ಪರಿಹಾರಗಳನ್ನು ಒದಗಿಸುವ ವ್ಯವಸ್ಥೆ ಮಾಡಿದರು.

ಈ ಕೆಲಸ ಮುಗಿದ ನಂತರ ಆಯೋಗದ ಕೆಲವು ಸದಸ್ಯರು, ತಲಕಾವೇರಿ ಹತ್ತಿರವೇ ಇರುವುದರಿಂದ ಅಲ್ಲಿನ ದೇವಸ್ಥಾನಕ್ಕೆ ಹೋಗಿಬರುವ ನಿರ್ಧಾರ ಮಾಡಿದರು. 'ಸುಂದರ ಜಗ ಶಿವಮಂದಿರವಾಗಿರೆ/ ಜಪಮಣಿ ತಪಮಣಿ ಮಾಲೆಯದೇಕೆ...' ಎಂಬ ಅರಿವಿನ ಪರಂಪರೆಗೆ ಸೇರಿದ ದ್ವಾರಕನಾಥ್, ತಾವು ಈ ಕಾಡಿನಲ್ಲಿ ಸುತ್ತಾಟ ಮಾಡುವುದಾಗಿ ತಿಳಿಸಿದರು, ಕೆಲವು ಅಧಿಕಾರಿಗಳೂ ಅವರ ಜೊತೆ ಸುತ್ತಾಡಲು ಉಳಿದರು- ಸಹಜವಾದ ಈ ವಿವರಗಳನ್ನು ಎತ್ತಿ ಹೇಳಬೇಕಾಗಿರುವ ದೌರ್ಭಾಗ್ಯ ನಮ್ಮದು! ಮಾರನೆಯ ದಿನ ಬೆಳಗ್ಗೆ, ದ್ವಾರಕನಾಥ್ ಉಳಿದುಕೊಂಡಿದ್ದ ಮಡಿಕೇರಿಯ ವಸತಿಗೃಹದ ಮುಂದೆ, ಮಾಜಿ ಬಿಜೆಪಿ ಶಾಸಕನ ನಾಯಕತ್ವದಲ್ಲಿ ವಿಶ್ವ ಹಿಂದೂ ಪರಿಷತ್‌ನ 'ಸಂಸ್ಕೃತಿ ರಕ್ಷಕ'ರ ಸುಮಾರು 150 ಜನರ ಗುಂಪು ಜಮಾಯಿಸಿ, 'ದ್ವಾರಕನಾಥ್ ತಲಕಾವೇರಿ ದೇವಸ್ಥಾನಕ್ಕೆ ಹೋಗಿ ತೀರ್ಥ, ಪ್ರಸಾದ ಸ್ವೀಕರಿಸಲು ನಿರಾಕರಿಸಿ, ಹಿಂದೂ ಧರ್ಮಕ್ಕೆ, ಕನ್ನಡದ ಕಾವೇರಿಗೆ ಅವಮಾನ ಮಾಡಿದ್ದಾರೆ' ಎಂದು ಆರೋಪಿಸಿ ಪ್ರತಿಭಟನೆಗೆ ತೊಡಗಿದರು. ದ್ವಾರಕನಾಥರ ಕೊಠಡಿಗೆ ನುಗ್ಗಿ ಘೋಷಣೆಗಳನ್ನು ಕೂಗುತ್ತ ಅವರನ್ನು ತಳ್ಳಾಡಿದರು. ದ್ವಾರಕನಾಥ್ ತಮ್ಮ ವರ್ತನೆಗೆ ಕ್ಷಮೆ ಯಾಚಿಸಬೇಕು ಎಂದು ಆವಾಜ್ ಹಾಕತೊಡಗಿದರು. ದ್ವಾರಕನಾಥ್ ಈ ದುಂಡಾವರ್ತಿಗೆ ಮಣಿಯದಿದ್ದಾಗ, ಆ ಗುಂಪಿನಲ್ಲಿದ್ದ ಒಬ್ಬ ವೀರ, ತನ್ನ ಬಳಿ ಇದ್ದ ಕೋಕೋಕೋಲ ಬಾಟಲಿಯಲ್ಲಿದ್ದ ನೀರನ್ನು ''ಕಾವೇರಿ ತೀರ್ಥ''ವೆಂದು ಬಲಾತ್ಕಾರದಲ್ಲಿ ಕುಡಿಸಲು ಪ್ರಯತ್ನಿಸಿದ.

ನಾವು ಫೋನಿನಲ್ಲಿ ಸಂಪರ್ಕಿಸಿ ದ್ವಾರಕನಾಥರನ್ನು ಮಾತನಾಡಿಸಿದಾಗ, ಅವರು ''ಗುಂಪಿನಲ್ಲಿದ್ದ ಬಹಳಷ್ಟು ಜನ ಕಂಠಮಟ್ಟ ಕುಡಿದು ಓಲಾಡುತ್ತಿದ್ದರು. 'ಕಾವೇರಿ ತೀರ್ಥ' ಎಂದು ಅವರು ತುಂಬಿಸಿ ತಂದಿದ್ದ ಕೋಕೋಕೋಲ ಬಾಟಲಿಯನ್ನೂ ಹಿಡಿದುಕೊಳ್ಳಲಾಗದೆ ನೆಲಕ್ಕೆ ಕೆಡವಿ, ನೆಲದ ಮೇಲೆ ಚೆಲ್ಲಿದ ಆ 'ತೀರ್ಥ'ವನ್ನು ಎಗ್ಗಿಲ್ಲದೆ ತುಳಿದಾಡಿದ ಈ ಜನರಿಗೆ ಯಾವ ಪಾವಿತ್ರ್ಯದ ಕಲ್ಪನೆ ಇರಲು ಸಾಧ್ಯ!'' ಎಂದು ಹೇಳಿದರು. 'ದ್ವಾರಕನಾಥ್ ಕ್ಷಮೆಯಾಚಿಸಿ ತೀರ್ಥ ಸ್ವೀಕರಿಸಿದರು'ಎಂದು ಪ್ರಜಾವಾಣಿ ತನ್ನ ಮುಖಪುಟದ ವರದಿಯಲ್ಲಿ ಪ್ರಕಟಿಸಿದೆ (ಶುಕ್ರವಾರ, ಫೆಬ್ರವರಿ 8, 2008). “ಆ ವರದಿಗಾರರು ನಡೆದ ಘಟನೆಗಳ ವಿವರಗಳನ್ನು ಮರೆಮಾಚಿ, ತಿರುಚಿ ಬರೆದಿದ್ದಾರೆ; ನಾನು ಪ್ರಜಾವಾಣಿ ವರದಿಗೆ ಪ್ರತಿಕ್ರಿಯೆ ಕೊಟ್ಟಿದ್ದೇನೆ; ಅದನ್ನು ಅವರು ಬೆಂಗಳೂರು ಆವೃತ್ತಿಯಲ್ಲಿ ಮಾತ್ರ ಪ್ರಕಟಿಸಿದ್ದಾರೆ ನೋಡಿ” ಎಂದು ದ್ವಾರಕನಾಥ್ ಖೇದದಿಂದ ಹೇಳಿದರು. ಆ 'ಸಂಸ್ಕೃತಿ ಹಿತರಕ್ಷಕ' ವರದಿಗಾರ 'ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ದೇವಸ್ಥಾನದ ಜೀರ್ಣೋದ್ಧಾರ ಕಾರ್ಯವನ್ನು ಪರಿಶೀಲಿಸಲು ತಲಕಾವೇರಿಗೆ ತೆರಳಿದ್ದರು' ಎಂಬ ಹಸಿಸುಳ್ಳನ್ನು ಬರೆದು, 'ತೀರ್ಥ ಕುಡಿಸಿದ ಬಿ.ಜೆ.ಪಿ!' ಎಂಬ ತಲೆಬರಹವನ್ನೂ ಕೊಡುತ್ತಾನೆ! ಕನ್ನಡದ ಪತ್ರಿಕೆಗಳು ನೂರು ಕಾಲ ಬಾಳಲಿ!

ದ್ವಾರಕನಾಥ್ ಮೇಲೆ ಹಲ್ಲೆ ನಡೆಯುತ್ತಿದ್ದಾಗ, ಸ್ಥಳದಲ್ಲಿದ್ದ ಇಬ್ಬರು ಪೊಲೀಸ್ ಪೇದೆಗಳು ಪಿಳಿ ಪಿಳಿ ನೋಡುತ್ತ ನಿಂತಿದ್ದರು. “ಎಲ್ಲ ಮುಗಿದ ನಂತರ, ಪೊಲೀಸರ ವ್ಯಾನು, ಅಧಿಕಾರಿಗಳ ಜೀಪು ಸೈರನ್ ಹೊಡೆದುಕೊಂಡು ಬಂದವು, ಥೇಟ್ ಸಿನಿಮಾದಲ್ಲಿನ ಹಾಗೆ!” ಎಂದು ದ್ವಾರಕನಾಥ್ ತಮಾಷೆಯಾಗಿ ಹೇಳಿದರು.

ಮಡಿಕೇರಿಯಲ್ಲಿ ಇಂತಹ ಘಟನೆಗಳು ನಡೆಯುತ್ತಿರುವುದು ಇದೇನೂ ಮೊದಲ ಬಾರಿಯಲ್ಲ, ಕೆಲವು ವರ್ಷಗಳ ಹಿಂದೆ ಅಲ್ಲಿ ಮತೀಯವಾದ ವಿರೋಧಿ ಸಮಾವೇಶವೊಂದನ್ನು ಏರ್ಪಡಿಸಿದ್ದಾಗ ಸಂಘಪರಿವಾರದವರು ಸಭಾಂಗಣಕ್ಕೆ ನುಗ್ಗಿ, ಪೊಲೀಸರ ಸಮ್ಮುಖದಲ್ಲೇ ಮೈಕು ಎಳೆದು, ಸಮಾವೇಶಕ್ಕೆ ಧಿಕ್ಕಾರ ಘೋಷಿಸಿದ್ದರು. ಆ ನಂತರ ಪೊಲೀಸರು ಸಮಾವೇಶ ಏರ್ಪಡಿಸಿದವರನ್ನೇ ಗದರಿಸಿ, ಸಭೆಯನ್ನು ಬರ್ಖಾಸ್ತುಗೊಳಿಸಿ 'ಶಾಂತಿ ಸುವ್ಯವಸ್ಥೆಗಳನ್ನು ಕಾಪಡಿದ್ದರು'. ಮೂರು ವರ್ಷಗಳ ಕೆಳಗೆ ಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿ ಮಡಿಕೇರಿಯಲ್ಲಿ ತಮ್ಮ 'ಹಸೀನಾ' ಚಲನಚಿತ್ರದ ಚಿತ್ರೀಕರಣದಲ್ಲಿ ತೊಡಗಿದ್ದಾಗಲೂ ಬಿಜೆಪಿ ಗೂಂಡಾಗಳು ಅವರ ತಂಡದ ಮೇಲೆ ಹಲ್ಲೆ ನಡೆಸಿದ್ದರು. ಕಾರಣ: ಇದೇ 'ಹಿಂದು ಧರ್ಮದ ಸಂರಕ್ಷಣೆ'!

ಮೇಲಿನ ಎರಡು ಪ್ರಕರಣಗಳಲ್ಲಿ ಹಲ್ಲೆಗೊಳಗಾದವರು ಏಕಾಂಗಿಯಾಗಿರಲಿಲ್ಲ, ಆದರೆ ಪ್ರಸ್ತುತ ಪ್ರಕರಣದಲ್ಲಿ ದ್ವಾರಕನಾಥರ ವ್ಯಕ್ತಿಗತ ದೇಹ ಮತ್ತು ಮನಸ್ಸುಗಳ ಮೇಲೆ ಮಾತ್ರ ಹಲ್ಲೆ ನಡೆದಿರುವುದಲ್ಲ, ತಲತಲಾಂತರದಿಂದ ಈ ನಾಡಿನಲ್ಲಿ ಮೇಲುಜಾತಿ-ವರ್ಗಗಳ ಜನ ಧರ್ಮ, ಸಂಸ್ಕೃತಿ, ನಂಬಿಕೆ ನಡಾವಳಿಕೆಗಳ ಬಗ್ಗೆ ತಮ್ಮ ತೀರ್ಮಾನಗಳನ್ನು ಎಲ್ಲ ಜನರ ಮೇಲೂ ಹೇರುತ್ತಲೇ ಬಂದಿದ್ದಾರೆ. ಅವಶ್ಯ ಬಿದ್ದರೆ ಅದಕ್ಕಾಗಿ ಹಿಂಸೆಯನ್ನೂ ನಡೆಸಿದ್ದಾರೆ. ಮಡಿಕೇರಿಯಲ್ಲಿ ನಡೆದದ್ದು ಈ ಚಾರಿತ್ರಿಕ ಪ್ರಕ್ರಿಯೆಯ ಕಿರು ಅಭಿನಯ. ಹಾಗಾಗಿ ಇದು ಸ್ವಾತಂತ್ರ್ಯ ಮತ್ತು ಸಮಾನತೆಗಳ ಮೂಲಭೂತ ಮೌಲ್ಯಗಳ ಮೇಲೆ ನಡೆದಿರುವ ಹಲ್ಲೆ. ರಾಜ್ಯಾದ್ಯಂತ ಬಿಜೆಪಿ ಮತ್ತು ಅದರ ಅಂಗಸಂಸ್ಥೆಗಳು ಈಗ ಅಲ್ಪಸಂಖ್ಯಾತ ಜೊತೆ ಸಂಘಪರಿವಾರದ ಅಭಿಪ್ರಾಯಗಳಿಗೆ ಭಿನ್ನಮತ ವ್ಯಕ್ತಪಡಿಸುವ ಹಿಂದೂಗಳ ಮೇಲೂ ಇಂತಹ ಗುಂಪು ದಾಳಿಗಳನ್ನು ಯೋಜಿತ ರೀತಿಯಲ್ಲಿ ನಡೆಸುತ್ತಿವೆ. ದ್ವಾರಕನಾಥ್ ಮೇಲೆ ನಡೆದ ಹಲ್ಲೆ ಈ ಸರಣಿಯಲ್ಲಿ ಇತ್ತೀಚಿನದ್ದು. ಇದು, ಬಿಜೆಪಿ ಅಧಿಕಾರಕ್ಕೆ ಬಂದರೆ ರಾಜ್ಯಕ್ಕೆ ಕಾದಿರುವ ಕೇಡಿನ ಮುನ್ಸೂಚನೆ.

'ಸಂಸ್ಕೃತಿ' ಪೊಲೀಸರಿದ್ದಾರೆ ಎಚ್ಚರಿಕೆ!

■ ಜಿ.ರಾಜಶೇಖರ್, ಕೆ.ಫಣಿರಾಜ್



ಅನಂತಮೂರ್ತಿಯವರ ಸಂಸ್ಕಾರ ಮತ್ತೆ ವಿವಾದದಲ್ಲಿ


ಅನಂತಮೂರ್ತಿಯವರ ಲೋಕಖ್ಯಾತ ಕಾದಂಬರಿ 'ಸಂಸ್ಕಾರ'ದ ಬಗ್ಗೆ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಹುಟ್ಟುಹಾಕಿರುವ ವಿವಾದಕ್ಕೂ ದ್ವಾರಕನಾಥ್ ಮೇಲೆ ಮಡಿಕೇರಿಯಲ್ಲಿ ನಡೆದ ಹಲ್ಲೆಗೂ ಮೂಲಭೂತ ವ್ಯತ್ಯಾಸವೇನಿಲ್ಲ, ಅಸಹನೆಯ ಸಂಸ್ಕೃತಿಯೇ ಎರಡಕ್ಕೂ ಮೂಲಪ್ರೇರಣೆ. 'ಸಂಸ್ಕಾರ' ಕಾದಂಬರಿ ಪ್ರಕಟವಾಗಿ 40 ವರ್ಷಗಳೇ ಕಳೆದುಹೋಗಿವೆ. ಅದು ಪ್ರಕಟವಾದ ಮೊದಲಿನಲ್ಲಿ ಕೆಲವು ಶುಂಠ ಬ್ರಾಹ್ಮಣರು 'ಬ್ರಾಹ್ಮಣ ವಿರೋಧಿ' ಎಂಬ ಕಾರಣಕ್ಕೆ ಅದನ್ನು ನಿಷೇಧಿಸಬೇಕು ಎಂದು ಒತ್ತಾಯಿಸಿದ್ದರು. ಈ ಬೇಡಿಕೆಗೆ ಬಹುತೇಕ ಬ್ರಾಹ್ಮಣರೇ ಸ್ಪಂದಿಸಲಿಲ್ಲ, ಹಾಗಾಗಿ ಆ ಪ್ರತಿಭಟನೆ ಅಲ್ಲಿಗೇ ತಣ್ಣಗಾಯಿತು. ಆ ನಂತರ 'ಸಂಸ್ಕಾರ' ಸಿನೆಮಾ ಆಗಿ, ಕನ್ನಡದ ಪ್ರಪ್ರಥಮ ಹೊಸ ಅಲೆಯ ಚಿತ್ರ ಎಂಬ ಹೆಗ್ಗಳಿಕೆಯನ್ನೂ ಪಡೆಯಿತು. ಭಾರತದ ಎಲ್ಲ ಭಾಷೆಗಳು ಹಾಗು ಬಹುತೇಕ ಯುರೋಪಿಯನ್ ಭಾಷೆಗಳಿಗೆ ಅನುವಾದಗೊಂಡಿರುವ 'ಸಂಸ್ಕಾರ', ಜಗತ್ತಿನ ಅನೇಕ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಒಂದು ಪಠ್ಯವಾಗಿ ನಿಗದಿಗೊಂಡಿದೆ.

ಈ ಕಾದಂಬರಿಯ ಹಿಂದಿ ಅನುವಾದ (ಅನು: ಚಂದ್ರಕಾಂತ ಕುಸನೂರು) ಮಂಗಳೂರು ವಿಶ್ವವಿದ್ಯಾಲಯದಲ್ಲಿ ಹಿಂದಿಯನ್ನು ಎರಡನೆಯ ಐಚ್ಛಿಕ ಭಾಷೆಯಾಗಿ ಕಲಿಯುತ್ತಿರುವ ನಾಲ್ಕನೆಯ ಸೆಮಿಸ್ಟರ್ ಬಿ.ಎಸ್‌ಸಿ. ವಿದ್ಯಾರ್ಥಿಗಳಿಗೆ ಪಠ್ಯವಾಗಿದ್ದು, ವಿದ್ಯಾರ್ಥಿಗಳು ಪ್ರಸ್ತುತ ಸೆಮಿಸ್ಟರಿನ ಮಧ್ಯಭಾಗದಲ್ಲಿ ಅಭ್ಯಾಸ ನಡೆಸುತ್ತಿದ್ದಾರೆ. ಈಗ ಇದ್ದಕ್ಕಿದಂತೆ ಮಂಗಳೂರಿನ ಒಬ್ಬ ಚಡ್ಡಿ ಅಧ್ಯಾಪಕನ ಕುತಂತ್ರದಿಂದ ಕಾದಂಬರಿಯನ್ನು ಪಾಠಕ್ರಮದಿಂದ ಹಿಂದೆಗೆದುಕೊಳ್ಳಲು ವಿಶ್ವವಿದ್ಯಾಲಯದ ಹಿಂದಿ 'ಶೈಕ್ಷಣಿಕ ಸಮಿತಿ' ಪರಿಶೀಲಿಸುತ್ತಿದೆ. ವಿಶ್ವವಿದ್ಯಾಲಯದ ಕೆಲವು ಹಿಂದಿ ಅಧ್ಯಾಪಕರು, ''ಸಂಸ್ಕಾರ ಕಾದಂಬರಿಯಲ್ಲಿ ಅಶ್ಲೀಲಮಯವಾದ ಕೆಲವು ವಿವರಗಳಿವೆ. ಅದನ್ನು ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ವಿವರಿಸಿ ಹೇಳುವುದು ಕಷ್ಟವಾಗುತ್ತದೆ'' ಎಂದು ವಿಶ್ವವಿದ್ಯಾಲಯದ ಉಪಕುಲಪತಿಗಳಿಗೆ ದೂರು ಇತ್ತಿದ್ದಾರಂತೆ. ಈ ಉಪಕುಲಪತಿಯಾದರೋ, ತನ್ನ ಬಳಿ ದೂರು ತಂದ ಅಧ್ಯಾಪಕರು ಮೂರ್ಖರು ಎಂದು ಅವರ ಮುಖಕ್ಕೆ ಹೇಳುವ ಛಾತಿ ಇಲ್ಲದ ಬೆನ್ನೆಲುಬು ಇಲ್ಲದ ವ್ಯಕ್ತಿ. ಅವರು ದೂರು ತಂದ ಅಧ್ಯಾಪಕರಿಗೆ ''ನೀವು ಈ ಕುರಿತು ಒಂದು ಮನವಿಯನ್ನು ಶೈಕ್ಷಣಿಕ ಸಮಿತಿಗೆ ಸಲ್ಲಿಸಿ'' ಎಂದು ಸೂಚಿಸಿದ್ದಾರೆ; ಇತ್ತ ಆ ಸಮಿತಿಯವರನ್ನು ಕರೆಸಿ, ಮನವಿಯ ಪ್ರಕಾರ 'ಸಂಸ್ಕಾರ' ಕಾದಂಬರಿಯನ್ನು ಪಾಠಕ್ರಮದಿಂದ ಹಿಂತೆಗೆದುಕೊಳ್ಳಲು ಶಿಫಾರಸ್ಸು ಮಾಡುವಂತೆ ತಾಕೀತು ಮಾಡಿದ್ದಾರೆ; ಎಲ್ಲವೂ ಬಾಯ್ಮಾತಿನಲ್ಲಿ. ಸದ್ರಿ ಸಮಿತಿ 11.2.2008ರಂದು ಇದಕ್ಕಾಗಿಯೇ ವಿಶೇಷ ಸಭೆ ಸೇರಿ ತೀರ್ಮಾನ ಕೈಗೊಳ್ಳಲಿದೆಯಂತೆ.


ಮಂಗಳೂರು ವಿಶ್ವವಿದ್ಯಾಲಯ ಚಡ್ಡಿ ಪರಿವಾರದ ಬೇಡಿಕೆಗಳಿಗೆ ಮಣಿದರೆ ಅದು ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ಕಾಳಜಿಯುಳ್ಳ ಎಲ್ಲರಿಗೂ ಮಾಡುವ ಅವಮಾನ. 'ಸಂಸ್ಕಾರ' ಕಾದಂಬರಿ ಹೇಗೆ ಅಶ್ಲೀಲವಲ್ಲ ಮತ್ತು ಡಿಗ್ರಿ ಓದುತ್ತಿರುವ ಎಂರ ಹರೆಯದ ವಿದ್ಯಾರ್ಥಿಗಳಿಗೆ ಹೇಗೆ ಅಪಥ್ಯವಲ್ಲ ಎಂದು ಮುಂತಾಗಿ ಇಲ್ಲಿ ವಿವರಿಸಬೇಕಾದ ಅಗತ್ಯವೇ ಇಲ್ಲ, ಕನ್ನಡದಲ್ಲಿ ಈ ಚರ್ಚೆಗಳೆಲ್ಲ ಯಾವತ್ತೋ ನಡೆದು ನಿಕಾಲೆಯಾಗಿವೆ. ಸಂಘಪರಿವಾರದ ಪೆದ್ದರಿಗೆ ಸಾಹಿತ್ಯದ ಕ್ಲಾಸು ತೆಗೆದುಕೊಳ್ಳುವ ಜರೂರು ಕೂಡ ನಮಗಿಲ್ಲ, ಆದರೆ 'ಅಸಹಾಯಕರ ಮೇಲೆ ಗುಂಪು ಹಲ್ಲೆ ನಡೆಸುವುದು ತಪ್ಪು' [illegible] ಅಶ್ಲೀಲವಾದ ಸಬೂದು: ಸಂಸ್ಕಾರ ಕಾದಂಬರಿಯಲ್ಲಿ ಅಶ್ಲೀಲವಾದದ್ದು ಏನೂ ಇಲ್ಲ; ಎಂ.ಎಫ್ ಹುಸೇನರ ಚಿತ್ರಗಳಲ್ಲಿ ಅವಮಾನಕಾರಿಯಾದದ್ದೇನೂ ಕೂಡ ಏನೂ ಇಲ್ಲ' ಎಂದು [illegible] ನಾವು [illegible] ಎದುರು ಸಾರಿ ಸಾರಿ ಹೇಳಬೇಕಾಗಿ ಬಂದಿದೆ. ವಚನಕಾರರ ಯುಗದಾದಿಯಾಗಿ ನಿರ್ಭೀತ ಧಾರ್ಮಿಕ-ಸಾಮಾಜಿಕ ಭಿನ್ನಮತ, ವೈದಿಕ ಪರಂಪರೆಯ [illegible] [illegible] ಬದುಕು ಒಂದು ಪರಂಪರೆಯಾಗಿ ಅಂತರ್ಗತಮಾಡಿಕೊಂಡಿದೆ; ವಸಾಹತುಶಾಹಿ ವಿರೋಧಿ ಹೋರಾಟ ಸ್ವಾತಂತ್ರ್ಯ, ಸಮಾನತೆ ಹಕ್ಕುಗಳ ಪ್ರತಿಪಾದನೆಯನ್ನು, ಅದಕ್ಕೆ [illegible] [illegible] ರೂಢಿಗೆ ತಂದು ಒಂದೂವರೆ ಶತಮಾನ ಕಳೆದಿದೆ. ಈಗ ಸಂಘಪರಿವಾರದ 'ಸಂಸ್ಕೃತಿ ಪೊಲೀಸರು' ಈ ಪರಂಪರೆಯ ಮೇಲೆ [illegible] ಇದು ನಾಡಿನ ಸಂಸ್ಕೃತಿಗೆ ಬಿಟ್ಟಿಯ ಬಲವಾದ. ■

ಚಿಕ್ಕನಗೌಡ್ರಿಗೆ ಗುದ್ದುವರೆ ಅರೆಮಲೆನಾಡಿನ ಜನ?

ಗಂಡಹೆಂಡಿರ ಜಗಳದಲ್ಲಿ ಕೂಸು ಬಡವಾಯ್ತು ಅನ್ನೋ ಹಾಗೆ ಆಗಿದೆ ಕಲಘಟಗಿ ಕ್ಷೇತ್ರದ ಜನರ ಪಾಡು. ಬಿಜೆಪಿಯ ಶಾಸಕ ಚಿಕ್ಕನಗೌಡ್ರು ದಬ್ಬಾಳಿಕೆ ಒಂದೆಡೆಯಾದರೆ, ಸೋತು ಸುಣ್ಣವಾಗಿರುವ ಪಿ.ಸಿ. ಸಿದ್ದನಗೌಡ್ರ ಸೇಡಿನ ರಾಜಕಾರಣ ಇನ್ನೊಂದೆಡೆಗೆ. ಇವರಿಬ್ಬರ ಮಧ್ಯದಲ್ಲಿ ಕಲಘಟಗಿಯಂತೂ ಅಕ್ಷರಶಃ ಸೊರಗಿಹೋಗಿದೆ. ಕಿತ್ತು ತಿನ್ನುವ ಬಡತನ, ಬದುಕುವುದಕ್ಕಾಗಿಯೇ ಮೈಮಾರಿಕೊಳ್ಳುವ ಹೀನಾಯ ಪರಿಸ್ಥಿತಿಗೆ ದೂಡಲ್ಪಟ್ಟಿರುವ ಮಹಿಳೆಯರು, ಸಾಲದ ಶೂಲಕ್ಕೆ ಸಿಕ್ಕು ನೇಣಿಗೆ ಕೊರಳೊಡ್ಡುತ್ತಿರುವ ರೈತರು – ಯಾರ ಕೂಗೂ ಈ ನಾಯಕಮಣಿಗಳಿಗೆ ಕೇಳಿಸುತ್ತಿಲ್ಲ. ಹೇಗೆ ಸೇಡಿನ ರಾಜಕಾರಣ ಮಾಡಬೇಕು, ಹೇಗೆ ಕ್ಷೇತ್ರವನ್ನು ಕೊಳ್ಳೆ ಹೊಡೆಯಬೇಕು ಎಂಬ ಲೆಕ್ಕಾಚಾರದಲ್ಲಿ ಅವರು ನಿರತರಾಗಿದ್ದಾರೆಯೇ ವಿನಃ ಕ್ಷೇತ್ರದ, ಜನರ ಅಭಿವೃದ್ಧಿಯ ಕಡೆ ಕಣ್ಣುಹಾಯಿಸಿದ ಉದಾಹರಣೆಯೇ ಇಲ್ಲ. ಲಂಬಾಣಿ ತಾಂಡಾಗಳ ಮಹಿಳೆಯರು ಮತ್ತು ಅವರ ಮಕ್ಕಳು ಮಹಾರಾಷ್ಟ್ರ, ಗುಜರಾತ್, ರಾಜಸ್ತಾನದ ವ್ಯಾಪಾರಿಗಳಿಗೆ ಮಾರಾಟವಾಗುತ್ತಿರುವುದನ್ನು ನೋಡಿದರೇನೇ ಕ್ಷೇತ್ರದ ಅಭಿವೃದ್ಧಿ ಎಷ್ಟರಮಟ್ಟಿಗೆ ಆಗಿದೆ ಎಂಬುದು ಅರ್ಥವಾಗುತ್ತದೆ. ಇಡೀ ಉತ್ತರ ಕರ್ನಾಟಕದಲ್ಲಿಯೇ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲೊಂದಾದ ಈ ಕ್ಷೇತ್ರವನ್ನು ಅದೇ ಸ್ಥಿತಿಯಲ್ಲಿಯೇ ಮುಂದುವರೆಸಿಕೊಂಡು ಹೋಗುವುದಕ್ಕೆ ಇವರಿಬ್ಬರೂ ಶತಾಯಗತಾಯು ಪ್ರಯತ್ನ ನಡೆಸುತ್ತಿದ್ದಾರೆಂದರೆ ಪ್ರಾಯಶಃ ಅತಿಶಯೋಕ್ತಿಯಾಗಲಾರದು.



ಕಲಘಟಗಿ ಕ್ಷೇತ್ರದಲ್ಲಿ ಹುಬ್ಬಳ್ಳಿ ತಾಲ್ಲೂಕಿನ 36 ಹಳ್ಳಿಗಳು, ಕಲಘಟಗಿ ತಾಲ್ಲೂಕಿನ 87 ಹಳ್ಳಿಗಳು – ಒಟ್ಟು 123 ಹಳ್ಳಿಗಳು ಬರುತ್ತವೆ. ಇದರಲ್ಲಿಯೇ ಸುಮಾರು ಹತ್ತಕ್ಕೂ ಹೆಚ್ಚು ಲಂಬಾಣಿ ತಾಂಡಾಗಳೂ ಸೇರಿವೆ. ಇಲ್ಲಿ ಒಟ್ಟು ಮತದಾರರ ಸಂಖ್ಯೆ 2 ಲಕ್ಷದ 10 ಸಾವಿರದಷ್ಟಿದ್ದು ಅದರಲ್ಲಿ ಲಿಂಗಾಯತರು 32 ಸಾವಿರ, ಮುಸ್ಲಿಮರು 28 ಸಾವಿರ, ದಲಿತರು 30 ಸಾವಿರ, ಮರಾಠಿಗರು 25 ಸಾವಿರ ಇದ್ದಾರೆ. ಕಳೆದ ಬಾರಿಯ ಚುನಾವಣೆಯಲ್ಲಿ ಬಿಜೆಪಿಯ ಎಸ್.ಐ. ಚಿಕ್ಕನಗೌಡ್ರ ತಮ್ಮದೇ ಸೋದರ ಸಂಬಂಧಿ ಪಿ.ಸಿ. ಸಿದ್ದನಗೌಡ್ರ ಅವರನ್ನು ಕೇವಲ 1,800 ಮತಗಳ ಅಂತರದಿಂದ ಸೋಲಿಸಿ ಕ್ಷೇತ್ರವನ್ನು ತಮ್ಮ ಮಡಿಲಿಗೆ ಹಾಕಿಕೊಂಡಿದ್ದರು. ಕಳೆದ ಚುನಾವಣೆಯಲ್ಲಿ ಬಂದೂಕು ಬಾಬು ಎಂದೇ ಪ್ರಸಿದ್ಧನಾಗಿರುವ ಬಾಬುಸಾಬ್ ಕೂಡ ಸ್ಪರ್ಧಿಸಿ 27 ಸಾವಿರ ಮುಸ್ಲಿಮ್ ಮತಗಳನ್ನು ಕಿತ್ತುಕೊಂಡು ಈ ಕ್ಷೇತ್ರವನ್ನು ಮೂರು ಬಾರಿ ಪ್ರತಿನಿಧಿಸಿದ್ದ ಸಿದ್ದನಗೌಡ್ರ ಮಕಾಡೆ ಮಲಗಲು ನೇರವಾಗಿ ಕಾರಣನಾಗಿದ್ದ. ಒಂದು ವೇಳೆ ಆತ ಸ್ಪರ್ಧಿಸದಿದ್ದರೆ ಬಿಜೆಪಿಯ ಚಿಕ್ಕನಗೌಡ್ರ ಗೆಲ್ಲುವ ಪ್ರಮೇಯವೇ ಬರುತ್ತಿರಲಿಲ್ಲ.


ಬಾಬಾಸಾಬ್ ಕಾಸೀಮ್


ಚಿಕ್ಕನಗೌಡ್ರ

ಕ್ಷೇತ್ರವನ್ನು ಮೂರು ಬಾರಿ ಪ್ರತಿನಿಧಿಸಿದ್ದ ಸಿದ್ದನಗೌಡ್ರ ಕೂಡ ಕ್ಷೇತ್ರಕ್ಕೆ ಕಿಸಿದಿದ್ದು ಅಷ್ಟರಲ್ಲಿಯೇ ಇದೆ. ಜೆಡಿಎಸ್‌ನ ನಾಮಫಲದೊಂದಿಗೆ ಆಯ್ಕೆಗೊಂಡು ಈತ ಸಚಿವ ಸ್ಥಾನವನ್ನು ಅಲಂಕರಿಸಿದರೂ ಕ್ಷೇತ್ರಕ್ಕೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ, ಬದಲಾಗಿ ಅವನ ತಿಜೋರಿ ಮಾತ್ರ ಭರ್ತಿಯಾಗುತ್ತಾ ಹೋಯಿತು. ಸಂಜಯ ಸಹಕಾರಿ ನೂಲಿನ ಗಿರಣಿ ಸ್ಥಾಪನೆ ಮಾಡುತ್ತೇನೆಂದು ರೈತರಿಂದ ಹಣ ಎತ್ತಿದನೇ ಹೊರತು ಗಿರಣಿ ಮಾತ್ರ ಎಂದೂ ಮೇಲೇಳಲೇ ಇಲ್ಲ, ರಾಣೆಬೆನ್ನೂರ ಹತ್ತಿರ ಇದರ ಹೆಸರಿನಲ್ಲಿ ಒಂದಿಷ್ಟು ಭೂಮಿಯನ್ನು ಖರೀದಿಸಿದ್ದೇ ದೊಡ್ಡ ಘನಕಾರ್ಯವಾಯಿತೇ ಹೊರತು ಅಲ್ಲಿ ಗಿರಣಿಯಂತೂ ಬರಲಿಲ್ಲ, ಅಲ್ಲದೇ ಸರ್ಕಾರಿ ಸ್ವಾಮ್ಯದಲ್ಲಿದ್ದ ಅತ್ಯಂತ ಸಂಕಷ್ಟದಲ್ಲಿದ್ದ ಹುಬ್ಬಳ್ಳಿಯ ಮಹಾದೇವ ಜವಳಿ ಗಿರಣಿಯನ್ನೇ ಲಪಟಾಯಿಸಲು ಮಾಡಬಾರದ ತಂತ್ರಗಳನ್ನೆಲ್ಲಾ ಮಾಡಿದ. ಅಂದು ಕಾರ್ಮಿಕರು ತೋರಿದ ದಿಟ್ಟ ಪ್ರತಿರೋಧದಿಂದ ಸಿದ್ದನಗೌಡ್ರನ ತಂತ್ರ ಮುಂದಿಯೂರಿ ಮಲಗಿತು; ಕೋಟ್ಯಂತರ ರೂಪಾಯಿ ಬೆಲೆಬಾಳುವ ಕಾರ್ಖಾನೆಯ ಜಮೀನು, ಯಂತ್ರೋಪಕರಣಗಳು ಲೂಟಿಯಾಗುವುದು ತಪ್ಪಿತು. ಇದನ್ನೆಲ್ಲಾ ಕಣ್ಣಾರೆ ಕಂಡಿರುವ ಅಲ್ಲಿನ ಜನ ಅವನನ್ನು ಮನೆಗೆ ಕಳಿಸಿ ಅವನ ಸೋದರ ಸಂಬಂಧಿ ಬಜೆಪಿಯ ಚಿಕ್ಕನಗೌಡ್ರನ ಕಡೆ ಮುಖ ಮಾಡಿದ್ದರು.

ಬಂದೂಕು ಬಾಬುನ ಸ್ಪರ್ಧೆಯೂ ಚಿಕ್ಕನಗೌಡ್ರನ ಪರ ಕೆಲಸ ಮಾಡಿತ್ತು. ಈ ಎಲ್ಲ ಕಾರಣಗಳಿಂದ ಆತ ಗೆದ್ದು ಶಾಸಕ ಗದ್ದುಗೆಗೇರಿದ. ಆದರೆ, ಕ್ಷೇತ್ರದ ಜನರ ಪಾಲಿಗೆ ಅದು ಊದೋದು ಕೊಟ್ಟು ಬಾರಿಸೋದು ತಗೊಂಡಂಗೆ ಆಯಿತಷ್ಟೆ. ಶಾಸಕ, ಪಕ್ಷ ಬದಲಾದವೇ ಹೊರತು ಲೂಟ ಮಾತ್ರ ಬದಲಾಗಲಿಲ್ಲ. ಎಂದಿನಂತೆ ಅದು ಮುಂದುವರೆದೇ ಇತ್ತು.


ಕಲಘಟಗಿ

1983ರಲ್ಲಿ ಕಾಂಗ್ರೆಸ್‌ನ ಜಿ.ಪಿ. ಪಾಟೀಲರು ಶಾಸಕರಾಗಿ ಆಯ್ಕೆಯಾಗಿದ್ದು ಬಿಟ್ಟರೆ ಇಲ್ಲಿಯ ತನಕ ಕಾಂಗ್ರೆಸ್ ತನ್ನ ಖಾತೆಯನ್ನು ಮರಳಿ ತೆಗೆದಿಲ್ಲ. ಹಾಗಾಗಿ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಕುಂಭಕರ್ಣ ನಿದ್ರೆಯಲ್ಲಿರುವುದರಿಂದ ಪೈಪೋಟಿ ಏನಿದ್ದರೂ ಜೆಡಿಎಸ್ ಮತ್ತು ಬಿಜೆಪಿ ನಡುವೆಯೇ ಇದೆ.

ಚಿಕ್ಕನಗೌಡ್ರ ಶಾಸಕನಾಗಿ ಕಲಘಟಗಿಯಲ್ಲಿ ಓಡಾಡಿದ್ದಕ್ಕಿಂತಲೂ ಹುಬ್ಬಳ್ಳಿಯ ಬೀದಿಗಳಲ್ಲಿ ತಿರುಗಾಡಿದ್ದೇ ಜಾಸ್ತಿ, ಜಂಗು ಹಿಡಿದಿರುವ ಒಂದು ಸರ್ಕಾರಿ ಕಾಲೇಜನ್ನು ಸರಿಪಡಿಸುವ ಗೋಜಿಗೆ ಶಾಸಕರಂತೂ ಹೋಗಿಲ್ಲ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಇಲ್ಲಿನ ವಿದ್ಯಾರ್ಥಿಗಳು ಹಳಿಯಾಳಕ್ಕೋ ಅಥವ ಹುಬ್ಬಳ್ಳಿಗೋ ಹೋಗಬೇಕಾದ ಪರಿಸ್ಥಿತಿಯಿದೆ. ಒಂದು ಸರ್ಕಾರಿ ಆಸ್ಪತ್ರೆಯಿದ್ದರೂ ಅಲ್ಲಿಗೆ ಚೆನ್ನಾಗಿದ್ದವರು ಹೋದರೂ ರೋಗಿಗಳಾಗಿ ಹೊರಬರುತ್ತಾರೆ. ಮಳೆಗಾಲದಲ್ಲಿ ರಸ್ತೆಗಳನ್ನು ಕೊಚ್ಚೆಗುಂಡಿಗಳ ಮಧ್ಯೆ ಹುಡುಕಬೇಕಾದ ಪರಿಸ್ಥಿತಿ. ಆದರೆ ಇದ್ಯಾವುದೂ ಶಾಸಕರ ಕಣ್ಣಿಗೆ ಕಾಣುವುದಿಲ್ಲ. ಕ್ಷೇತ್ರದ ನೀರಾವರಿ ಯೋಜನೆಯಾದ 'ಬಾಂದಾರ ನಾಲಾ ಯೋಜನೆ'ಯನ್ನೇ ಜಾರಿ ಮಾಡುತ್ತೇವೆ ಎಂದು ಈತನಕ ಹೇಳಿಕೊಂಡು ಕಾಲ ಕಳೆಯುತ್ತಿದ್ದಾರೆಯೇ ವಿನಃ ಅದನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನ ಮಾಡಿಲ್ಲ. ಇಂತಹುದೇ ಇನ್ನೊಂದು ಯೋಜನೆಯಾದ 'ಸಂಗಮೇಶ್ವರ ನಾಲಾ ಯೋಜನೆ' ಯಂತೂ ಕೆಲಸ ಪ್ರಾರಂಭವಾಗದೆಯೇ ನೆನೆಗುದಿಗೆ ಬಿದ್ದಿದೆ. ಇದ್ಯಾವುದರ ಬಗ್ಗೆಯೂ ಸಿದ್ದನಗೌಡ್ರಾಗಲೀ, ಚಿಕ್ಕನಗೌಡ್ರಾಗಲೀ ಎಂದೂ ಮಾತನಾಡುವುದಿಲ್ಲ.

ಚಿಕ್ಕನಗೌಡ್ರು ಶಾಸಕನಾಗಿ ಕ್ಷೇತ್ರವನ್ನು ಉದ್ಧಾರ ಮಾಡಿದ್ದಕ್ಕಿಂತಲೂ ಆದರಗುಂಜಿಯ ತಮ್ಮ ಕಲ್ಲು ಗಣಿ ಉದ್ದಿಮೆಯನ್ನು ಬೆಳೆಸಿದ್ದೇ ಜಾಸ್ತಿ. ಅಲ್ಲದೇ, ಸರ್ಕಾರದಿಂದ ಬರುವ ಎಲ್ಲಾ ಕಾಮಗಾರಿ ಯೋಜನೆಗಳಲ್ಲಿ ತಮ್ಮ ನೆಚ್ಚಿನ ಭಂಟರಾದ ಕಲಘಟಗಿಯ ಪಿಡಬ್ಲ್ಯೂಡಿ ಇಂಜಿನಿಯರ್ ಎ.ಜಿ. ಕೆಂಚರೆಡ್ಡಿ, ಕೆಇಬಿಯ ಯಳಸಂಗಿ, ಜಿಲ್ಲಾ ಪರಿಷತ್‌ನ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್ ಪಾಟೀಲರಿಂದ ಬರೊಬ್ಬರಿ 20 ಪರ್ಸೆಂಟೇಜ್ ಕಮೀಶನ್ನು ವಸೂಲಿ ಮಾಡುತ್ತಾರೆ. ಈ ವಸೂಲಿ ಕಾರ್ಯವನ್ನು ಸುಗಮವಾಗಿ ನಡೆಸಿಕೊಂಡು ಹೋಗುವುದಕ್ಕೆ ತಮ್ಮ ಅಳಿಯ ಜಿಲ್ಲಾ ಪಂಚಾಯತ್ ಸದಸ್ಯ ಗದಿಗೆಪ್ಪ ಕಳ್ಳಿಮನಿಯನ್ನು ನೇಮಿಸಿದ್ದಾರೆ. ಈ ಕಮೀಷನ್ ಕಮಾಯಿಯ ಕಾರಣದಿಂದಲೇ ಇವರ ಅವಧಿಯಲ್ಲಿ ನಿರ್ಮಾಣವಾಗಿರುವ ಸಮುದಾಯ ಭವನಗಳು, ಆಸ್ಪತ್ರೆ, ರಸ್ತೆಗಳು ಯಾವುದೋ ಪುರಾತನ ಕಾಲದ ಸ್ಮಾರಕಗಳಂತೆ ಕಾಣುತ್ತವೆ. ಹಾದಿಬೀದಿಯಲ್ಲಿ ಜನ ಶಾಸಕನಿಗೆ ಉಗಿದುಕೊಂಡು ಓಡಾಡುತ್ತಿರುವುದು ಚಿಕ್ಕನಗೌಡ್ರ ಕಿವಿಗೆ ಬಿದ್ದಿಲ್ಲವೆಂದೇನಲ್ಲ. ಹಾಗಾಗಿಯೇ, ಮುಂದಿನ ಚುನಾವಣೆಯಲ್ಲಿ ತಾನು ಮತ್ತೊಮ್ಮೆ ಈ ಕ್ಷೇತ್ರದಿಂದ ಗೆಲ್ಲುವುದು ಕಷ್ಟ ಎಂಬ ಅನುಮಾನ ಅವರಿಗೂ ಪ್ರಾರಂಭವಾಗಿಬಿಟ್ಟದೆ. ಆದ್ದರಿಂದಲೇ, ಮುಂದಿನ ಚುನಾವಣೆಯಲ್ಲಿ ಕ್ಷೇತ್ರವನ್ನು ಬದಲಾಯಿಸುವ ಯೋಚನೆಯನ್ನೂ ಅವರು ಮಾಡುತ್ತಿದ್ದಾರೆ; ಕಲಘಟಗಿಯನ್ನು ತೊರೆದು ಕುಂದಗೋಳಕ್ಕೆ ವಕ್ಕರಿಸುವ ಪೂರ್ಣ ತಯಾರಿಯನ್ನವರು ನಡೆಸಿದ್ದಾರೆ. ಯಾವುದಕ್ಕೂ ಕುಂದಗೋಳದ ಜನ ಒಂದಿಷ್ಟು ಹುಶಾರಾಗಿರುವುದು ಒಳ್ಳೆಯದು.

ಈ ನಡುವೆ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತೆ ತಳವೂರಲು ಪ್ರಯತ್ನ ನಡೆಸುತ್ತಿದೆ. ಯುವ ಕಾಂಗ್ರೆಸ್ ಕಾರ್ಯದರ್ಶಿಯಾಗಿರುವ ನಾಗರಾಜ ಛಬ್ಬಿಯನ್ನು ಕಣಕ್ಕಿಳಿಸುವ ತಯಾರಿಯನ್ನೂ ಅದು ನಡೆಸಿದೆ. ಈಗ ಈತನೇ ಕಾಂಗ್ರೆಸ್ ಅಭ್ಯರ್ಥಿ ಎಂದು ಬಿಂಬಿಸಲಾಗುತ್ತಿದೆಯಾದರೂ ಪಕ್ಷದೊಳಗೇ ಪ್ರಕಾಶ್ ಉಳ್ಳಾಗಡ್ಡಿ ಮಠನನ್ನು ಕಣಕ್ಕಿಳಿಸುವ ಪ್ರಯತ್ನದಲ್ಲಿ ಇನ್ನೊಂದು ಗುಂಪೂ ಇದೆ. ಜೊತೆಗೆ ಯುವ ಕಾಂಗ್ರೆಸ್‌ನ ಶ್ರೀನಿವಾಸ್ ಮಾನೆ, ಜಿಲ್ಲಾ ಪರಿಷತ್ ಸದಸ್ಯ ಶಾಣಪ್ಪಗೋಳ ಕೂಡ ತಾವೇನು ಕಡಿಮೆ ಎಂದು ತೋಳೇರಿಸುತ್ತಿದ್ದಾರೆ. ಆದರೆ ಕಾಂಗ್ರೆಸ್ ನಾಯಕರ ಆಶೀರ್ವಾದ ಮಾತ್ರ ಛಬ್ಬಿಯ ಕಡೆಗೇ ಇರುವಂತಿದೆ. 2003ರಲ್ಲಿ ಈತನ ನೇತೃತ್ವದಲ್ಲಿ ಕಲಘಟಗಿಯಲ್ಲಿ ಬೃಹತ್ ಏಕತಾ ಸಮಾವೇಶ ನಡೆದಾಗ ಕೇಂದ್ರ ಸಚಿವರ ದಂಡೇ ದೌಡಾಯಿಸಿತ್ತು, ಅಶೋಕ್ ಗೇಲಾಟ್, ಡಾ. ಸಂಜಯ್ ಸಿಂಗ್, ಅಂದಿನ ಮುಖ್ಯಮಂತ್ರಿ ಧರಂಸಿಂಗ್ ಆದಿಯಾಗಿ ಎಲ್ಲರೂ ಬಂದು ಕಾಂಗ್ರೆಸ್‌ನ್ನು ತಳವೂರಿಸಲು ಪ್ರಯತ್ನ ನಡೆಸಿದ್ದರು. ಈಗಲೂ ಕೂಡ ಛಬ್ಬಿಗೆ ಆಸ್ಕರ್ ಫರ್ನಾಂಡಿಸ್, ಅಹ್ಮದ್ ಪಟೇಲ್, ಧರಂಸಿಂಗ್, ಅಶೋಕ್ ಗೆಲ್ಲಾಟ್ ಮುಂತಾದವರ ಬೆಂಬಲವಿದೆ.


ಪಿ.ಸಿ. ಸಿದ್ದನಗೌಡ್ರ

ಜೆಡಿಎಸ್‌ನಿಂದ ಮಾಜಿ ಸಚಿವ ಸಿದ್ದನಗೌಡ್ರ, ರೈತ ಧುರೀಣ ಕೇಶವ ಯಾದವ್ ಪೈಪೋಟಿಗಿಳಿದಿದ್ದಾರೆ. ಬಿಜೆಪಿಯಿಂದ ಚಿಕ್ಕನಗೌಡ್ರ ಮತ್ತು ಸಿ.ಎಂ. ನಿಂಬಣ್ಣನವರ ಟಿಕೆಟ್ ಕೇಳುತ್ತಿದ್ದಾರೆ. ಇವರಿಗೆಲ್ಲ ತೊಡರುಗಾಲು ಹಾಕಲು ಈ ಮೊದಲು ಜನತಾ ಪಕ್ಷದಲ್ಲಿದ್ದ ಬಾಬುಸಾಬ್ ಕಾಸೀಮನವರ ಬಿಎಸ್‌ಪಿ ಸೇರಿಕೊಂಡಿದ್ದಾರೆ. ಜೊತೆಗೆ ಸಮಾಜವಾದಿ ಪಕ್ಷದಿಂದ ಪಿ... ಪಾಟೀಲ್ ಕಣಕ್ಕಿಳಿಯಲು ತಯಾರಿ ನಡೆಸಿದ್ದಾರೆ.


ಸಿ.ಎಂ. ನಿಂಬಣ್ಣನವರ


ನಾಗರಾಜ ಛಬ್ಬಿ

ಕಾಂಗ್ರೆಸ್ ಯಾವಾಗಲೂ ತನ್ನ ಒಳಜಗಳಗಳ ಕಾರಣದಿಂದಾಗಿಯೇ ಮಣ್ಣು ಮುಕ್ಕುತ್ತಿರುವುದು ಅದರ ಜಾಯಮಾನ. ಈ ಬಾರಿಯಾದರೂ ಅದು ತನ್ನ ಒಳಜಗಳವನ್ನು ಪರಿಹರಿಸಿಕೊಂಡು ಒಂದಿಷ್ಟು ಚಾಣಾಕ್ಷತನದಿಂದ ವರ್ತಿಸಿ, ಸಮರ್ಥರಿಗೆ ಟಿಕೆಟ್ ನೀಡಿ, ಈ ಬಾರಿ ಬಾಬುಸಾಬ್ ಕಾಸೀಮ್ ನೀಡುವ ಹೊಡೆತವನ್ನು ಚಾಣಾಕ್ಷತನದಿಂದ ತಪ್ಪಿಸಿಕೊಂಡರೆ ಕಲಘಟಗಿ ಕಾಂಗ್ರೆಸ್ ಪಾಲಾದರೂ ಆಶ್ಚರ್ಯವಿಲ್ಲ. ಹಾಗೇನಾದರೂ ಆದರೆ ಗದ್ದಿಗೌಡ್ರ ಮತ್ತು ಚಿಕ್ಕನಗೌಡ್ರ ಇಬ್ಬರಿಂದಲೂ ಬೇಸತ್ತಿರುವ ಜನರಿಗೆ ಒಂದಿಷ್ಟು ಉಸಿರಾಡುವ ಅವಕಾಶವಾದರೂ ದೊರೆತೀತು.

– ವರದಿಗಾ


ಮುಂಡರಗಿ

ಮುಂಡರಗಿಗೆ ಎಸ್.ಎಸ್. ಪಾಟೀಲ್ ಎಂಬ ...ನ್ಸರ್ ಶಾಶ್ವತವಾಗಿ ಅಂಟಿಕೊಂಡುಬಿಟ್ಟಿದೆ. ...ಕ್ಷೇತ್ರದ ಜನರನ್ನು, ಮೂರು ಪಕ್ಷಗಳನ್ನು ಮೂರು ...ಬಾರಿ ಯಾಮಾರಿಸಿ ಹ್ಯಾಟ್ರಿಕ್ ಎಮ್ಮೆಲ್ಲೆಯಾಗಿರುವ ...ಈತ ತನಗೆ ಟಿಕೆಟ್ ಕೊಟ್ಟ ಪಕ್ಷಕ್ಕೂ ...ನಿಷ್ಠನಾಗುಳಿಯಲಿಲ್ಲ, ಮತ ಕೊಟ್ಟ ಜನರಿಗೂ ನಿಷ್ಠೆ ...ತೋರಲಿಲ್ಲ.

ಗದಗ ಜಿಲ್ಲೆಯಲ್ಲಿಯೇ ಅತ್ಯಂತ ...ಸಂಪದ್ಭರಿತವಾದ ನಾಡು ಮುಂಡರಗಿ. ಆದರೆ, ಎಸ್.ಎಸ್. ಪಾಟೀಲನ ...ದಗಲ್ಬಾಜಿ ದಂಧೆಯಿಂದಾಗಿ ...ಗಣಿ ಲೂಟಿಕೋರರಿಂದ ...ನಾಡು ಹಗಲೇ ...ದರೋಡೆಗೊಳಗಾಗುತ್ತಿದೆ. ಸಾವಿರಾರು ವಿಧದ ...ಆಯುರ್ವೇದ ವನಸ್ಪತಿಯ ಆಗರವಾಗಿರುವ ಇಲ್ಲಿನ 'ಕಪ್ಪತಗುಡ್ಡ' ವಿಂಡ್‌ಪವರ್ ಕುಳಗಳಾದ ...ಎನ್ಕಾರ್ನ್, ಸುಜಲಾನ್ ಕಂಪೆನಿಗಳ ಖಾಸಗೀ ...ಆಸ್ತಿಯಾಗುತ್ತಿದೆ. ಬಳ್ಳಾರಿ ಗಣಿ ಲೂಟಿಕೋರರ ...ಮಣ್ಣು ಮಾರುವ ದಂಧೆಗೆ ಕಪ್ಪತಗುಡ್ಡದ ...ಒಡಲನ್ನು ಬಗೆಯಲಾಗುತ್ತಿದೆ. ಈ ಎಲ್ಲಾ ...ಲೂಟಿಯನ್ನು ಸುಸೂತ್ರವಾಗಿ ನಡೆಸಿಕೊಂಡು ...ಹೋಗುವುದಕ್ಕಾಗಿಯೇ ಎಸ್.ಎಸ್. ಪಾಟೀಲ್ ತನ್ನ ...ಮಗ ಶಿವಕುಮಾರ್‌ಗೌಡನನ್ನು ಸೆಕ್ಯೂರಿಟಿಯಾಗಿ ...ನೇಮಿಸಿದ್ದಾನೆ. ತನ್ನ ಏಜೆಂಟರಿಗೆ ...ಅನುಕೂಲವಾಗಲೆಂದು ಸಿಂಗಟಾಲೂರು ಏತ ...ನೀರಾವರಿ ಯೋಜನೆಯ ವ್ಯಾಪ್ತಿಯ ಜನ ತಮ್ಮ ...ನೆಲವನ್ನು ಪುಟಗೋಸಿ ದುಡ್ಡಿಗೆ ಮಾರಿಕೊಳ್ಳುವಂತೆ ...ಮಾಡಿಟ್ಟಿದ್ದಾನೆ.

ಮುಂಡರಗಿ ತಹಶೀಲ್ದಾರ ಕಚೇರಿಯ ಮುಂದೆ ಎರಡನೇ ಹಂತದ ನಾಯಕತ್ವ ಬೆಳೆಯದಂತೆ ಎಚ್ಚರ ವಹಿಸಿ ತನ್ನ ವಿರುದ್ಧ ದನಿಯೇಳದಂತೆ ನೋಡಿಕೊಂಡ ಚಾಣಾಕ್ಷನೀತ. ಈತ ಗೆಲ್ಲಲು ಗಂಧತೇಯ್ದ ವಾಸಣ್ಣ ಕುರುಡಗಿಯಂಥವರಿಗೆ ಮೂರು ಕಾಸಿಗೂ ಬೆಲೆಯಿಲ್ಲದಂತೆ ಮೂಲೆ ಕಾಣಿಸಿ, ಸರಿಯಾಗಿ ತಮ್ಮ ಕುಂಡಿಯನ್ನೂ ತೊಳೆದುಕೊಳ್ಳಲು ಬಾರದ ನಾಲಾಯಕ್ ಜನರನ್ನು ನಾಯಕರೆಂಬಂತೆ ಬಿಂಬಿಸಿ ಜೆಡಿಎಸ್ ಪಕ್ಷ ಸತತವಾಗಿ ಆಂತರಿಕ ಕಚ್ಚಾಟದಲ್ಲಿಯೇ ತಿಕ್ಕಾಡುತ್ತಿರುವಂತೆ ನೋಡಿಕೊಂಡ. ಡಿ.ಕೆ.ಶಿವಕುಮಾರ್ ಗ್ಯಾಂಗಿನೊಂದಿಗೆ ಸೇರಿ ಗದಗ ಜಿಲ್ಲಾ ಕಾಂಗ್ರೆಸ್‌ನ್ನು ಶನಿಯಾಗಿ ಕಾಡುತ್ತಿರುವ ಪಾಟೀಲ್ ಕೇವಲ ಎಚ್ಕೆ ಪಾಟೀಲರನ್ನು ವಿರೋಧಿಸುವ ಕಾರಣಕ್ಕೆ ರೋಣದ ಮೂರೂ ನಿರುಪದ್ರವಿ ರೆಡ್ಡಿಗಳನ್ನು ಕಲೆಹಾಕಿಕೊಂಡು ಮಸಲತ್ತು ಮಾಡುತ್ತಿದ್ದಾನೆ.

ಸದಾ ಒಂದು ಮರದಿಂದ ಇನ್ನೊಂದು ಮರಕ್ಕೆ ಹಾರುತ್ತಲೇ ಇರುವ ಮಂಗನಂತೆ ಈತ ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಹಾರುತ್ತಲೇ ಇರುತ್ತಾನೆ. ಅಳಬುರುಕ ಯಡ್ಡಿಯಿಂದ ಸರ್ವಾಧಿಕಾರಿ ಕುಮಾರಸ್ವಾಮಿ ಸಿ.ಎಂ. ಸೀಟು ಕಿತ್ತುಕೊಂಡು ಬಿಸಾಡಿದಾಗ, ಚೆಡ್ಡಿಗಳೆಲ್ಲಾ ಇದು 'ಲಿಂಗಾಯತರಿಗಾದ ಅನ್ಯಾಯ' ಎಂದು ಹುಯಿಲೆಬ್ಬಿಸಿದಾಗ ಪಾಟೀಲನೂ ಲಿಂಗಾಯತರ ಬ್ಯಾನರ್ ಹಿಡಿದುಕೊಂಡು ನಿಂತಿದ್ದ. ಆದರೆ, ಇವನಿಗಿಂತಲೂ ಮುಂಚಿತವಾಗಿಯೇ ಅವಸರಗೇಡಿ ವಾಸಣ್ಣ ಕುರುಡಗಿ ಖಾಕಿ ಚೆಡ್ಡಿ ಹೊಲಿಯಲು ಆರ್ಡರ್ ಕೊಟ್ಟು




ಮುಂಡರಗಿಯನ್ನು ಮುಂಡಾಯಿಸಿದ ಎಸ್.ಎಸ್.ಪಾಟೀಲ್

...ಅಡ್ಡಾಡಿಕೊಂಡೇ ರಾಜಕಾರಣದ ಹೊಸ್ತಿಲು ...ಉಳಿದಿರುವ ಎಸ್.ಎಸ್. ಪಾಟೀಲ್ ಮುಂಡರಗಿ ...ನೆಲದಲ್ಲಿ ಮಾಡಿರುವ ಅವಾಂತರಗಳು ಒಂದೆರಡಲ್ಲ. ...ಡಿ.ಸಿ.ಸಿ ಬ್ಯಾಂಕಿಗೆ ತನ್ನ ನಾಲಾಯಕ್ ಮಗನನ್ನು ...ಅಧ್ಯಕ್ಷನನ್ನಾಗಿ ಮಾಡಿ ಇಡೀ ಬ್ಯಾಂಕನ್ನೇ ತಿಂದು ...ತೇಗಿದ್ದಾನೆ. ಮಗನ ಸಾರಥ್ಯದಲ್ಲಿ ...ಮುಂದುವರೆದಿರುವ ...ಮಟ್ಕಾ, ಇಸ್ಪೀಟುಗಳಂತಹ ...ಅಕ್ರಮ ದಂಧೆಗಳಿಗೆ ...ಲಂಗುಲಗಾಮು ...ಇಲ್ಲದಂತಾಗಿದೆ.

ಎಂ.ಪಿ. ಪ್ರಕಾಶರ ...ಬಾಲಂಗೋಚಿಯಾಗಿ ...ಲಿಂಗಾಯತ ಓಟ್ ...ಬ್ಯಾಂಕ್‌ನ್ನು ...ಆಧಾರವಾಗಿಟ್ಟುಕೊಂಡು ...ತಾಲ್ಲೂಕಿನಲ್ಲಿ ಹಿಡಿತ ...ಸಾಧಿಸಿರುವ ಎಸ್.ಎಸ್. ...ಪಾಟೀಲ್ ಶಾಸಕತ್ವದ ...ಅವಧಿಯಲ್ಲಿ ನಡೆದಿರುವ ...ದಲಿತರ ಶೋಷಣೆ ...ಅಷ್ಟಿಷ್ಟಲ್ಲ. ಕ್ಷುಲ್ಲಕ ...ಕಾರಣಕ್ಕೆ ...ಹುಡುಗಿಯೊಬ್ಬಳನ್ನು ...ಬೆತ್ತಲೆ ಮಾಡಿ ...ಅಟ್ಟಾಡಿಸಿದ ಮಹಾನ್ ಕೀರ್ತಿ ಪಾಟೀಲನ ತಲೆಯ ...ಮೇಲೆ ಸೇಹಾದುತ್ತಿದೆ. ದಲಿತರ ಮೇಲೆ ದಲಿತರನ್ನೇ ...ಎತ್ತಿಕಟ್ಟಿ 'ಹಳ್ಳಿ ಕೇರಿ'ಯನ್ನು ರಣರಂಗವನ್ನಾಗಿ ...ಮಾಡಿ. ದಲಿತರ ಹೆಣದ ಮುಂದೆ ಮೊಸಳೆ ...ಕಣ್ಣೀರು ಸುರಿಸಿ ನೊಂದವರ ಹಟ್ಟಿ ರಟ್ಟೆಗೆ ...ಸರದಂತೆ ನೋಡಿಕೊಂಡ ತಂತ್ರಗಾರನೀತ.

ರಾಜಕಾರಣದಲ್ಲಿ ಪಾಟೀಲನದು ಕೀಚಕ ...ಪಾತ್ರ. ಸಹಕಾರಿ ಮಂತ್ರಿಯಾಗಿದ್ದಾಗಲೂ ಜಿಲ್ಲೆಗೆ ... ಮಾಡಲಿಲ್ಲ. ಪಾಸ್ಸಿ ಪಕ್ಷಗಳ ... [illegible]



ಬಂದಿದ್ದರಿಂದ ಎಸ್.ಎಸ್. ಪಾಟೀಲನ ಎದೆಯ ಮೇಲೆ ಕಲ್ಲು ಹಾಕಿದಂತಾಗಿದೆ. ಕಾಂಗ್ರೆಸ್‌ನಲ್ಲಿದ್ದೂ ಪಾಟೀಲನ ಕಪಟತನದಿಂದ ನೆಲೆ ಕಳೆದುಕೊಂಡಿದ್ದ ವಾಸಣ್ಣ ಕುರುಡಗಿ ಬಿಜೆಪಿ ಎಂಬ ಹಿಟ್ಲರ್ ವಂಶಸ್ಥರ ತೆಕ್ಕೆಗೆ ಬೀಳುತ್ತಿರುವುದು ದುರಂತದ ಸಂಗತಿ.

ಕ್ಷೇತ್ರ ಪುನರ್‌ವಿಂಗಡನೆಯಾಗದೇ ಚುನಾವಣೆ ಎದುರಾದರೆ ಮುಂಡರಗಿಯ ಜನ ಎಸ್.ಎಸ್. ಪಾಟೀಲನ ಮುಂಡಾ ಮೋಚುವುದು ಗ್ಯಾರಂಟಿ. ಜೆಡಿಎಸ್‌ನಿಂದ ರವಿ ದಂಡಿನ್, ಬಿಜೆಪಿಯಿಂದ ವಾಸಣ್ಣ ಕುರುಡಗಿಗಳೆಂಬ ಕುರುಬ ಸಮುದಾಯದ ಕ್ಯಾಂಡಿಡೇಟ್‌ಗಳು ಅಖಾಡಕ್ಕಿಳಿಯಲು ಸಜ್ಜಾಗಿದ್ದಾರೆ. ಅದಕ್ಕೂ ಮುಂಚೆ ತಾಲ್ಲೂಕಿನ ಮೂವತ್ತೈದು ಸಾವಿರದಷ್ಟು ನಿರ್ಣಾಯಕ ಮತಗಳನ್ನು ಹೊಂದಿರುವ ಕುರುಬ ಜನಾಂಗ ಉಡುಪಿಯ ಕನಕ ಗೋಪುರವನ್ನು ಕೆಡವಿರುವ ಬಿಜೆಪಿಗಳೊಂದಿಗೆ ಕೈಜೋಡಿಸಿರುವ ವಾಸಣ್ಣ ಕುರುಡಗಿಯನ್ನು ಧಿಕ್ಕರಿಸಿದರೂ ಆಶ್ಚರ್ಯವಿಲ್ಲ. ಆಗ ಉಳಿಯುವುದು ಎರಡೇ ಆಯ್ಕೆ: ಒಂದು ಮತ್ತದೇ ಎಸ್.ಎಸ್. ಪಾಟೀಲ್ ಹಾಗೂ ರವಿ ದಂಡಿನ್. ಈಗಾಗಲೇ ಎಸ್.ಎಸ್.ಪಾಟೀಲ್ ತನ್ನ ದಗಲ್ಬಾಜಿ ದಂಧೆಗಳಿಂದಲೇ ತನ್ನ ವಿರೋಧಿ ಅಲೆಯನ್ನು ಬೆಳೆಸಿಕೊಂಡಿದ್ದಾನೆ. ರವಿ ದಂಡಿನ್ ಭ್ರಷ್ಟನಾದರೂ ತನ್ನನ್ನು ಗೆಲ್ಲಿಸಿದ ಜನರನ್ನು ಒದ್ದು ಹೊರಹಾಕುವಷ್ಟು ಕ್ರೂರಿಯಲ್ಲ. ಒಟ್ಟಿನಲ್ಲಿ ತ್ರಿಕೋನ ಸ್ಪರ್ಧೆ ಏರ್ಪಡುವುದಂತೂ ಸ್ಪಷ್ಟ.

- ಹುರುಳಿಕುಪ್ಪಿ ವಿನಯ್


ಅಫಜಲಪುರ

ಕಲಬುರ್ಗಿ ಜಿಲ್ಲೆಯ ಕೆಲವು ಮತಕ್ಷೇತ್ರಗಳಲ್ಲಿ ಚುನಾವಣೆಗಳು ಹತ್ತಿರ ಬರುತ್ತಿರುವಂತೆ ಅಲ್ಲಿಯ ಸಾಮಾನ್ಯ ನಾಗರಿಕ ತತ್ತರಗೊಂಡು ಬಿಡುತ್ತಾನೆ. 'ಯಾಕಾದರೂ ಚುನಾವಣೆಗಳು ಬಂದವೋ ಮಾರಾಯಾ!' ಎಂದು ನಿಡುಸುಯ್ಯುತ್ತಾನೆ. ಯಾಕೆಂದರೆ ಇಲ್ಲಿ ಚುನಾವಣೆಗಳೆಂದರೆ ಭಾರತ-ಪಾಕಿಸ್ತಾನದ ನಡುವಣ ಕದನವಿದ್ದಂತೆ. ಚುನಾವಣೆಗಳು ಮುಗಿದುಹೋಗುವ ವೇಳೆಗೆ ಯಾರದಾದರೂ ಕೈಯೋ-ಕಾಲೋ-ತಲೆಯೋ ಕತ್ತರಿಸಿ ಹೋಗಿರುತ್ತದೆ. ಅಥವಾ ಹೊಡೆದಾಟ ಬಡಿದಾಟಗಳಲ್ಲಿ ತಲೆಪೆಟ್ಟುಗಳು ಬಿದ್ದು ರಸ್ತೆಗಳೆಲ್ಲ ರಕ್ತಸಿಕ್ತವಾಗಿ ಹೋಗಿರುತ್ತವೆ. ಒಟ್ಟಾರೆ ಮತದಾರ ಉಸಿರು ಬಿಗಿ ಹಿಡಿದು ಚುನಾವಣೆ ಎದುರಿಸುವ ಕ್ಷೇತ್ರಗಳಲ್ಲಿ ಅಫಜಲ್ಪುರವೂ ಒಂದು.


ಇಂಥ ಕುಖ್ಯಾತಿಯ ಅಫಜಲಪುರಕ್ಕೆ ಕಳೆದ ಚುನಾವಣೆಯಲ್ಲಿ ಗೆದ್ದು ಬಂದಿದ್ದ ಚೂಪುಟೋಪಿಯ ರಾಜಕಾರಣಿ ಎಂ.ವೈ.ಪಾಟೀಲ ಸಭ್ಯನೇನೋ ಖರೆ. ಆದರೆ ಬರೀ ಸಭ್ಯ ಎಂಬ ಟ್ರಂಪ್ ಕಾರ್ಡನ್ನೆ ಎಷ್ಟು ವರ್ಷಗಳ ಕಾಲ ಬಳಸಲು ಬರುತ್ತದೆ. ತಮ್ಮ ಅವಧಿಯ ಉದ್ದಕ್ಕು ಪಾಟೀಲರು ಮಾಡಿದ ಕೆಲಸವೆಂದರೆ ಮುಕ್ಕುವುದು ಮಾತ್ರ. ಈ ಕೆಲಸ ನೇರವಾಗಿ ತಾವೆ ಮಾಡಿದರೆ ಬದನಾಮಿ ಖಂಡಿತ ಎಂಬುದನ್ನು ಪಾಟೀಲರು ಅರಿಯದವರೇನಲ್ಲ, ಹಾಗಾಗಿಯೆ ತಮ್ಮ ಸುಪುತ್ರ ಅರುಣ ಪಾಟೀಲನನ್ನು ನೇಮಿಸಿದ್ದು ಎಲ್ಲರಿಗೂ ಗೊತ್ತಿರುವ ಬಹಿರಂಗ ಸತ್ಯ. ಪಾಟೀಲರು ಗಬರಿಕೊಳ್ಳುವ ಹಸಿವಿನಿಂದ ಎಷ್ಟು ಕಂಗಾಲಾಗಿದ್ದರೆಂದರೆ ರಸ್ತೆಗಳ ಜೆಲ್ಲಿ ಕಲ್ಲು, ಡಾಂಬರು, ಪುರಸಭೆಯ ನಾಲೆ, ನೀರು, ಗಟಾರ, ಲೈಟು ಮುಂತಾದವುಗಳ್ಯಾವು ಸಾಲಲಿಲ್ಲ. ತಮ್ಮ ಸುತ್ತ ಮುತ್ತ ತಮ್ಮಷ್ಟೆ ಕಂಗಾಲಾದ, ಹೊಟ್ಟೆ ಹೊಟ್ಟೆ ಹೊಡಕೊಳ್ಳುವ ಜನಗಳೂ ಇದ್ದಾರೆ ಎಂಬ ಖ್ಯಾಲು ಕೂಡ ಪಾಟೀಲರಿಗೆ ಇರಲಿಲ್ಲ. ಹೀಗಾಗಿ ಕಳೆದ ಸಲದ ಚುನಾವಣೆಯಲ್ಲಿ ಪಾಟೀಲರ ಪರವಾಗಿ ಓಡಾಡಿ ಹೈರಾಣಾಗಿದ್ದ ಜನ ಈ ಸಲ ಸೆಟಗೊಂಡಿದ್ದಾರೆ.

ಯಾಕಾದರೂ ಚುನಾವಣೆಗಳು ಬಂದವ್ರೋ?!

"ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತ್ತೆನ್ನ ಬಾಳುವೆ" ಎಂಬಂತೆ ರಾಜಕೀಯ ರುಚಿ ಕಂಡ ಮಾಲೀಕಯ್ಯ ಗುತ್ತೇದಾರನ ನಾಲಿಗೆ ಅಧಿಕಾರದ ರುಚಿ ಸವಿಯಲು ಸನ್ನದ್ಧವಾಗಿಯೆ ನಿಂತಿದೆ. 'ಸುಪಾರಿ ಕೊಲೆಗಳ ಸರದಾರ', 'ಹೆಂಡದ ದೊರೆ', 'ಚಾಕೂ-ಚೂರಿ ಸಂಸ್ಕೃತಿಗಳ ಹರಿಕಾರ' ಎಂಬ ಮುಂತಾದ ಬಿರುದಾವಳಿಗಳನ್ನು ಹೊಂದಿರುವ ಮಾಲೀಕಯ್ಯ ಇತ್ತೀಚಿಗೆ ಕೊಂಚ ಮಾಗಿದಂತೆ ಕಂಡುಬರುತ್ತಿದ್ದಾನೆ. ಸಾಮಾನ್ಯ ಜನರನ್ನು ತನ್ನ ಹತ್ತಿರಕ್ಕೂ ಬಿಟ್ಟುಕೊಳ್ಳದಿದ್ದ ಈತ ಇಂದು ಅವರ ಹತ್ತಿರಕ್ಕೆ ಹೋಗಲು ಹಾತೊರೆಯುತ್ತಿದ್ದಾನೆ. ಈ ನಡವಳಿಕೆ ಮತ್ತೆ ಗೆದ್ದು ಬರುವವರೆಗೋ, ಹೇಗೋ? ಎಂದು ಕೆಲವರು ಈಗಲೂ ಆತಂಕ ಪಡುತ್ತಿದ್ದಾರೆ. ಆದರೆ ಮಾಲೀಕಯ್ಯ ಮಾತ್ರ ಇದು ತನ್ನದು ಖಾಯಂ ನಡವಳಿಕೆ ಎಂದು ತೋರಿಸಿಕೊಳ್ಳಲು ಹೆಣಗಾಡುತ್ತಿದ್ದಾನಾದರೂ ಜನರಿಗೆ ಇನ್ನೂ 'ಭೀತಿ' ಇರುವುದು ಸುಳ್ಳಲ್ಲ. ಹಿಂದೊಮ್ಮೆ ಈತ ನಡೆದಾಡುತ್ತಿದ್ದರೆ ಹರಿವ ಹಾವೂ ನಿಂತಲ್ಲೇ ನಿಂತು ಬಿಡುತ್ತಿತ್ತು. ದಂಗಾಪುರ ಬಸವರಾಜ ಕೊಲೆಯ ಪ್ರಕರಣದಲ್ಲಿ 'ಸಸ್ಪೆಕ್ಟೆಡ್ ಕೊಲೆಗಾರ' ಎಂದು ನ್ಯಾಯಾಲಯವೆ ತೀರ್ಪು ನೀಡಿತ್ತು. ಇದಲ್ಲದೆ ಸುಮಾರು 'ಇಪ್ಪತ್ತೆರಡು ಕೊಲೆಗಳ ಪ್ರೇರಕ' ಎಂಬ ಬಿರುದಾಂಕಿತವನ್ನೂ ಹೊಂದಿದ್ದ. ಚುನಾವಣೆಗಳು ಶುರುವಾಗುತ್ತವೆಂದರೆ ಇಡೀ ಮತಕ್ಷೇತ್ರದ ತುಂಬ ಸಾರಾಯಿ, ಹೆಂಡದ ಹೊಳೆ ಹರಿದಾಡುತ್ತಿತ್ತು. ಅದರ ವಾಸನೆಯಿಂದ ಇಲ್ಲಿಯ ಜನ ತಮ್ಮ ಪ್ರಜ್ಞೆಯನ್ನೇ ಕಳಕೊಂಡು ಬಿಡುತ್ತಿದ್ದರು. ಒಂದರ್ಥದಲ್ಲಿ ತಮ್ಮ ಸಂವೇದನೆಯನ್ನು ಕಳಕೊಂಡು ಕೊರಡಾಗುತ್ತಿದ್ದ ಸಂಗತಿ ಎಲ್ಲರೂ ಬಲ್ಲರು. ಸ್ಟೇಷನ್ ಗಾಣಗಾಪುರದಂತಹ ಮುಖ್ಯ ಪಟ್ಟಣ ಪ್ರದೇಶದಲ್ಲಿ ಪೋಲಿಂಗ್ ಏಜೆಂಟರೆ ಇರುತ್ತಿರಲಿಲ್ಲ ಎಂಬುದು ವಾಸ್ತವ ಸತ್ಯ.



ಮಾಲೀಕಯ್ಯ ಗುತ್ತೇದಾರ್



ಎಂ.ವೈ. ಪಾಟೀಲ

ಕೆಲವು ವರ್ಷಗಳ ಕಾಲ ಗುತ್ತೇದಾರರ ವಿರುದ್ಧ ಸೆಡ್ಡು ಹೊಡೆದು ನಿಂತಿದ್ದ ವಿಠ್ಠಲ ಹೇರೂರ ಎಂಬ ಅಂಬಿಗರ ಚೌಡಯ್ಯನ ಸಮಾಜಕ್ಕೆ ಸೇರಿದ ಯುವ ನಾಯಕ ಇನ್ನೇನು ಕಾಲನ ತುಳಿತಕ್ಕೆ ಒಳಗಾಗುತ್ತಾನೆ ಎಂಬಲ್ಲಿಗೆ ಅದು ಹೇಗೋ ಬಚಾವಾದ. ಸಭ್ಯ ನಡವಳಿಕೆಯ, ಯಾರಿಗೂ ಕೇಡು ಬಗೆಯದ, ಗುತ್ತೇದಾರನ ವಿರುದ್ಧ ಸೋತು ಸುಣ್ಣವಾಗುವ ಹಂತಕ್ಕೆ ತಲುಪಿದ್ದ ಎಂ.ವೈ.ಪಾಟೀಲನ ಬಗೆಗೆ ಇದ್ದ ಕನಿಕರ ಮತಗಳಾಗಿ ಮಾರ್ಪಟ್ಟಿದ್ದರಿಂದ ಪಾಟೀಲ ಗೆದ್ದು ಬಂದಿದ್ದ. ಆದರೆ ಅದನ್ನು ಉಳಿಸಿಕೊಳ್ಳುವಲ್ಲಿ ಪಾಟೀಲ ವಿಫಲವಾಗಿದ್ದಾನೆಂದು ಮತಕ್ಷೇತ್ರದ ಅನೇಕರು ಅಭಿಪ್ರಾಯಪಡುತ್ತಿದ್ದಾರೆ.


ಇದನ್ನು ಗಮನಿಸಿದ, ಹಿಂದೊಮ್ಮೆ ರಾಜಕೀಯ (ರಕ್ತದ) ರುಚಿಕಂಡ ಹಳೆಯ ಹುಲಿ ಮಾಲೀಕಯ್ಯ ತನ್ನ ಹಲ್ಲು ಮಸೆಯುತ್ತ ಆಗಲೇ ಸಿದ್ಧವಾಗಿ ನಿಂತಿದ್ದಾನೆ. ಹೆಂಡದ ಬಲ ಹಾಗೂ ಹಣ ಬಲ ಎರಡನ್ನೂ ಹೊಂದಿರುವ ಗುತ್ತೇದಾರ ತಾನು ಯಾವುದಕ್ಕೂ ಹಣಿಯುವ ಆಸಾಮಿ ಅಲ್ಲ ಎಂಬುದನ್ನು ಈ ಸಲ 'ಪ್ರೂವ್' ಮಾಡಿಯೇ ತೋರಿಸಬೇಕೆಂದು ಹವಣಿಸಿದ್ದಾನೆ. ಇನ್ನೊಂದು ಕಡೆಯಿಂದ ವಿಠ್ಠಲ ಹೇರೂರು ಎಂಬ ಪಾಟೀಲ ಗುಂಪಿನ ಅತೃಪ್ತ ಇಬ್ಬರನ್ನೂ ಹಿಂದಿಕ್ಕಿ ತನ್ನ ತೊಡೆತಟ್ಟುತ್ತ ಚುನಾವಣೆಯ ಕಬಡ್ಡಿಗೆ ಎಲ್ಲರನ್ನು ಕರೆಯುತ್ತ ಆಗಲೇ ಕಾಲು ಕೆದರತೊಡಗಿದ್ದಾನೆ. ಆದರೆ ಎಂ.ವೈ.ಪಾಟೀಲ ಹಿಂದಿನಂತೆ "ಸಭ್ಯ ನಡವಳಿಕೆಯೇ ನನ್ನ ಕ್ರೆಡಿಟ್" ಎನ್ನುತ್ತ ಜನತೆಯತ್ತ ನೋಡತೊಡಗಿದ್ದಾನೆ. ಬಾಸ್ಗಿ ಗ್ರಾಮದ ಮಾಜಿ ಜಿ.ಪಂ. ಸದಸ್ಯ ತುಕಾರಾಮಗೌಡ, ಗುರುಶಾಂತ ಪಟ್ಟೇದಾರ, ಕರಜಗಿಯ ಸಿದ್ದಯ್ಯ ಎಂಬ ಜಿಲ್ಲಾ ಪಂಚಾಯತ್ ಸದಸ್ಯ ಕೂಡ ತಾವೂ ಒಂದು ಕೈ ನೋಡಬೇಕೆಂದು ಆಗಲೇ ತಾಲೀಮು ಶುರುಹಚ್ಚಿಕೊಂಡಿದ್ದಾರೆ


ಮತದಾರ ತಾನು ಯಾರ ಕೊರಳಿಗೆ ಜಯಮಾಲೆ ಹಾಕುತ್ತೇನೆ ಎಂಬ ಸಂಗತಿ ಮಾತ್ರ ಬಿಟ್ಟು ಕೊಡದೆ "ಗಪ್-ಚುಪ್" ಕುಳಿತಿದ್ದಾನೆ. ಈ ಮೌನದ ಗುಟ್ಟು ಏನಾಗಿರಬಹುದು?

-ವಿಶ್ವಾರಾಧ್ಯ ಸತ್ಯಂಪೇಟೆ



ವಿಠ್ಠಲ ಹೇರೂರ





ಭಯೋತ್ಪಾದನೆ: ಕನ್ನಡ ಮಾಧ್ಯಮಗಳ ಸಮೂಹ ಸನ್ನಿ

ಹುಬ್ಬಳ್ಳಿ, ಹೊನ್ನಾಳಿ ಮತ್ತು ರಾಜ್ಯದ ಇತರೆಡೆಗಳಲ್ಲಿ ಪೊಲೀಸರು ಬಂಧಿಸಿದ ಶಂಕಿತ ಉಗ್ರಗಾಮಿಗಳ ಬಗ್ಗೆ ಕಳೆದ ಹಲವು ದಿನಗಳಿಂದ ಕನ್ನಡ ದಿನಪತ್ರಿಕೆಗಳ ಮುಖಪುಟದಲ್ಲಿ ಪ್ರಕಟವಾಗುತ್ತಿರುವ ವರದಿಗಳು ಆತಂಕಕಾರಿಯಾಗಿವೆ; ಅಷ್ಟೇ ಅಲ್ಲ, ಅವು ಟೀವಿ ಕ್ರೈಂ ಸೀರಿಯಲ್ಲುಗಳಿಗಿಂತ ಹೆಚ್ಚು ರೋಚಕವಾಗಿಯೂ ಇವೆ. ಅದೇ ಒಂದು ಸಮಸ್ಯೆ. ಯಾಕೆಂದರೆ ಈ ವರದಿಗಳ ಸಾಲುಗಳ ನಡುವೆ ಓದಿದರೆ ಅವುಗಳಲ್ಲಿ ವಸ್ತುನಿಷ್ಠ ಮಾಹಿತಿಗಿಂತ ವರದಿಗಾರರ ಕಲ್ಪನಾವಿಲಾಸವೇ ಹೊಡೆದುಹಾಕುತ್ತದೆ. ತಮ್ಮ ಸುದ್ದಿಗಳಿಗೆ ಖಚಿತ ಮೂಲ ಅಥವಾ ಪುರಾವೆ ಕೊಡದೆ, "ಪೊಲೀಸ್ ಮೂಲಗಳು ತಿಳಿಸಿವೆ", "ವಿಶ್ವಾಸಾರ್ಹ ಮೂಲಗಳಿಂದ ತಿಳಿದುಬಂದಿದೆ", "ಶಂಕಿಸಲಾಗಿದೆ", "ಹೇಳಲಾಗುತ್ತಿದೆ"–ಇವೇ ಮುಂತಾದ ತಿಪ್ಪೆ ಸಾರಿಸುವ ಸಮಜಾಯಿಷಿಗಳನ್ನು ಈ ಪತ್ರಿಕೆಗಳು ಸಮರ್ಥನೆಗಳು ಎಂಬಂತೆ ಓದುಗರ ಮುಂದೆ ಇಡುತ್ತಿವೆ.

ಆದರೆ ಅದೇ ವೇಳೆಗೆ, ಹಿರಿಯ ಪೊಲೀಸ್ ಅಧಿಕಾರಿ ಶಂಕರ ಬಿದರಿ 04.02.08ರಂದು ಟಿವಿ ಸಂದರ್ಶನವೊಂದರಲ್ಲಿ "ಮಾಧ್ಯಮಗಳಲ್ಲಿ ಈ ಬಂಧನಗಳ ಕುರಿತು ಪ್ರಕಟವಾಗಿರುವ ವರದಿಗಳಿಗೆ ಯಾವುದೇ ಸಾಕ್ಷ್ಯಾಧಾರಗಳು ಇಲ್ಲ" ಎಂದು ಖಡಾಖಂಡಿತವಾಗಿ ಹೇಳಿದ್ದು ಮಾತ್ರ ಯಾವ ಪತ್ರಿಕೆಯಲ್ಲೂ ಸುದ್ದಿಯಾಗಲಿಲ್ಲ (ವಾರ್ತಾಭಾರತಿ ಹೊರತುಪಡಿಸಿ). ತಮ್ಮ ಈ ಸಂದರ್ಶನದಲ್ಲಿ ಶಂಕರ್ ಬಿದರಿ ಪತ್ರಿಕೆಗಳ ಬೇಜವಾಬ್ದಾರಿತನವನ್ನು ತರಾಟೆಗೆ ತೆಗೆದುಕೊಂಡು ಇದೇ ಪ್ರವೃತ್ತಿ ಮುಂದುವರಿದರೆ ಮಾಧ್ಯಮಗಳು ತಮ್ಮ ವಿಶ್ವಾಸಾರ್ಹತೆಯನ್ನೇ ಕಳೆದುಕೊಳ್ಳುತ್ತವೆ ಎಂದು ಎಚ್ಚರಿಸಿದರು. ಆದರೆ ಕನ್ನಡ ಪತ್ರಿಕೆಗಳಿಗೆ ಈಗ ಓದುಗರ ವಿಶ್ವಾಸ, ವೃತ್ತಿಧರ್ಮ ಇತ್ಯಾದಿ ಕಿರಿಕಿರಿಗಳೇ ಇಲ್ಲ, ಸರಕಾರ ಮತ್ತು ಖಾಸಗಿ ಕಂಪನಿಗಳ ಜಾಹೀರಾತು ಗಳಿದ್ದರೆ ಓದುಗರ ವಿಶ್ವಾಸವಾದರೂ ಯಾಕೆ ಬೇಕು?

ಕನ್ನಡ ಪತ್ರಿಕೆಗಳು ತಮ್ಮ ಓದುಗರನ್ನು ಎಷ್ಟು ಕೀಳಾಗಿ ಕಾಣುತ್ತವೆ ಎಂದರೆ ತಮ್ಮ ವರದಿಗಳ ಪ್ರಾಥಮಿಕ ವಿವರಗಳಾದರೂ ಸರಿಯಾಗಿವೆಯೇ ಎಂದು ತಾಳೆ ನೋಡುವ ಕನಿಷ್ಠ ವೃತ್ತಿಧರ್ಮವನ್ನು ಅವು ಈಗ ಪಾಲಿಸುತ್ತಿಲ್ಲ. ಉದಾಹರಣೆಗೆ ತಾ. 06.02.08ರ ಉದಯವಾಣಿ (ಮಣಿಪಾಲ ಆವೃತ್ತಿ)ಯ ಮುಖಪುಟದ ವರದಿಯಲ್ಲಿ ಈ ಸಾಲುಗಳಿವೆ: "ಕಳೆದ ಡಿಸೆಂಬರ್‌ನಲ್ಲಿ ರಿಯಾಜುದ್ದೀನ್ ಗೌಸ್, ಮಹ್ಮದ್ ಆಸಿಫ್, ಅಬೂಬಕರ್ ಹಾಗೂ ಹಫೀಸ್ ನೇತೃತ್ವದಲ್ಲಿ ಸಭೆ ನಡೆಸಿ ಕ್ಯೂಬಾದ ಮೌಂಟೆಸ್ಸಾರಿ ಜೈಲಿನಲ್ಲಿರುವ ವಿಚಾರಣಾಧೀನ ಭಯೋತ್ಪಾದಕರ ಬಗ್ಗೆ ಅಮೆರಿಕ ತಳೆದಿರುವ ನಿಲುವು ಕುರಿತು ಖಂಡನಾ ನಿರ್ಣಯ ಕೈಗೊಂಡಿದ್ದ ಪತ್ರ ತನಿಖಾಧಿಕಾರಿಗಳಿಗೆ ಲಭ್ಯವಾಗಿದೆ ಎಂದು ತಿಳಿದುಬಂದಿದೆ. ಮೌಂಟೆಸ್ಸಾರಿ ಎಂಬುದು ವಿಶಿಷ್ಟ ಶಿಕ್ಷಣ, ಬೋಧನೆಗಳನ್ನು ಅಳವಡಿಸಿಕೊಂಡಿರುವ ಪ್ರಾಥಮಿಕ ಶಾಲೆಗಳ ಹೆಸರು. ಕ್ಯೂಬಾದಲ್ಲಿ ಅಮೆರಿಕ ವಿಚಾರಣೆ ಇಲ್ಲದೆ, 600ಕ್ಕೂ ಹೆಚ್ಚು ಸೆರೆಯಾಳುಗಳನ್ನು ಕೂಡುದೊಡ್ಡಿಗಳಲ್ಲಿ ಬಂಧಿಸಿರುವ ಸೇನಾನೆಲೆಯ ಹೆಸರು ಗ್ವಾಂಟೆನಾಮೊ. ತನ್ನ ವರದಿಗಳ ಸತ್ಯಾಸತ್ಯತೆ ಬಗ್ಗೆ ಉದಯವಾಣಿ ತೋರಿಸುವ ಕಾಳಜಿ ಇದು!

ಇದು ಒಂದು ಸ್ಥಳದ ಹೆಸರನ್ನು ನಮೂದಿಸುವುದರಲ್ಲಿ ಆಗಿರುವ ಪ್ರಮಾದ. ಆದರೆ ಮಾಧ್ಯಮಗಳು ಜೀವಂತ ಮನುಷ್ಯರ ಬಗೆಗೂ- ಅವರು ಮುಸ್ಲಿಮ[...] ರಾಗಿದ್ದರೆ- ಇದೇ ಬಗೆಯ ಬೇಜವಾಬ್ದಾರಿತನವನ್ನು ತೋರಿಸುತ್ತವೆ. ಉದಾಹರಣೆಗೆ ನಿವೃತ್ತಿಯ ಅಂಚಿ[...] ನಲ್ಲಿರುವ ಕೊಪ್ಪಳದ ನೀರಾವರಿ ಇಲಾಖೆಯ ಎಂಜಿ[...] ನಿಯರ್ ಆದೋನಿ ಅವರ ಮೇಲೆ ಭಯೋತ್ಪಾದನೆಯ[...] ದೂರು ದಾಖಲಾಗಿದೆ ಎಂದೂ, ಪೊಲೀಸರು ಅವರ[...] ವಿಚಾರಣೆ ನಡೆಸುತ್ತಿದ್ದಾರೆ ಎಂದೂ ತಾ.05.02.08ರ[...] ಹೆಚ್ಚಿನ ಪತ್ರಿಕೆಗಳು ಮತ್ತು ಟೀವಿ ಪ್ರಸಾರಗಳು[...] ಪ್ರಕಟಿಸಿದವು. ಶಂಕಿತ ಭಯೋತ್ಪಾದಕನೊಬ್ಬನ ಹೆಸರು[...] ಆದ್ವಾನಿ ಎಂದಿದ್ದುದೇ ಈ ಪ್ರಮಾದಕ್ಕೆ ಕಾರಣವಾಗಿತ್ತು[...] ಕೆಲವು ಪತ್ರಿಕೆಗಳು (ಉದಾ: ದ ಹಿಂದು) ಮಾರನೆಯ[...] ದಿನ ಈ ಬಗ್ಗೆ ಪೊಲೀಸರ ಸ್ಪಷ್ಟೀಕರಣವನ್ನು ಪ್ರಕಟಿಸಿ[...] ತಮ್ಮ ವೃತ್ತಿ ಧರ್ಮ ಪಾಲಿಸಿದವು. ಆದರೆ ಹೆಚ್ಚಿನ[...] ಮಾಧ್ಯಮಗಳು ಆ ತೊಂದರೆ ತೆಗೆದುಕೊಳ್ಳಲಿಲ್ಲ.

ಆದೋನಿಯವರಿಗೆ ಸಂಬಂಧಿಸಿದ ವರದಿಯಲ್ಲಿ[...] ಆಗಿರುವುದು ಕೇವಲ ಕಾಗುಣಿತದ ಪ್ರಮಾದ. ಆದರೆ[...] ಉದಯವಾಣಿ ವರದಿಯದ್ದು ಕಾಗುಣಿತದ ಪ್ರಮಾದವೂ[...] ಅಲ್ಲ; ಮುದ್ರಣದೋಷವೂ ಅಲ್ಲ, ಅದು ಹಸಿ ಸುಳ್ಳು[...] ಕಳೆದ ಹಲವು ದಿನಗಳಿಂದ ಕನ್ನಡ ದಿನಪತ್ರಿಕೆಗಳು[...] 'ಅನ್ಯಮತೀಯ' ಭಯೋತ್ಪಾದಕರ ಬಗ್ಗೆ ಈ ಬಗೆಯ[...] ಸುಳ್ಳುಗಳನ್ನು ಎಗ್ಗಿಲ್ಲದೆ ಹೇಳುತ್ತಿವೆ. ಪೊಲೀಸರು[...] ಇದುವರೆಗೆ ಅವುಗಳನ್ನು ಪತ್ತೆ ಹಚ್ಚದಿದ್ದರೂ, ಕನ್ನಡ[...] ದಿನಪತ್ರಿಕೆಗಳಿಗೆ ಭಯೋತ್ಪಾದಕರು ಸಂಗ್ರಹಿಸಿರುವ[...] ಆರ್.ಡಿ.ಎಕ್ಸ್ ಟೈಮರ್, ಎ.ಕೆ. 407 ಹಾಗೂ ಇಸ್ರೇಲ್[...] ನಿರ್ಮಿತ ಶಸ್ತ್ರಾಸ್ತ್ರಗಳು ದೊರೆತಿವೆ! ಕರ್ನಾಟಕದ ಹಿರಿಯ[...] ಪೊಲೀಸ್ ಅಧಿಕಾರಿಗಳೇ ಅದನ್ನು ಅಲ್ಲಗಳೆದಿದ್ದರೂ[...] ಕನ್ನಡದ ಧೀರ ಪತ್ರಕರ್ತರು ಕಲಘಟಗಿ ಬಳಿಯ[...] "ದುರ್ಗಮ ಅರಣ್ಯದ ನಡುವೆ ಭಯೋತ್ಪಾದಕರು"[...]

ಅಚ್ಚರೆಡ್ಡಿ ಕಣ್ಣ ಮುಂದೆ ಸುಳಿದಿದ್ದು ಹೊಲೆಯನ ದಿಬ್ಬದ ಬೇಸಾಯ ಮಾತ್ರ ಅಲ್ಲ. ಆಗ ಚಿಕ್ಕ ಶ್ಯಾನುಭೋಗ 'ದೆವ್ವಗಳ ದಿಬ್ಬಾನದೆವ್ವಗಳೇ ತಿನ್ನಲೀ ಬಿಡು ಅಚ್ಚರೆಡ್ಡೀ!' ಅಂತ ಹೇಳಿದ ಮಾತುಗಳು ಕೂಡಾ ನೆನಪಿಗೆ ಬಂದವು. ಹಾಗೆ ನೋಡಿದರೆ ಹೊಲೆಯನ ದಿಬ್ಬ ಮಾತ್ರ ಅಲ್ಲ, ಎನ್ನೆಲದಿನ್ನೆ ಆಸುಪಾಸಿನಲ್ಲಿ ಲೆಕ್ಕವಿಲ್ಲದಷ್ಟು ಭೂಮಿ ಬಿದ್ದಿದೆ.

ಅದೆಲ್ಲಾ ಶ್ಯಾನುಭೋಗನದೇ ಅಂತಲೇ ಎಲ್ಲರೂ ಅಂದುಕೊಳ್ತಾ ಇರೋದು. ಇನಾಂಭೂಮಿಗಳ ನಿಜವಾದ ಕಥೆ ಎನ್ನೆಲದಿನ್ನೆಯ ಜನಕ್ಕೆ ಅರ್ಥವಾಗದ ವಿಷಯ. ಆ ಸುತ್ತ ಮುತ್ತಲ ಯಾವ ಹಳ್ಳಿಯ ಜನಕ್ಕೂ ಇನಾಮತಿಯ ಲೆಕ್ಕದಲ್ಲಿ ದೊಡ್ಡ ಶ್ಯಾನುಭೋಗ ಎಷ್ಟು ಭೂಮಿ ಲಪಟಾಯಿಸಿದ್ದಾನೆ ಅಂತ ಹೇಳೋ ಜ್ಞಾನ ಆಗಲಿ, ತಾಕತ್ತಾಗಲಿ ಇಲ್ಲ.

ಅಗಸ, ಕುಂಬಾರ, ನಾಯಿಂದ, ಬಡಗಿ, ತಳವಾರ ಇವರೆಲ್ಲರ ಇನಾಮತಿಗಳ ಎಷ್ಟೋ ಭೂಮಿ ಶ್ಯಾನುಭೋಗನ ಲೆಕ್ಕಕ್ಕೆ ಜಮೆ ಆಗಿರೋ ವಿಷಯ ಆ ಜಾತಿಗಳವರಿಗೇ ಗೊತ್ತಿಲ್ಲ. ಕುಂಬಾರರ ಮಣ್ಣಿಗಾಗಿ ಬಿಟ್ಟಿರೋ ಎರಡೆಕರೆ ಕುಂಬಾರರ ಇನಾಂ ಅನ್ನೋದು ಎಲ್ಲರೂ ಅಂದುಕೊಳ್ಳೋ ಮಾತು. ಆದರೆ ಅದು ಎರಡಲ್ಲ, ಐದು ಎಕರೆ ಅಂತ ಶ್ಯಾನುಭೋಗನಿಗೆ ಮಾತ್ರ ಗೊತ್ತು. ಅಗಸರು ಬಟ್ಟೆ ಒಗೆಯೋದಕ್ಕೋಸ್ಕರ ಇರೋದು ಒಂದು ಕುಂಟೆ, ಅದರ ಪಕ್ಕ ಬಟ್ಟೆ ಒಣಗಿಸೋದಕ್ಕೆ ಇರೋ ಆರೆಕರೆ ಭೂಮಿ ಬಗ್ಗೆ ಮಾತ್ರ ಅಗಸರಿಗೆ ಗೊತ್ತು. ಮಿಕ್ಕ ಭೂಮಿ ಎಷ್ಟು ಅನ್ನೋ ವಿಷಯ ಶ್ಯಾನುಭೋಗ ಮಾತ್ರ ಹೇಳೋಕೆ ಸಾಧ್ಯ. ಆ ಹಳ್ಳಿಯಲ್ಲಿ ದೇವದಾಸಿಯರೇ ಇಲ್ಲ, ದೇವದಾಸಿಯರ ಹೆಸರಿನಲ್ಲಿ ಇಪ್ಪತ್ತೈದು ಎಕರೆ ಇನಾಮತಿ ಮಾತ್ರ ಇದೆ. ಅದು ದೇವರ ಇನಾಮತಿ ಜೊತೆ ಇದೆ ಅಂತ ಶ್ಯಾನುಭೋಗ ಯಾವಾಗಲೂ ಹೇಳೋನು. ದೇವರ ಹೆಸರೋ, ದೇವದಾಸಿ ಹೆಸರೋ, ಆ ಭೂಮಿಯನ್ನ ಅನುಭವಿಸೋನು ಮಾತ್ರ ಶ್ಯಾನುಭೋಗನೇ. ತೋಟ ಇನಾಂ ಮಾತ್ರ ಬೆಳೆ ಬಂದಾಗ ಅವರಿಗೊಂದಿಷ್ಟು ಕಾಳು ಕೊಟ್ರೆ ಮುಗಿದು ಹೋಯಿತು. ಹೊಲ ಇದೆಯೋ! ಇದ್ದರೆ ಎಷ್ಟಿದೆ? ಅಂತ ತೋಟಿ ಶ್ಯಾನುಭೋಗನನ್ನ ಕೇಳಲಿಲ್ಲ, ಅವನು ಹೇಳಲಿಲ್ಲ. ದನಗಳ ಇನಾಂ ಕೂಡಾ ಇದೆ ಅನ್ನೋ ವಿಷಯ ಎನ್ನೆಲದಿನ್ನೆಯ ಜನಕ್ಕೆ ತಿಳಿಯದೇ ಇರೋದು ಆಶ್ಚರ್ಯವೇನಲ್ಲ. ಆದರೆ ಶ್ಯಾನುಭೋಗನ ಕಡತದಲ್ಲಿ ಮಾತ್ರ ಆ ಇನಾಂ ಸಹ ಇದೆ.

ನಾಗನ್ನ ರಾಯಲಸೀಮೆಯಿಂದ ಎನ್ನೆಲದಿನ್ನೆಗೆ ಬಂದ ಹೊಸದರಲ್ಲಿ 'ತುತ್ತುಗಳ ಇನಾಮತಿ' ಅಂತ ಅವನು ಹೇಳಿದಾಗ ಆ ಮಾತು ಕೇಳಿ ಎರ್ರೆಂಕ, ಎಂಕಟನರಸು, ಇಂಥವರು ಬಾಯಿಬಿಟ್ಟುಕೊಂಡು ಕೇಳ್ತಾ ಇದ್ದರು. ಪಿಟ್ಟೋನು ಮಾತ್ರ, ಅದೆಂಥಾ ಇನಾಮತಿನೋ ಹೇಳೋವರೆಗೂ ಬಿಡಲಿಲ್ಲ. ಆಗ ನಾಗನ್ನ ಎನ್ನೆಲದಿನ್ನೆಗೆ ಚಿಂತಲಗುಂಟೆ ಜೊತೆ ಏನಾದರೂ ಜಗಳ ಬಂದರೆ ತನಗೆ ತುತ್ತುಗಳ ಇನಾಮತಿ ಕೊಟ್ಟರೆ ಆ ಜಗಳ ಬಿಡುಸ್ತೀನಿ ಅಂತ ಹೇಳಿದ. ಅವರೆಲ್ಲಾ ಇಂಥಾ ಇನಾಮತಿ ಬಗ್ಗೆ ಕೇಳಿದ್ದು ಅದೇ ಮೊದಲು. ಎರಡು ಹಳ್ಳಿಗಳ ನಡುವೆ ಗಡಿ ಭಾಗದಲ್ಲಿ ಏನಾದರೂ ಜಗಳ ಬಂದರೆ ಅದನ್ನ ತೀರಿಸೋಕೆ ಒಬ್ಬ ಇರ್ತಾನೆ. ಅವನು ಗಡಿ ಯಾವುದು ಅಂತ ನಿರ್ಧಾರ ಮಾಡಬೇಕಾದಾಗ ಗಡಿಯುದ್ದಕ್ಕೂ ಅನ್ನದ ಮುದ್ದೆಗಳನ್ನ ಇಡ್ತಾನೆ. ಅದನ್ನೇ ತುತ್ತುಗಳ ಇನಾಂ ಅಂತ ಕರಿಯೋದು. ಇಂಥಾ ವಿಷಯಗಳು ಆ ಹಟ್ಟಿಯವರಿಗೆ ಅರ್ಥವಾಗೋದೇ ಇಲ್ಲ. ಅಷ್ಟೇ ಅಲ್ಲ, ಶ್ಯಾನುಭೋಗನಂಥವರಿಗೆ ಈ ಬಾಬತ್ತಿನಲ್ಲೂ ಲಾಭ ಇರೋದು ಅವರಿಗೆ ತಿಳಿಯೋದೂ ಇಲ್ಲ. ಆಶ್ಚರ್ಯ ಅಂದ್ರೆ ಬ್ರಿಟಿಷರು ಹಳ್ಳಿಯಲ್ಲಿನ ಕಂದಾಯ ಇಲಾಖೆಯ ತಮ್ಮ ನೌಕರರಿಗೆ ಹಣದ ರೂಪದಲ್ಲಿ ಸಂಬಳ ಕೊಡೋದು ಶುರುಮಾಡಿದ ಮೇಲೆ ಇಂಥಾ ಎಷ್ಟೋ ಇನಾಮತಿಗಳ ಹೆಸರಿನ ಭೂಮಿಗಳು ಶ್ಯಾನುಭೋಗರ ಲೆಕ್ಕಕ್ಕೋ, ಊರಿನ ದೊಡ್ಡರೆಡ್ಡಿಗಳ ಲೆಕ್ಕಕ್ಕೋ ಸೇರಿ ಬಿಟ್ಟವು. ಭೂಮಿಯ ಮೇಲೆ ನಡೆದ ಒಂದು ವಿಚಿತ್ರ ನಾಟಕ ಅದು.

ಚಿಕ್ಕ ಶ್ಯಾನುಭೋಗ ತುಂಬಾನೇ ಯೋಚನೆ ಮಾಡಿದ್ದಂತೂ ನಿಜ. ರೈತರಿಗೆ ಭೂಮಿಯನ್ನ ಮಾರಿದ್ದೂ ಕೂಡಾ ಮುಂದಾಲೋಚನೆ ಮಾಡಿದ ಮೇಲೇನೇ. ಹಳ್ಳಿಗಳಲ್ಲಿ ದಿನೇ ದಿನೇ ಬದಲಾಗ್ತಾ ಇದ್ದ ಸ್ಥಿತಿಯನ್ನ ಅವನು ಗಮನಿಸುತ್ತಲೇ ಇದ್ದ. ಒಂದೊಂದು ಸಲ ಆ ಹಳ್ಳಿಬಿಟ್ಟು ನೆಲ್ಲೂರಿಗೆ ಹೊರಟುಹೋಗೇಬಿಡೋಣ ಅಂತ ಅವನಿಗೆ ಅನ್ನಿಸಿದ್ದೂ ಇದೆ. ದೊಡ್ಡಮಗ ಓದ್ತಾ ಇದ್ದ. ಅಳಿಯ ಬ್ರಿಟಿಷ್ ಸರ್ಕಾರದಲ್ಲಿ ಒಳ್ಳೇ ಉದ್ಯೋಗದಲ್ಲಿ ಇದ್ದ. ಒಳ್ಳೇ ಸಂಪಾದನೆ. ಅದರ ಜೊತೆ, ಊರುಗಳಲ್ಲಿ ಅಚ್ಚರೆಡ್ಡಿಯಂಥವರು ನಿಧಾನವಾಗಿ ಬೆಳೀತಾ ಇದ್ದರು. ದೊಡ್ಡಸ್ತಿಕೇನೂ ಮೆರೀತಾ ಇದ್ದರು. ತನ್ನ ಮಾವ ಕೊಟ್ಟ ಭೂಮಿಯ ಜೊತೆ, ಅಚ್ಚರೆಡ್ಡಿ ಇನ್ನೂ ಹತ್ತೆಕರೆ ಹೊಲಾನ ಕಳೆದ ವರ್ಷ ಕೊಂಡಿದ್ದ. ಆ ಹೊಲಕ್ಕೆ ಪಕ್ಕದಲ್ಲಿದ್ದ ಬಂಜರು ಭೂಮಿಯನ್ನ, ಶ್ಯಾನುಭೋಗನಾದ ತನಗೂ ಒಂದು ಮಾತೂ ಹೇಳದೆ, ಕೇಳೋದು ಹಾಗಿರಲಿ, ಆಕ್ರಮಿಸಿಬಿಟ್ಟಿದ್ದ ಇವನನ್ನ ನೋಡಿಕೊಂಡು ಇನ್ನೂ ಇಬ್ರೂ ಮೂರು ಜನ ಅದೇ ಕೆಲಸ ಮಾಡಿದರು. ಕೆಲಸಕ್ಕೆ ಬಾರದವರೆಲ್ಲಾ ಇಂಥಾ ರೆಡ್ಡಿಯ ಮನುಷ್ಯರು ಅಂತ ಜನ ಕರೀತಿದ್ರೆ ಶ್ಯಾನುಭೋಗನಿಗೆ ಏನೋ ಹಿಂಸೆ. ಹಲವು ವಿಷಯಗಳು ತನಗೆ ಅನುಕೂಲವಾಗಿರಲಿಲ್ಲ. ಇಷ್ಟೆಲ್ಲಾ ವಿಷಯ ಮನಸ್ಸಿನಲ್ಲಿ ಕುದೀತಾ ಇದ್ದದ್ದಕ್ಕೇ ಅವನು ದೆವ್ವಗಳ ದಿಬ್ಬಾನ ದೆವ್ವಗಳೇ ತಿನ್ನಲಿ ಬಿಡು ಅಂದದ್ದು.


ಆದರೆ ಹೊಲೆಯರನ್ನ ಕರೆದು ಹೊಲೆಯನ ದಿಬ್ಬ ನೀವೇ ಬೇಸಾಯ ಮಾಡಿಕೊಳ್ಳಿ ಅಂತ ಒಂದು ಮಾತೂ ಹೇಳಲಿಲ್ಲ. ಅವರಿಗೆ ಆ ಜಮೀನು ಕೊಡಲಿಲ್ಲ. ಎನ್ನೆಲದಿನ್ನೆ, ಚಿಂತಗುಂಟಗಳ ನಡುವಿನ ಗಡಿ ಜಗಳದ ದಿನ ನಾಗನ್ನ, ಪಿಟ್ಟೋನು ಎಷ್ಟೋ ವಿಷಯಗಳ ಬಗ್ಗೆ ಲೋಕಾಭಿರಾಮವಾಗೇ ಮಾತಾಡಿದರು. ಪಿಟ್ಟೋನಿನಲ್ಲಿ ಸಣ್ಣ ನಡುಕ ಉಂಟಾಯಿತು. ತನ್ನ ಜೊತೆಯವರ ಹತ್ತಿರ ಮಾತನಾಡಿದ. ಸ್ವಲ್ಪ ಭರವಸೆ ಸಿಕ್ಕಹಾಗಿತ್ತು. ಮಾದಿಗರ ಹಟ್ಟಿಯ ಜನರೂ ಮುಂದಕ್ಕೆ ಬಂದರು. ಮುಸಲಯ್ಯ, ಪೋಲಯ್ಯ ಇಬ್ಬರೂ ಆ ಮಾದಿಗರ ನಾಯಕರಾದರು.

ಈಗ ಯುದ್ಧತಂತ್ರವನ್ನ ಹೆಣೆದಿದ್ದು ನಾಗನ್ನ. ಮೊದಲು ಹೊಲೆಯನ ದಿಬ್ಬದ ಮೇಲಿನ ಮರಗಳನ್ನ ಕಡಿಯೋದರಿಂದ ಶುರುಮಾಡೋಣ ಅಂದುಕೊಂಡರು. ಹಾಗೆ ಕಡಿಯೋವಾಗ ಊರಿನ ಶ್ಯಾನುಭೋಗನೋ, ರೆಡ್ಡಿಗಳೋ ಕೇಳಿದರೆ ಒಲೆಗೆ ಸೌದೆ ಬೇಕು ಅಂತ ಹೇಳೋಣ ಅಂದುಕೊಂಡು ಆ ಕೆಲಸ ಶುರುಮಾಡಿದರು. ಮೊದಮೊದಲು ಸ್ವಲ್ಪ ಹೆದರಿಕೇನೂ ಆಗ್ತಾ ಇತ್ತು. ಎರಡು, ಮೂರು ಮರ ಬೀಳಿಸಿ ಸ್ವಲ್ಪ ಹೊತ್ತು ನಿಂತರು. ಅವತ್ತು ಆ ಕೆಲಸಕ್ಕೆ ಹೋದವರೆಲ್ಲಾ ಯುವಕರೇ. ನಾಗನ್ನ ಒಬ್ಬನೇ ಅವರಲ್ಲಿ ದೊಡ್ಡವ. ಎಲ್ಲನ್ನ ಸಹ ನಾಗನ್ನನ ಜೊತೆನೇ ಇದ್ದ, ಅವನು ಮರಕಡಿಯೋದಕ್ಕೆ ಹೋಗಲಿಲ್ಲ. ಎಲ್ಲನ್ನ ಅಲ್ಲಿಗೆ ಹೋಗಿದ್ದಕ್ಕೆ ಎರ್ರೆಂಕನಿಗೆ ಮೈಯೆಲ್ಲಾ ನಡುಕ ಉಂಟಾಗಿ ಜ್ವರ ಬಂದ ಹಾಗಾಯಿತು. ಎರಡನೇ ದಿನ ಇನ್ನೂ ಹೆಚ್ಚಿನ ಜನ ಬಂದರು. ಅವತ್ತು ಮಧ್ಯಾಹ್ನದವರೆಗೆ ಕೆಲಸ ಮಾಡಿದರೂ, ಊರಿನವರು[...] ಯಾರೂ ಬಂದು ಏನು ಅಂತ ಕೇಳಲಿಲ್ಲ. ಮೂರನೇ[...] ದಿನ ಇನ್ನೂ ಹೆಚ್ಚಿನ ಜನ. ದಿಬ್ಬದ ಅರ್ಧಭಾಗದಲ್ಲಿ[...] ಮರಗಳು, ಮುಳ್ಳಿನ ಗಿಡಗಳು, ಎಲ್ಲಾ ಉರುಳಿದವು.

ಹಟ್ಟಿಯ ಜನರ ಈ ಕೆಲಸಗಳಿಂದ ಹಳ್ಳಿಯ ಜನ[...] ಹುಷಾರಾದರು. ಇದರ ಕಡೆ ಗಮನ ಕೊಟ್ಟರು. ಊರಾಚೆ[...] ಆಲದ ಮರದ ಹತ್ತಿರಕ್ಕೆ ಹಟ್ಟಿಯ ಜನರನ್ನ ಕರೆದು[...] ಕೇಳಿದರು. ಈ ಮರ ಊರು ಹುಟ್ಟುವುದಕ್ಕಿಂತ[...] ಹಿಂದಿನಿಂದ ಇದೆ ಅಂತ ಕೆಲವರು, ದೊಡ್ಡಶ್ಯಾನುಭೋಗನ[...] ತಂದೆ ಇದರ ಬೀಜವನ್ನು ನೆಟ್ಟಿದ್ದು ಅಂತ ಕೆಲವರು[...] ಹೇಳ್ತಾರೆ. ಆ ಮರದ ಕೆಳಗೆ ಒಂದು ಕಟ್ಟೆ. ಹಟ್ಟಿಯ[...] ಜನರ ಹತ್ತಿರ ಮಾತನಾಡಬೇಕಾದರೆ ಈ ಮರದ ಹತ್ತಿರಕ್ಕೆ[...] ಆ ಜನರನ್ನ ಕರೆಯೋದು ವಾಡಿಕೆ. ಹಟ್ಟಿಯ[...] ಹೊಲೆಮಾದಿಗರ ವಿಷಯ ಪಂಚಾಯಿತಿ, ಊರಿನ ಒಳಗೆ[...] ಚಾವಡಿ ಹತ್ತಿರ ಮಾಡೋದು ಹಳ್ಳಿಯವರಿಗೆ ಅವಮಾನ[...] ಅದಕ್ಕೇ ಊರಾಚೆ ಮರದ ಹತ್ತಿರಕ್ಕೆ ಹಟ್ಟಿಯವರ[...] ಕರೆಸಿದ್ದರು. ಇವತ್ತಿನ ಈ ಪಂಚಾಯತಿಗೆ ಹೊಲೆಯರ[...] ಕೆಲವರು, ಮಾದಿಗರಲ್ಲಿ ಕೆಲವರು ಬಂದಿದ್ದರು. ಕಟ್ಟೆಯ[...] ಮೇಲೆ ಶ್ಯಾನುಭೋಗ, ಪಕ್ಕದಲ್ಲಿ ಅಚ್ಚರೆಡ್ಡಿ, ಹಿಂದೆ ಮಿ[...] ರೆಡ್ಡಿಗಳು ಕೆಲವರು ಹಟ್ಟಿಯಿಂದ ಜನರನ್ನ ಕರಕೊಂಡು[...] ಬಂದಿದ್ದ ಹಜಾಮರ ವೀರಾಸ್ವಾಮಿ, ಅಗಸರ ಸಿಂಗ[...] ಎರಡೂ ಕಡೆ ನಿಂತಿದ್ದರು. ಸ್ವಲ್ಪ ದೂರದಲ್ಲಿ ತೋಟಿ[...] ಎಲಮಂದ ನಿಂತಿದ್ದ.

'ಹೊಲೆಯನ ದಿಬ್ಬದ ತುಂಬಾ ಮರ ಗಿಡ ಬೆಳೆದಿದೆ[...] ಸ್ವಲ್ಪ ನೆಲ ಹದ ಮಾಡೋಣ ಅಂತ ಅಂದುಕೊಂಡಿದ್ದ[...]

ಜಾಣತನ ಮರೆದ 'ಇಲಿ'



300 ಜನರಿಗೆ ಶಸ್ತ್ರಾಸ್ತ್ರ ತರಬೇತಿ ನೀಡಿದ ಸ್ಥಳವನ್ನೂ ಪತ್ತೆಹಚ್ಚಿ ಅದರ ಫೋಟೋ ಕೂಡ ಹೊಡೆದಿದ್ದಾರೆ!

ಇದುವರೆಗೆ ಮುಸ್ಲಿಮ್ ವಿರೋಧಿ ಹಿಸ್ಟೀರಿಯಾ ಉದಯವಾಣಿ ಮತ್ತು ವಿಜಯ ಕರ್ನಾಟಕಗಳಿಗೆ ಮಾತ್ರ ಸೀಮಿತವಾಗಿತ್ತು, ಆದರೆ ಹೊನ್ನಾಳಿ, ಹುಬ್ಬಳ್ಳಿಯ ಬಂಧನಗಳ ನಂತರ ಈ ಹುಚ್ಚು ಕನ್ನಡದ ಇತರ ಪ್ರಮುಖ ಪತ್ರಿಕೆಗಳಿಗೂ ತಗುಲಿದೆ. ಇದರ ಹಿಂದೆ ರಾಜ್ಯದ ಮುಸ್ಲಿಂ ಸಮುದಾಯದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಿತ್ತುಕೊಳ್ಳುವ ಯೋಜನೆಯೊಂದು ಇರುವ ಹಾಗೆ ಕಾಣುತ್ತದೆ. ಉದಾ: ಉದಯವಾಣಿಯ ಮೇಲೆ ಕಾಣಿಸಿದ ವರದಿಯನ್ನು ತಿದ್ದಿಕೊಂಡು ಓದಿದರೂ ಅದು ಉಲ್ಲೇಖಿಸುವ ಸಭೆ ಕಾನೂನು ಬಾಹಿರ ಹೇಗಾಗುತ್ತದೆ? ಕ್ಯೂಬಾದ ಗ್ವಾಂಟನಾಮೋ ಯಾತನಾ ಶಿಬಿರದಲ್ಲಿ ಅಮೆರಿಕ ವಿಚಾರಣೆ ನಡೆಸದೆ ಒತ್ತೆಯಾಳುಗಳನ್ನು ಇರಿಸಿ ಚಿತ್ರಹಿಂಸೆ ಕೊಡುತ್ತಿರುವುದರ ವಿರುದ್ಧ ವಿಶ್ವಾದ್ಯಂತ ಮತ್ತು ಅಮೆರಿಕದ ಹಲವು ನಗರಗಳಲ್ಲಿ ಸಾರ್ವಜನಿಕ ಪ್ರತಿಭಟನೆಗಳು ನಡೆದಿವೆ. ಹೀಗಿರುತ್ತ ಆ ಪ್ರಯುಕ್ತ ಬೆಂಗಳೂರಿನಲ್ಲಿ ಸಭೆ ನಡೆಸುವುದು ಅಪರಾಧವೋ? ವಿಜಯ ಕರ್ನಾಟಕ ತನ್ನ ಒಂದು ವರದಿಯಲ್ಲಿ ಬಂಧಿತ ಭಯೋತ್ಪಾದಕರು ದಿನಕ್ಕೆ 5 ಬಾರಿ ನಮಾಜು ಮಾಡುತ್ತಿದ್ದರು ಎಂದು ಕಾಣಿಸಿದೆ. ಬಹುತೇಕ ಪತ್ರಿಕೆಗಳು ಬಂಧಿತರ ಬಳಿ ಧಾರ್ಮಿಕ ಗ್ರಂಥಗಳು ದೊರೆತಿವೆ ಎಂದು ವರದಿ ಮಾಡಿವೆ. ಇವು ಕೂಡ ಬಂಧಿತರ ಭಯೋತ್ಪಾದಕರ ಕೃತ್ಯಗಳಿಗೆ ಸಾಕ್ಷ್ಯಾಧಾರಗಳೋ?

ಕನ್ನಡ ಪತ್ರಿಕೆಗಳು ಈಗ ಸೃಷ್ಟಿಸುತ್ತಿರುವ ಸಮೂಹ ಸನ್ನಿಯ ಬಗ್ಗೆ ಕಾಳಜಿ ವ್ಯಕ್ತಪಡಿಸುತ್ತಿರುವ ಅನೇಕರು, ಈ ಬಗ್ಗೆ ತಾವು ಏನು ಮಾಡಬಹುದು ಎಂದು ತೋಚದೆ ನಿರ್ವಿಣ್ಣರಾಗಿದ್ದಾರೆ. ಆಕಸ್ಮಾತ್ ಆ ವರದಿಗಳು ನಿಜವೇ ಆಗಿದ್ದರೆ? ತಮ್ಮ ಕಾಳಜಿಯಿಂದ ಭಯೋತ್ಪಾದಕರು ಲಾಭ ಪಡೆದುಕೊಳ್ಳುವಂತಾದರೆ? ಈ ಬಗೆಯ ಸಂದೇಹಗಳು ಈಗ ಅನೇಕರನ್ನ ಕಾಡುತ್ತಿವೆ. ಪ್ರಜಾಪ್ರಭುತ್ವದಲ್ಲಿ ಲಭ್ಯವಿರುವ ಎಲ್ಲ ಅವಕಾಶಗಳನ್ನು ಭಯೋತ್ಪಾದಕರು ಯಾವುದೇ ದಯದಾಕ್ಷಿಣ್ಯಗಳಿಲ್ಲದೆ ಬಳಸಿಕೊಳ್ಳುತ್ತಾರೆ. ಎಲ್.ಟಿ.ಟಿ.ಇ ಮತ್ತು ನಕ್ಸಲೀಯರು ಕೂಡಾ ಈ ಬಗೆಯ ಶೌರ್ಯ ಮತ್ತು ನಯವಂಚನೆಗಳಲ್ಲಿ ಇಸ್ಲಾಮಿಕ್ ಉಗ್ರಗಾಮಿಗಳಷ್ಟೇ ನಿಷ್ಣಾತರು. ಈ ಸನ್ನಿವೇಶದಲ್ಲಿ ಪ್ರಜಾಪ್ರಭುತ್ವ ಮತ್ತು ನಾಗರಿಕ ಹಕ್ಕುಗಳಲ್ಲಿ ಕಾಳಜಿ ಇರುವವರು ಏನು ಮಾಡಬೇಕು?

ಭಯೋತ್ಪಾದಕರನ್ನು ಪತ್ತೆ ಹಚ್ಚುವುದು ಮತ್ತು ಅವರನ್ನು ಶಿಕ್ಷೆಗೆ ಒಳಪಡಿಸುವುದು ಪ್ರಜೆಗಳ ಕೆಲಸವೂ ಅಲ್ಲ; ಪತ್ರಿಕೆಗಳ ಜವಾಬ್ದಾರಿಯೂ ಅಲ್ಲ, ಅಪರಾಧಿಗಳನ್ನು ಪತ್ತೆ ಮಾಡುವುದಕ್ಕೆಂದೇ ನಿಯುಕ್ತವಾಗಿರುವ ಪ್ರಭುತ್ವದ ಅಂಗಸಂಸ್ಥೆಗಳಿವೆ; ಕಾನೂನಿನ ವಿಧಿ ವಿಧಾನಗಳಿವೆ; ನ್ಯಾಯಾಲಯಗಳಿವೆ. ಆದರೆ ಕರ್ನಾಟಕದಲ್ಲಿ ಈಗ ಒಂದು ವಿಚಿತ್ರ ಸನ್ನಿವೇಶ ನಿರ್ಮಾಣವಾಗಿದೆ. ರಾಜ್ಯದ ರಾಜಕೀಯ ಅಸ್ಥಿರತೆ, ಭ್ರಷ್ಟಾಚಾರ, ನಿರುದ್ಯೋಗ, ರೈತರ ಆತ್ಮಹತ್ಯೆ, ಅಕ್ರಮ ಗಣಿಗಾರಿಕೆ, ಅಭಿವೃದ್ಧಿ ಯೋಜನೆಗಳಿಂದ ಒಕ್ಕಲೆಬ್ಬಿಸಲ್ಪಡುತ್ತಿರುವವರು, ದುರ್ಬಲವಾಗುತ್ತಿರುವ ಶಿಕ್ಷಣ ಮತ್ತು ವೈದ್ಯಕೀಯ ಸೌಲಭ್ಯಗಳು ಇತ್ಯಾದಿ ಯಾವ ಜ್ವಲಂತ ಸಮಸ್ಯೆಯ ಬಗೆಗೂ ಒಂದೇ ಒಂದು ಒಳ್ಳೆಯ ತನಿಖಾ ವರದಿಯನ್ನೂ ಮಾಧ್ಯಮಗಳು ಇದುವರೆಗೆ ಪ್ರಕಟಿಸಿಲ್ಲ, ಆದರೆ ಅವು ಇಸ್ಲಾಮಿಕ್ ಭಯೋತ್ಪಾದನೆಯ ಬಗ್ಗೆ ಮಾತ್ರ ವರದಿ ಮಾಡುವುದರ ಜೊತೆ ಪೊಲೀಸರು ಮತ್ತು ಕೋರ್ಟುಗಳು ಮಾಡಬೇಕಾಗಿರುವ ಕೆಲಸವನ್ನೂ ತಾವೇ ಮೈಮೇಲೆ ಎಳೆದುಕೊಂಡು ಮುಸ್ಲಿಮ್ ಸಮುದಾಯವನ್ನು ಸಾರಾಸಗಟಾಗಿ ಅಪರಾಧಿ ಎಂಬಂತೆ ಚಿತ್ರಿಸುತ್ತಿವೆ; ಈ ಸಮುದಾಯದ ಮೇಲೆ ಏಕಪಕ್ಷೀಯವಾಗಿ ಹಿಂಸೆ ಎಸಗಲು ಮಾಧ್ಯಮಗಳು ತಮ್ಮ ಓದುಗರನ್ನು ಪ್ರಚೋದಿಸುತ್ತಿವೆ. ಸಹಜವಾಗಿಯೇ ಇದರಿಂದ ಕಿಕ್ ಪಡೆದುಕೊಂಡ ಪ್ರಮೋದ್ ಮುತಾಲಿಕ ಈಗ ಇನ್ನಷ್ಟು ಏರುಧ್ವನಿಯಲ್ಲಿ ಮುಸ್ಲಿಮರ ವಿರುದ್ಧ ಬೊಗಳುತ್ತಿದ್ದಾನೆ. ಇಂತಹವರನ್ನು "ಹಚಾ" ಎಂದು ದೂರ ಅಟ್ಟುವುದಾಗಲೀ, ಕನ್ನಡಪತ್ರಿಕೆಗಳು ಇಡೀ ಮುಸ್ಲಿಂ ಸಮುದಾಯವನ್ನು ಶಂಕಿತರು ಎಂಬಂತೆ ಚಿತ್ರಿಸುವುದನ್ನು ಪ್ರತಿಭಟಿಸುವುದಾಗಲೀ, ಭಯೋತ್ಪಾದನೆಗೆ ಬೆಂಬಲ ನೀಡಿದಂತೆ ಎಂದು ನಾವು ಭಾವಿಸಕೂಡದು.


■ ಜಿ. ರಾಜಶೇಖರ

ಈ ಮಾತನ್ನು ನಾಗನ್ನ ಅಂದ. ಚಿಕ್ಕಶ್ಯಾನುಭೋಗ ನಾಗನ್ನನ ಕಡೆ ನೋಡಿದ. ನಾಗನ್ನ, ನಾರಯ್ಯನ ಮಗ. ನಾರಯ್ಯ ಹೇಗೆ ಸತ್ತಿದ್ದು ಎಂಬುದು ಚಿಕ್ಕ ಶ್ಯಾನುಭೋಗನಿಗೆ ಗೊತ್ತಿಲ್ಲದ ವಿಷಯವೇನಲ್ಲ. ಹಾಗೇನೇ ತನ್ನ ತಂದೆ ಸತ್ತದ್ದು ಹೇಗೆ ಅನ್ನೋದರ ಬಗ್ಗೆ ಸಹ ಚಿಕ್ಕ ಶ್ಯಾನುಭೋಗನಿಗೆ ಕೆಲವು ಅನುಮಾನಗಳಿದ್ದೇ ಇದ್ದವು. ಮಧ್ಯದಲ್ಲಿ 'ರಂಗಾಯಿ' ಬರದೇ ಇದ್ದಿದ್ರೆ ತಾನಂತೂ ಆ ವಿಷಯದಲ್ಲಿ ತುಂಬಾ ಮುಂದುವರೀತಿದ್ದನೇನೋ. ಜೊತೆಗೆ ಅಚ್ಚಿರೆಡ್ಡಿ ಬಂದು ತನ್ನ ತಾಯಿಯ ಹೆಸರು ಬೀದಿಪಾಲು ಮಾಡಬೇಡ ಅಂತ ಬೇಡಿಕೊಂಡ. ಹೋದ ತಂದೆ ಮತ್ತೆ ಬರೋದಂತೂ ಸಾಧ್ಯವಿರಲಿಲ್ಲ. ಹಾಗಾಗಿ ಯಾರು ಏನೇ ಅಂದುಕೊಂಡರೂ ತನ್ನ ಯೋಚನೆಗಳನ್ನ ಮಾತ್ರ ತನ್ನಲ್ಲೇ ಇಟ್ಟುಕೊಂಡ.

ಅದಕ್ಕಿಂತಲೂ ಮುಖ್ಯ ಅಂದರೆ ಈಚೀಚೆಗೆ ಎನ್ನೆಲದಿನ್ನೆಯಲ್ಲಿ, ಹಳ್ಳಿಯಲ್ಲಿ ಕಾಣಿಸ್ತಾ ಇರೋ ಬದಲಾವಣೆಗಳು. ಇವು ಅವನನ್ನ ಬೇರೇ ರೀತಿಯ ಯೋಚನೆಗೆ ಹಚ್ತಾ ಇವೆ. ರೆಡ್ಡಿಗಳು ಗಮನಿಸಿದರೋ ಇಲ್ಲವೋ, ತಾನಂತೂ ಒಂದು ಬೆಳವಣಿಗೆಯನ್ನ ಸ್ಪಷ್ಟವಾಗಿ ಗುರುತಿಸಿದ್ದ. ಈ ಮರದ ಹತ್ತಿರ ಈ ಥರ ಪಂಚಾಯಿತಿ ನಡೆಯೋದು ತುಂಬಾ ಅಪರೂಪ. ಹಿಂದೆ ಹೀಗೆ ನಡೆದಾಗ, ಹಳ್ಳಿಯಿಂದ ಜನ ಬರ್ತಾನೇ ಇರಲಿಲ್ಲ. ಹೆದರಿಸಿ, ಬೆದರಿಸಿ ಕರಕೊಂಡು ಬರಬೇಕಾಗಿತ್ತು. ಆದರೆ ಈಗ ಬಹಳ ಜನ ಬಂದಿದ್ದಾರೆ. ಹಿಂದೆ ಎಲ್ಲರೂ ತಮ್ಮತಮ್ಮಲ್ಲೇ ಜಗಳ ಆಡಿಕೊಂಡು ಒಬ್ಬರ ಮೇಲೊಬ್ಬರು ಹೇಳ್ತಾ ಇದ್ದರು. ಆದರೆ ಈಗ ಎಲ್ಲರ ಪರವಾಗಿ ನಾಗನ್ನ ಒಬ್ಬನೇ ಮಾತನಾಡ್ತಾ ಇದ್ದಾನೆ. ಇನ್ನೂ ಒಂದು ವಿಷಯ ಸಹ ಚಿಕ್ಕ ಶ್ಯಾನುಭೋಗನ ಗಮನಕ್ಕೆ ಬಂತು. ಪೀಡಾಯುದ ಕೆಲಸ ನಡೆಯೋವಾಗ ಮಧ್ಯಾಹ್ನದ ಊಟ ಹೊಲೆಯರಿಗೆ, ಮಾದಿಗರಿಗೆ ಬೇರೆ ಬೇರೆಯಾಗಿ ಏರ್ಪಾಡಾಗುತ್ತಿದ್ದ ಊರದು. ಹಿಂದೆ ಇಂಥ ಪಂಚಾಯಿತಿ ನಡೆದರೆ ಬಂದ ಕೆಲವೇ ಕೆಲವರು ಸಹ ಹೊಲೆಯರು, ಮಾದಿಗರು ಅಂತ ಬೇರೆ ಬೇರೆ ಗುಂಪುಗಳಾಗಿ ಕೂತಿರ್ತಿದ್ದರು. ಆದರೆ ಈಗ ಎಲ್ಲರೂ ಒಂದೇ ಕಡೆ ಕೂತಿದ್ದರು. ಹೊಲೆಯ ಪಿಟ್ಟೋನು, ಮಾದಿಗ

■ ಕಲ್ಯಾಣರಾವ್‌ರವರ

ಅಸ್ಪೃಶ್ಯ ವಸಂತ 10



ಅನುವಾದ: ಪ್ರೊ. ನಗರಗೆರೆ ರಮೇಶ್

[illegible] ಇಬ್ಬರೂ ಪಕ್ಕ ಪಕ್ಕದಲ್ಲೇ ಕುಂತಿದ್ದರು. ಇಬ್ಬರನ್ನೂ ನೋಡಿದಾಗ [illegible] ಅನುಮಾನ ಬರೋ ರೀತಿನೇ ಇತ್ತು, ಜೊತೆಗೆ, ಹೊಲೆಯರ [illegible] ಮುಖಗಳಲ್ಲಿ ಯಾವ ಹೆದರಿಕೆ, ಹಿಂಜರಿಕೆ [illegible] ಸ್ವಲ್ಪ ಗತ್ತು, ಜಬರ್ದಸ್ತು ಕಾಣಿಸುತ್ತಿದ್ದವು. ಚಿಕ್ಕ [illegible] ಕಡೆ ನೋಡಿದ. ಅಚ್ಚಿರೆಡ್ಡಿಗೆ [illegible] ಹೊಸ ಅನುಭವದೇ. ಅಚ್ಚಿರೆಡ್ಡಿ ತನ್ನ

ಪಕ್ಕದಲ್ಲಿ ಅಲ್ಲದೆ, ಸ್ವಲ್ಪ ಹಿಂದಕ್ಕೆ ಕುಳಿತಿದ್ದರೆ ಚೆನ್ನಾಗಿತ್ತು ಅಂತ ಶ್ಯಾನುಭೋಗನಿಗೆ ಅನ್ನಿಸುತ್ತಿತ್ತು.

'ಮರ ಎಲ್ಲಾ ಹೊಡೆದಾದ ಮೇಲೆ ನಿಮಗೆ ಹೇಳೋಣ ಅಂತ ಇದ್ದೆವು.' ನಾಗನ್ನ ಹೇಳ್ತಾ ಇರೋದು ಸುಳ್ಳು ಅನ್ನೋದು ಶ್ಯಾನುಭೋಗನಿಗೆ ಅರ್ಥ ಆಯಿತು.

'ಮೊದಲೇ ಹೇಳೋಣ ಅಂದರೆ, ನೀವು ನೆಲ್ಲೂರಿಗೆ ಹೋಗಿದೀರ ಅಂತ ಗೊತ್ತಾಯಿತು.' ನಾಗನ್ನನ ಈ ಮಾತು, ಸುಳ್ಳೇ ಆದರೂ, ತನ್ನ ಯಜಮಾನಿಕೆಯನ್ನು ಎತ್ತಿಹಿಡಿಯೋ ಅಂಥದೇ ಅಂತ ಶ್ಯಾನುಭೋಗನಿಗೆ ಅನ್ನಿಸಿತು. ತನ್ನ ಮಟ್ಟಿಗೆ ತಾನು, ಅಷ್ಟು ಮಾತ್ರ ಮರ್ಯಾದೆ ಉಳಿಸಿಕೊಳ್ಳೋದು ಒಳ್ಳೇದು ಅನ್ನಿಸಿತು. ತನ್ನನ್ನ ಬೇರೆಯವರಿಗಿಂತಲೂ ಸ್ವಲ್ಪ ಎತ್ತರದಲ್ಲೇ ಇಟ್ಟಿದ್ದಾನೆ ಈ ನಾಗನ್ನ ಅನ್ನಿಸಿತು.

ಆದರೆ ಈ ಮಾತುಗಳು ಅಚ್ಚಿರೆಡ್ಡಿಗೆ ಇಷ್ಟ ಆಗಲಿಲ್ಲ. ಮರ ಕಡಿದಾದ ಮೇಲೆ ನಿಮಗೆ ಹೇಳೋಣ ಅಂತ ಇದ್ದೆವು ಅಂದಾಗ ನಿಮಗೆ ಅಂದರೆ ತನಗೂ ಅಂದುಕೊಂಡಿದ್ದ. ಆದರೆ, ನಾಗನ್ನನ ಎರಡನೆ ಮಾತಿನಿಂದ ಆ 'ನಿಮಗೆ' ನಲ್ಲಿ 'ತನಗೆ' ಜಾಗ ಇಲ್ಲ ಅಂತ ಗೊತ್ತಾದಾಗ ಅಚ್ಚಿರೆಡ್ಡಿಗೆ ಮೈಯೆಲ್ಲಾ ಬಿಸಿಯಾಯಿತು. ಶ್ಯಾನುಭೋಗ ನಿಲ್ಲದಿದ್ದರೆ ಏನಂತೆ, ತಾನಿದ್ದನಲ್ಲ ಊರಲ್ಲಿ, ತನಗೆ ಹೇಳಬಹುದಿತ್ತಲ್ಲ. ತನ್ನನ್ನ ಶ್ಯಾನುಭೋಗನಿಗಿಂತಲೂ ಕೀಳಾಗಿ ನೋಡೋದು ಅವನಿಗೆ ಸರಿಬರಲಿಲ್ಲ.

'ನಾವಿರಲಿಲ್ವೇನು ಊರಲ್ಲಿ? ನಮಗೇ ಹೇಳಬಹುದಿತ್ತಲ್ಲಾ?' ಅಚ್ಚಿರೆಡ್ಡಿಗೆ ಮಾತು ತಡೆಯಲಾಗಲಿಲ್ಲ. ಈ ಮಾತಿನಿಂದ ಶ್ಯಾನುಭೋಗನಿಗೆ ಕೋಪ ಬಂತು. ಆದರೆ ಮೇಲಕ್ಕೆ ಮಾತ್ರ 'ಹೌದು, ನಾನಿಲ್ಲದಿದ್ದರೇನಂತೆ? ಅಚ್ಚಿರೆಡ್ಡಿಗೆ ಹೇಳಬಹುದಿತ್ತಲ್ಲಾ' ಅನ್ನೋದೇನೋ ಅಂದ. ತಕ್ಷಣವೇ, 'ಹೌದು ಹಾಗೆ ಮಾಡದೇ ಇದ್ದದ್ದು ತಪ್ಪಾಯಿತು' ಅಂತ ನಾಗನ್ನ ಹೇಳಿಬಿಡ್ತಾನೇನೋ ಅಂತ ಕಳವಳ ಉಂಟಾಯಿತು. ನಾಗನ್ನ ಹಾಗೆ ಹೇಳದೇ ಇರೋದೇ ಸರಿ ಅಂತ ಅಂದುಕೊಳ್ತಿದ್ದ. ಅದಕ್ಕೆ ಸರಿಯಾಗಿ ನಾಗನ್ನ ಮೌನವಾಗಿದ್ದ. ಅವನು ಏನೂ ಹೇಳದೇ ಇದ್ದದ್ದು ಶ್ಯಾನುಭೋಗನಿಗೆ ಸಂತೋಷವೇ ಆಯಿತು.

ನಾಗನ್ನನ ಆಲೋಚನೆಗಳು ನಾಗನ್ನನವು. ಅವನು ಆಲೋಚನೆಗಳಿಲ್ಲದವ ಅಂತ ಶ್ಯಾನುಭೋಗನೂ ಅಂದುಕೊಂಡಿರಲಿಲ್ಲ. ಬುದ್ಧಿ ಯಾರಪ್ಪನ ಸ್ವತ್ತೂ ಅಲ್ಲ. ಇಲಿಯ ಜಾಣತನ ಇಲಿಯದು, ಹಾವಿನ ಜಾಣತನ ಹಾವಿನದು. ಆದರೆ ಇಲಿ ಸೇರಿಕೊಂಡಿರೋ ಬಿಲದ್ದೇ ಸಮಸ್ಯೆ. ನಾಗನ್ನನಂಥವರಿಗೆ ಈ ವ್ಯವಸ್ಥೆಯಿಂದಾಗಿ ಸಿಕ್ಕಿದ್ದು ಇಂಥಾ ಕತ್ತಲು ತುಂಬಿದ ಬಂದೀಖಾನೆ ಮಾತ್ರ. ಆ ಕತ್ತಲಿನಲ್ಲೇ ಬಿದ್ದಿರು ಅಂತ ಹೇಳಿದ ಈ ವ್ಯವಸ್ಥೆಯ ಮಾತಿನ ವಿರುದ್ಧವಾಗಿ ಕತ್ತಲಿನಿಂದ ಹೊರಬರುವ ಮಾರ್ಗವನ್ನ ನಾಗನ್ನಗಳೇ ಕಂಡುಕೊಳ್ಳದೇ ಬಿಡರು. ಹಾಗೇ ಬಿಟ್ಟರೆ ಅದು ಚರಿತ್ರೆಯೇ [illegible] ಬದಲಾವಣೆ [illegible] ಚರಿತ್ರೆಯನ್ನ [illegible] ಬಾರದು. [illegible] ಇದೇ ಚರಿತ್ರೆ ಅಂತ [illegible] ಇಂಥಾ ಬಿಲಗಳಲ್ಲಿ ಸೇರಿಕೊಂಡಿರೋ ಇಲಿಗಳಿಗೆ ಸಾಕಷ್ಟು [illegible] ಆದರೆ [illegible]

(ಮುಂದುವರಿಯುವುದು)



ವಿಚಿತ್ರವೂ ವಿಚಾರಯೋಗ್ಯ ಅಲ್ಲವೆ?

[illegible] ಇನ್ನಷ್ಟು ಚರ್ಚೆಗೆ ಅವಕಾಶ ಮಾಡಿಕೊಡಬಹುದು [illegible] ಮರು-ಪ್ರತಿಕ್ರಿಯ.

[illegible] 'ಸುಲಭ' [illegible] (ರಲೇಟಿವ್) ಆಗಿ [illegible] 'ಶ್ರೀಮಂತ' [illegible] 'ಸುಲಭವಾಗಿ' [illegible]

ಮರು ಪ್ರತಿಕ್ರಿಯೆ

[illegible] 'ಕರೆನ್ಸಿ' [illegible] 'ಆಕ್ಷಾಮಿಕ್' [illegible]

[illegible] "The Future of Knowledge and Culture" [illegible]

[illegible]

■ ಡಿ.ಎಸ್.

ಕಾಂಗ್ರೆ ಗಾಡಿಗೆ ಹಿಂಬಾರ ಜಾಸ್ತಿಯಾಯ್ತಾ ಅದೆ

ಬೆಳೆದ ಬೆಳೆಯನ್ನು ಬಡಿದು, ಕೇರಿ, ತೂರಿ ತುಂಬಿಕೊಳ್ಳುವ ಕಾಲ ಮುಗಿಯುತ್ತಾ ಬಂದಿತ್ತು. ಜನರ ಆಹಾರಗಳು ಬದಲಾಗಿ ಬೆಂಕಿಯ ರಾವಿಗೆ ಸಿಕ್ಕವರಂತೆ ಬಣ್ಣ ಕಳೆದುಕೊಂಡಿದ್ದರು. ಆದಾಗಲೇ ಊರ ಸುತ್ತಲ ವಾತಾವರಣ ಬಸವಳಿದು ಬಣಗುಡತೊಡಗಿತ್ತು. ತನ್ನೆಲ್ಲಾ ಕೆಲಸ ಮುಗಿಸಿ ಕೈತೊಳೆದು ಕೊಂಡಂತಿದ್ದ ಜುಮ್ಮಿ, "ಉಗ್ರಿ, ನಡಿಲ ಯಾವ್ದಾರ ಸಿನುಮ ನೋಡನ, ಯಾಕೋ

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

ಬೇಜಾರಾಗ್ಯದೆ" ಅಂದಳು.

"ಬೇಜಾರಾಗ್ಯದೆ ಅಂತ ಸಿನುಮ ನೋಡಕ್ಹೋದ್ರೆ, ಇನ್ನೂ ಬೇಜಾರಾಯ್ತದೆ. ಸುಮ್ಮನಿರೆ ಅತ್ಲಗೆ."

"ಯಾವ್ದೊ ಒಂದು ನೋಡನ ನಡಿಲ."

"ಒಸಿದಿನ ತಡಕಳೆ. ರಘುವೀರ ವಳ್ಳೆ ಸಿನುಮ ತಗೀನಂತೆ."

"ರಗುವೀರ ಅಂದ್ಯಾರ್ಲ?"

"ಇದೇನೆ ಹಿಂಕೇಳ್ತಿ? ಅವುನವುನೆ ಯರಡು ಸಿನುಮ ನೋಡಿದ್ದೆ? ಅದೂ ಅಲ್ದೆ ವಳ್ಳೆ ಕುಮಾರಸ್ವಾಮಿ ತಮ್ಮ ನಂಗವುನೆ ಅಂದಿದ್ದೆ?"

"ಓ ಆ ಹುಡುಗನಾ? ಅವುನು ತಿರಗ ಸಿನುಮಕ್ಕೆ ಬಂದನೆ?"

"ಬರದೇನು, ಇರದೆ ಅಲ್ಲಿ, ಯಾಕೋ ಮನಿಗಿದ್ದ ಈಗ ತಿರಗ ಎದ್ದವುನೆ" ಎಂದ ಉಗ್ರಿ.

"ಕುಮಾರಸ್ವಾಮಿದೇನೂ ಸುದ್ದೀನೇ ಇಲವಲ್ಲಾ ಉಗ್ರಿ?" ಎಂದ ಸೀರ.

"ಅವುನಿಗೆ ಉಸಾರಿಲ್ಲ ಕಣಮಾವ. ರೆಸ್ಟ ತಗಂತಾ ಅವುನೆ. ಅದ್ಕೆ ದ್ಯಾವೇಗೌಡ ಊರೂರು ಸುತ್ತಿಗಂಡು ಪಾರ್ಟಿ ಕಟ್ಟತಾ ಅವುನೆ."

"ಆಗೊ ನೋಡು, ಹೇಳದ್ನೆ ಮರತಿದ್ದೆ ಕಂಡ್ಯ ಉಗ್ರಿ. ಭದ್ರಾವತಿಂದ ನಾಗರಾಜ ಬಂದಿದ್ನ."

"ಯಾಕ ಬಂದಿದ್ನಾ?"

"ಯಾಕ ಬಂದಿದ್ನೊ ಏನೊ. ಅವುನ ಮನಿಗೆ ದ್ಯಾವೇಗೌಡ ಬಂದಿದ್ನಂತೆ."

"ಏನು ಸುಳ್ಳೇಳತಿಯ ನೀನು? ಅಂಥಾ ದ್ಯಾವೇಗೌಡ ಇಂತ ನಾಗರಾಜನ ಮನಿಗೆ ಬತ್ತನೆ ಅಂದ್ರೆ ಇದಕಿಂತ ಸುಳ್ಳು ಇನ್ನಾವುದಿದ್ದತೂ?" ಎಂದು ಉಗ್ರಿ ಹೇಳುವಾಗ ಮಧ್ಯೆ ಬಾಯಿ ಹಾಕಿದ ಹೋಟೇಲ್ ಚಿಕ್ಕಯ್ಯ

"ನಿಜ ಕಣೊ ಉಗ್ರಿ, ನಾನೂ ತಿಳಕಂಡೆ. ನಾಗರಾಜನೆಡ್ತಿ ಜಾನಕಮ್ಮ ವಳ್ಳೆ ಸೊಪ್ಪು ಸಾರಿನ ಮುದ್ದೆ ಮಾಡ್ತಳೆ ಅಂತ ಜೆಡಿಎಸ್‌ನೋರು ಅಂದ್ರಂತೆ. ಅಂಗಂದಿದ್ದೇ ತಡ, ದ್ಯಾವೇಗೌಡ್ರು ಹೋಗಿ ಕೀರೆಸೊಪ್ಪಿನ ಸಾರು, ಮುದ್ದೆ ಮಾಡಿಸಿಗಂಡು ಉಂಡು, 'ನಮ್ಮವ್ವನೂ ನಿನ್ನಂಗೆ ಮಾಡುತಿದ್ಲು ಕಣವ್ವ. ನಿನ್ನ ಸಾರಿನ ರುಚಿ ನಮ್ಮವ್ವನ ಸಾರಿನ ರುಚಿ ಒಂದೇ ತರ' ಅಂದುಬಿಟ್ಟು ಹೋದನಂತೆ" ಎಂದು ವಿವರಿಸುವಾಗ, ಉಗ್ರಿ,

"ತಗ್ಗಳಪ್ಪ, ಇದಪ್ಪ ರಾಜಕಾರಣ ಅಂದ್ರೆ. ಆ ನಾಗರಾಜ, ಜಾನಕಮ್ಮ ಸಿದ್ದರಾಮಯ್ಯ ಅಂದ್ರು ಸಾಕು, ಬಿದ್ದಂಬೀಳ ಓಡರು. ಅಂಥೋರ ಮನಿಗೋಗಿ ದ್ಯಾವೇಗೌಡ್ರು ಸೊಪ್ಪು ಸಾರು ಮುದ್ದೆ ತಿಂದು ಬಂದವುರಲ್ಲಾ, ಈ ರಾಜಕಾರಣಕೆ ಏನೇಳನಾ" ಎಂದು ತಲೆಮ್ಯಾಲೆ ಕೈ ಹೊತ್ತು ಕೂತ.

ಆಗ ಜುಮ್ಮಿ,

"ಏ ಈಗ ನಾಗರಾಜ ಮತ್ತು ಜಾನಕಮ್ಮ ಏನಂತಾ ಅವುರಂತೆ ಗೊತ್ತೇನ್ಲ? 'ಸಿದ್ದರಾಮಯ್ಯನ್ನ ಮಾತಾಡಿಸಿದ್ರೆ ತಿರುಗಿ ನೋಡದೆ ಕಷ್ಟಾಗದು. ದ್ಯಾವೇಗೌಡ್ರು ಮನೆತಕ್ಕೆ ಬಂದು ದಾಸಯ್ಯನಂಗೆ ಮುದ್ದೆ ಇಕ್ಕಿಸಿಗಂಡು ಉಂಡುಹೋದರಲ್ಲಾ, ಅಂತಾ ವಳ್ಳೆ ಮನ್ಸ ಇದ್ದನೇ? ಇನ್ನ ಮ್ಯಾಲೆ ನಾವು ಅವುನಕಡಿಕೆ' ಅಂತ ಕುಂತಿದ್ದರಂತೆ."

"ಇರಬವುದು ಬುಡು. ಏನೇ ಆಗ್ಲಿ ನಾನು ಕಾಲದಿಂದ ನೋಡ್ತಯಿದ್ದಿನಿ, ಈ ದ್ಯಾವೇಗೌಡ ಪವರ್ ಇಲ್ದಾಗ್ಲೆ ಚನ್ನಾಗಿ ನ್ಯಡಕಳದು."

"ಪವರ್ ಬಂದಾಗ್ಲೂ ಅಂಗೆ ಇರಕ್ಕೇನಾಗ್ಯದೊ ಉಗ್ರಿ?" ಎಂದುಕೊಂಡು ವಾಟಿಸ್ಸೆ ಬಂದ.

"ಕೇಳಿದೇನೊ ವಾಟಿಸ್ಸೆ ಗೌಡ್ರು ರಾಜಕೀಯವಾ?" ಎಂದ ಉಗ್ರಿ.

"ಯಾವ ರಾಜಕೀಯನಪ್ಪ?"

"ಸಿದರಾಮಯ್ಯನ ಸಮಂದಿ ಜಾನಕಮ್ಮನ ಮನಿ[...] ದ್ಯಾವೇಗೌಡ್ರು ಹೋಗಿ, ಸೊಪ್ಪಿನ ಸಾರು ಮಾಡಿಸಿಗಂಡು ಮುದ್ದೆ ಉಂಡು, ಮಜ್ಜಿಗೆ ಕುಡುದು ಬಂದಿದ್ದರಂ[...] ಇದಕ್ಕೇನೇಳ್ತೀ?"

"ನೋಡು ಮತ್ತೇ!"

"ಲ್ಯಕ್ಕ ಹಾಕು. ಇನ್ನಂಥ ರಾಜಕಾರಣ ಇದು? ಈ[...] ರಾಜಕಾರಣದ ಮುಂದೆ ಆ ಬಿಜೆಪಿ ಬಡ್ಕೆತ್ತವು, ಕಾಂಗ್ರೆಸ[...] ಬಡ್ಕೆತ್ತವು ತಿಣುಕ್ತ ಕುಂತವೆ."

"ನೀನಂಗೇ ನೋಡಿದ[...] ಜನಮೆಚ್ಚೊ ಮಾತಾಡ್ತಯಿರೊನು[...] ರಾಜಕಾರಣ ಮಾಡ್ತಯಿರೋನು[...] ದ್ಯಾವೇಗೌಡನೆ ಕಣೊ ಉಗ್ರಿ."

"ಅಂಗಂತಿಯಾ?"

"ಅವುಂದು ಪ್ರಾಮಾಣಿಕವಾ[...] ರಾಜಕಾರಣ ಅಲ್ಲ, ಆದ್ರೂ [...] ನಾಣಯ್ಯನಂಥೋನು ದ್ಯಾವೇಗೌಡ[...] ಮನೆ ಎಲ್ಲದೆ ಅಂತ ಹುಡಿಕ್ಯಂಡ[...] ಹೋಯ್ತನೆ ಅಂದ್ರೆ ದ್ಯಾವೇಗೌಡ[...] ಏನು ಮಾಡಿರಬವುದು ಹೇಳು?"

"ಏ, ಅವುನೊಬ್ಬ ಗತಿಗೆಟ[...] ನಾಣಯ್ಯ ಕಣೊ ವಾಟಿಸ್[...] ದ್ಯಾವೇಗೌಡುಂತ ಆ ಪ್ರಕಾಶನಂಥೋ[...] ಇರಕಾಗದೆ ಹೋಯ್ತಾಯಿರುವಾಗ ಇವುನೋಯ್ತನೆ ಅಂ[...] ಏನೇಳನ?"

"ಇನ್ನೇನು? ದ್ಯಾವೇಗೌಡ ಮುಂದೆ ನೀನೆ ಎಮ್ಮೆ[...] ಅಂತ ವಾಗಿಗೊಂದೀಟು ತುಪ್ಪ ಸೀಟ್ಯವುನ[...] ಇದತ್ತಗೆನ್ನೆಕ್ಯಂಡೋಗದೆ."



ಎಲ್ಲೂ ಸಲ್ಲದವರು ಇಲ್ಲಿ ಸಲ್ಲುವರಯ್ಯ

ಈ ಅಮಿತಾಭ್ ಬಚ್ಚನ್ ಇದಾರಲ್ಲ ಒಂದು ರೀತೀಲಿ ವಲಸೆ ಹಕ್ಕಿ ಇದ್ದ ಹಾಗೆ. ಈ ವಿದೇಶೀ ಹಕ್ಕಿಗಳು ಏನು ಮಾಡುತ್ತವೆ... ಯಾವ ದೇಶದಿಂದಲೋ ಇಲ್ಲಿಗೆ ಹಾರಿಬರುತ್ತವೆ. ಇಲ್ಲಿನ ಹುಲ್ಲು, ಕಸ, ಕಡ್ಡಿ ಆಯ್ದು ತಂದು ಗೂಡು ಕಟ್ಟುತ್ತವೆ. ಗೂಡಿನೊಳಗೆ ಮೊಟ್ಟೆ ಇಟ್ಟು ಕಾವಿಗೆ ಕೂರುತ್ತವೆ. ಮರಿ ಮಾಡುತ್ತವೆ. ಆ ಮರಿಗಳಿಗೆ ನಮ್ಮ ದೇಶದ ಮೀನನ್ನೇ ಕೊಟ್ಟು ರೆಕ್ಕೆ ಬರಿಸುತ್ತವೆ. ನಂತರ ಮಕ್ಕಳುಮರಿ ಸಮೇತ ತಮ್ಮ ದೇಶಕ್ಕೆ ಹಾರಿ ಹೋಗುತ್ತವೆ. ಅದೇರೀತಿ ಈ ಬಚ್ಚನ್ ಸಾಹೇಬರು ಎಲ್ಲಿಂದಲೋ ಬಂದು ಮುಂಬಯಿ ಸೇರಿಕೊಂಡರು. ಬಾಲಿವುಡ್‌ನಲ್ಲಿ ಹಣ ಗೋರಿಕೊಂಡರು. ಅದನ್ನೆಲ್ಲ ಉತ್ತರ ಪ್ರದೇಶದಲ್ಲಿ ಚೆಲ್ಲುತ್ತಾ ಕುಂತರು! ಇದನ್ನು ನೋಡಿಯೂ ಸುಮ್ಮನಿರಲಾದೀತೆ ಮಹಾರಾಷ್ಟ್ರ ಮಹಾ ನಾಯಕರು? ಅವರ ಹೊಟ್ಟೆ ಉರಿಯಲ್ಲವೆ? ಆದರೂ ಮರ್ಯಾದೆಗೆ ಅಂಜಿ ಬಾಯಿಬೀಗ ಹಾಕಿಕೊಂಡಿದ್ದರು. ಮಹಾನ್ ನಾಯಕಮಣಿಗಳು ಹೀಗೆ ಕುಳಿತಿದ್ದರೂ 'ಮಹಾರಾಷ್ಟ್ರವೇ ಇಹ ಮಹಾರಾಷ್ಟ್ರವೇಪರ' ಅಂತ ಬಾಯಿ ಬೊಂಬಾಯಿ ಮಾಡಿ ಅರಚುವ ಯುವ ನಾಯಕ ರಾಜಠಾಕ್ರೆ ಸಾಹೇಬರು ಸಿಡಿದೆದ್ದರು. 'ಆತನೇನು ಮಾಡಿದ್ದಾನೆ ಮಹಾರಾಷ್ಟ್ರಕ್ಕೆ' ಎಂದು ಕಿಡಿಕಾರಿದರು. ಏನೋ ಎಳಸು ಮುಂಡೇದು ಮೂಳೆ ಇಲ್ಲದ ನಾಲಿಗೇನ ಹರಿಬಿಟ್ಟದೆ ಅಂತ ಸುಮ್ಮನಿದ್ದರೂ ಆಗುತ್ತಿತ್ತು, ಅಮಿತಾಭ್ ಬಚ್ಚನ್ ಸುಮ್ಮನಿದ್ದರೂ ಅವರ ಹೆಂಡತಿ ಬಾಯಿ ಮುಚ್ಚಬೇಕಲ್ಲ, 'ಯಾರು ಈ ರಾಜಠಾಕ್ರೆ' ಅಂತ ಕೇಳಿ ಬಿಡೋದೆ!

ಎಂತಹ ಉದ್ಧಟತನದ ವರ್ತನೆ!

ಸಿಡಿದೆದ್ದಿತು ಮಹಾರಾಷ್ಟ್ರ ನವನಿರ್ಮಾಣ ಸೇನೆ!

ಹಾಕಿತು ಸಿಂಹನಾದ ಉತ್ತರ ಭಾರತದ ಮಂದಿಗೆ! ತಮ್ಮ ಹಿರಿಯ ನಾಯಕ ಬಾಳಠಾಕ್ರೆ ಹಾಕಿಕೊಟ್ಟಿದ್ದ ಮಾರ್ಗ ಇತ್ತಲ್ಲ.... 'ಪುಂಗಿ ಬಜಾವ್ರೋ ಲುಂಗಿ ಹಟಾವ್ರೊ.' ಅದರಂತೆ ಕೂಗಿತು 'ಉತ್ತರ ಭಾರತ್ ಮಂದಿ ಹಟಾವ್ರೊ!'

ಬರೀ ಕೂಗಿದರೆ ಹಟಾವ್ರೊ ಆಗುವುದೆ ಉತ್ತರಭಾರತ ಮಂದಿ?

ಗಲಭೆ, ದೊಂಬಿ ಮಾಡಿತು. ಧ್ವಂಸ ಮಾಡಿತು ಪೆಟ್ಟಿಗೆ ಅಂಗಡಿಗಳ, ಟ್ಯಾಕ್ಸಿಗಳ! ನೀಡಿದರು ಅವರಿಗೆ ಧರ್ಮದೇಟು!

ಅರೆ ಇವರೆಲ್ಲ ಹೊಟ್ಟೆಪಾಡಿಗೆ ಬಂದವರಲ್ಲವೆ? ಮುಂಬಯಿಯ ಹಿಡಿತ ಇವರ ಕೈಯ್ಯಲ್ಲಿದೆಯೆ? ಅದಿರುವುದು ಬೆರಳೆಣಿಕೆಯ ಮೇಲ್ವರ್ಗದ ಗುಜರಾತಿ, ಸಿಂಧಿ, ಬನಿಯಾಗಳ ಕಪಿಮುಷ್ಟಿಯಲ್ಲಿ ಅಲ್ಲವೆ?

ಈ ಶ್ರೀಮಂತರೆಲ್ಲ ಐಷಾರಾಮಿ ಬಂಗಲೆಗಳಲ್ಲಿ, ಬಿಗಿ ಭದ್ರತೆ ನಡುವೆ ಇರುತ್ತಾರೆ. ಅವರು ಸಿಗಬೇಕಲ್ಲ ಇವರ ಕೈಗೆ? ಯಾರು ಸುಲಭವಾಗಿ ಸಿಗುತ್ತಾರೋ ಅವರ ಮೇಲೆ ದ್ವೇಷ ತೀರಿಸಿಕೊಳ್ಳಬೇಕು! ಅವರನ್ನು ಬಿಟ್ಟುಬಿಟ್ಟರೆ ಗಲಭೆ ನಡೆಸಿದ್ದಕ್ಕೆ ಸಾರ್ಥಕತೆಯಾದರೂ ಏನು!



ಇವರೆಲ್ಲ 'ಹಿಂದೂ ದೇಶ', 'ಅಖಂಡ ಭಾರತ' ಅಂತ ಸಾರುವವರೇ ಅಲ್ಲವೆ? ಹೌದು. ಈಗಲೂ ಅದನ್ನೇ ಹೇಳುತ್ತಾರೆ. ಆದರೆ ಅವರ ಕಲ್ಪನೆಯ 'ಹಿಂದೂ ದೇಶ' 'ಬ್ರಾಹ್ಮಣ ದೇಶ!' 'ಅಖಂಡ ಭಾರತ'ದ ಗಡಿಗಳೂ ಕುಗ್ಗುವುದು, ಹಿಗ್ಗುವುದು ಸಮಯ ಸಂದರ್ಭಕ್ಕೆ ತಕ್ಕಂತೆ!

* * *

ಲೋಕಾಯುಕ್ತರು ಇರುವುದು ಯಾತಕ್ಕೆ?

ಭ್ರಷ್ಟರನ್ನು ಬಲಿ ಹಾಕುವುದಕ್ಕೆ.

ಹಾಕಲಿ. ಇದಕ್ಕೆ ಯಾರ ಅಭ್ಯಂತರವೂ ಇಲ್ಲ.

ಸಣ್ಣಪುಟ್ಟ ಮೀನುಗಳನ್ನು ಬಲೆಗೆ ಬೀಳಿಸಿಕೊಳ್ಳಲಿ. ಆದರೆ ಐಎಎಸ್, ಐಪಿಎಸ್ ಮಾಡಿರೋ ತಿಮಿಂಗಲಗಳನ್ನೇ ಹಿಡಿಯಲು ಹೊರಟರು ಅಂದರೆ.... ಅವರಿಗೇನು ಗೊತ್ತಿರುತ್ತೆ ಪಾಪ ಈ ಸಾಹೇಬರುಗಳ ಸಂಕಟ. ನನ್ನ ಅಳಿಯ ಸಾಹೇಬರಾಗೋನು ಅಂತ ಮಾವ ಅನ್ನಿಸಿಕೊಂಡವನು ಕೈತುಂಬ ವರದಕ್ಷಿಣೆ ನೀಡಿ ಮುದ್ದಾದ ಮಗಳ ಕೊಟ್ಟಿರುತ್ತಾನೆ. ಆ ಹೆಣ್ಣುಮಗಳೂ ಹಣ ಅನ್ನೋದು ತಿಜೋರಿಗಟ್ಟಲೆ ಬಂದು ಸುರೀತದೆ; ಆಳುಕಾಳುಗಳ ಮೇಲೆ ದರ್ಬಾರು ಮಾಡುತ್ತಾ ಮಹಾರಾಣಿಯ ಹಾಗೆ ಮೆರೆಯಬಹುದು ಅಂತ ಕನಸು ಕಾಣುತ್ತಲೇ ಅವರ ಕೈಹಿಡಿದಿರುತ್ತಾಳೆ. ತನಗಾಗುವ ಮಕ್ಕಳು ಚಿನ್ನದ ಚಮಚ ಕಚ್ಚಿಕೊಂಡೇ ಹುಟ್ಟಬೇಕು, ರಾಜಕುಮಾರನಂತೆಯೇ ಜೀವನ ನಡೆಸಬೇಕು ಅಂತೆಲ್ಲ ಬಯಕೆ ಪಟ್ಟಿರುತ್ತಾಳೆ. ಮಾವನಿಗೆ ತಕ್ಕ ಅಳಿಯನಾಗಿ, ಹೆಂಡತಿಗೆ ಅನುರೂಪವಾದ ಗಂಡನಾಗಿ ಬಾಳಬೇಕು ಅನ್ನೋದು ನ್ಯಾಯವೇಯ. ಹೀಗೆ ಬಾಳಬೇಕಾದರೆ ಸಂಬಳ ಅಂತ ಬರೋದು ಏನೇನೂ ಸಾಲದು. ಹಾಗಾಗಿ ಇತರೆ ಮೂಲಗಳನ್ನ ಹುಡುಕುವುದು ಅನಿವಾರ್ಯವೇ ಆಗಿಹೋಗುತ್ತೆ, ಇದಕ್ಕೆ ಲೋಕಾಯುಕ್ತರು ಅಡ್ಡಿಬರುತ್ತಾರೆ ಅಂದರೆ.....

ಸಿಡಿದೆದ್ದಿತು ಸಾಹೇಬ ಗಣ!

ಏನು ಮಾಡಿತು ಅದು?

ಈಗ ಮಾಡಿದ್ದೀರಲ್ಲ ಅಧಿಕಾರಿಗಳ ಮೇಲೆ ದಾಳಿ, ಅದರ ವಿವರ ನೀಡಿ ಅಂತ ಲೋಕಾಯುಕ್ತರನ್ನು ಕೇಳಿಸಿತು!

ಕೇಳಿಸಿತು ಸರಿ. ಯಾರು ಕೇಳಿದ್ದು?

ಸರ್ಕಾರದ ಮುಖ್ಯ ಕಾರ್ಯದರ್ಶಿ!

ಲೋಕಾಯುಕ್ತ ಮುಖ್ಯ ಕಾರ್ಯದರ್ಶಿ ಅಧೀನರೆ?

ಅಲ್ಲ ಆದರೇನಂತೆ? ಇಲ್ಲದ ಅಧಿಕಾರ ಚಲಾಯಿಸಿತು! ಕಾಪಾಡಬೇಕಲ್ಲ ಭ್ರಷ್ಟ ಅಧಿಕಾರಿಗಳನ್ನ!

ತಮಾಷೆಯ ಸಂಗತಿ ಅಂದರೆ ಲೋಕಾಯುಕ್ತರಿ[...] ಕಳುಹಿಸಿದ ಪತ್ರದ ಒಕ್ಕಣೆಯೇ ಮುಖ್ಯ ಕಾರ್ಯದರ್ಶಿ[...] ಗೊತ್ತಿರಲಿಲ್ಲವಂತೆ; ಗೊತ್ತಿಲ್ಲದೆ ಅವರು ಸಹಿ ಹಾಕಿದ್ದರಂ[...]

ಬಹಳ ಹಿಂದೆಯೇ ರಾಶಿ ಅವರು ಬರೆದಿದ್ದ ಒಂದ[...] ಹಾಸ್ಯಬರಹದ ತುಣುಕು ಹೀಗಿದೆ:

ಒಬ್ಬ ಯುವಕ ಎಸ್.ಎಸ್.ಎಲ್.ಸಿ. ಪರೀಕ್ಷೆಯ[...] ಉತ್ತೀರ್ಣನಾಗದೆ ಕೆಲಸ ಹುಡುಕಲು ಆರಂಭಿಸಿದನಂ[...] ದೊಡ್ಡ ಹುದ್ದೇದಾರರಲ್ಲಿ ಹೋಗಿ ತನ್ನ ಗೋ[...] ಹೇಳಿಕೊಂಡನಂತೆ. ತನ್ನ ಸಂಸಾರದ ಭಾರವನ್ನು ತಾನೊಬ್ಬ[...] ಹೊರಬೇಕೆಂದೂ, ದೊಡ್ಡ ಹುದ್ದೇದಾರರು ದಯಮಾ[...] ಕೆಲಸ ಕೊಡಿಸಿದರೆ ತನ್ನ ಸಂಸಾರವೂ ತಾನ[...] ಉಪವಾಸದಿಂದ ಪಾರಾಗುವರೆಂದೂ, ಇತೋ[...] ಶಯವಾಗಿ ಹುದ್ದೇದಾರರು ಚೆನ್ನಾಗಿ ಬಾಳಲೆಂದು ದೇವ[...]

ಅಣಕ

ಎಚ್.ಎಲ್. ಕೇಶವಮೂರ್ತಿ

ದಿನಾಲೂ ಮೊರೆಯಿಡುವೆನೆಂದೂ ಹೇಳಿಕೊಂಡನ[...] ಹುದ್ದೇದಾರರು ಮನ ಕರಗಿ ಕೇಳಿದರಂತೆ ನಿನಗೇ[...] ಪಾಸಾಗಿದೆ ಎಂದು. ಎಸ್.ಎಲ್.ಎಲ್.ಸಿ. [...] ಓದಿದ್ದೇನೆಂದು ಹೇಳಿದ ಯುವಕ.

'ಇನ್ನೇನಾದರೂ ವೃತ್ತಿ ಶಿಕ್ಷಣ ಉಂಟೆ?'

'ಇಲ್ಲ'

'ಕಷ್ಟಕರವಾದ ಕೆಲಸ ಮಾಡಲು ದೇಹದಾರ್ಢ್ಯವಿದೆಯೇ?'

'ಇಲ್ಲ ಆಗಾಗ್ಗೆ ಕರುಳು ಬೆದರುತ್ತೆ ನನಗೆ'

'ಮನೆಗೆಲಸ ನೋಡಲು ಬರುತ್ತಯೇ'

'ಇಲ್ಲ'

'ನೋಡಪ್ಪಾ ನಿನಗೇನೂ ಬಾರದು. ಅಂದಮೇ[...] ನೀನು ನಮ್ಮ ಸರ್ಕಾರದ ಸಿವಿಲ್ ಸೇರಬೇಕೇ. [...] ಇನ್ನು ಯಾವ ಜವಾಬ್ದಾರಿ ಕೆಲಸವೂ ನಿನ್ನಿಂದ ಸಾಗ[...] ಆ ಕೆಲಸ ಕೊಡಲು ನನಗೆ ಶಕ್ತಿ [...] ಶ್ರೀಮನ್ಮಹಾರಾಜರನ್ನೇ ಹೋಗಿ ಕೇಳಿಕೊ.'

ನಮ್ಮ ಮುಖ್ಯ ಕಾರ್ಯದರ್ಶಿಯವರೂ ಈ ಯುವ[...] ಜಾಯಮಾನದವರೇ ಇರಬೇಕು!

* * *

"ಅಂಗೆಯಿರಬಹುದು ಬುಡು, ಅದ್ರು ದ್ಯಾವೇಗೌಡ್ರಿಗೆ ಇಂಥೋರು ಸಿಗಬಹುದಲ್ವ, ಅದೇಳು."

"ಈಗಿದ್ದಿದ್ರಲ್ಲಿ ಇರಸೆ ಅವ್ರುನು ಕಂಡ್ರ, ಇನ್ನಾವೇದ್ದನೂ?" ಎಂದ ಕಾಳಮಾದ.

"ನಿಜ ದ್ಯಡಪ್ಪ, ನಿನ್ನ ಮಾತಿಗೆ ನಾವೇನೂ ಆನ್ಸರ್ ಮಾಡದಿಲ್ಲ, ನಮ್ಮೂರಲ್ಲಿ ನಿನ್ನೆದ್ರಿಗೆ ಯಾರೂ ಇಲ್ಲ, ಯಲ್ಲ ಸತ್ತು ಕೆಟ್ಟು ಹೋದ್ರು. ಅದೇ ತರ ನಿಮ್ಮ ದ್ಯಾವೇಗೌಡ್ರ ಎದುರಿಗೆ ಕರ್ನಾಟಕದಲ್ಲಿ ಯಾರೂ ಇಲ್ಲ, ಇಪ್ಪತ್ತು ತಿಂಗಳು ಮುಖ್ಯಮಂತ್ರಿಯಾಗಿದ್ದ ಅವ್ರುರ ಮಗನೂ ಇಲ್ಲ, ಏಳು ದಿನ ಮುಖ್ಯಮಂತ್ರಿಯಾಗಿದ್ದ ಎಡೂರಪ್ಪನೂ ಇಲ್ಲ" ಎಂದ ವಾಟಿಸ್ಸೆ.

"ಹೋಗ್ಲಿ ಕಾಂಗ್ರೆಸ್ಸಿನಲ್ಲಿ ಯಾವಿದ್ದವ್ರು?"

"ಅಲ್ಲೂ ಯಾವು ಇಲ್ಲ, ಅವ್ಕಲ್ಲ ಗೋಶಾಲಿಗೆ ಹ್ವಡಿಯೋ ದನಿದ್ದಂಗವೆ."

"ದನವೆ ಬುಡವ್ರು. ಏಟೇಟ ಗಾತ್ರ ಕ್ಯಚ್ಚಲು ಬುಟಗಂಡು ತಿರುಗ್ತವೆ ನೋಡು. ಅಂಗೆ ಕುಟುರೆ ವತ್ತಿಸಿಗಂಡದೆ."

"ಮುಂದೆ ಕಾಂಗ್ರೆಸ್‌ಗಾಡಿ ಹಿಂಬಾರದಿಂದ ದೂಕಿ ಏಳಂಗೆ ಕಾಣ್ತದಪ್ಪ."

"ಏಳದೆ ಇನ್ನೇನು ಮಾಡ್ತದೆ. ಆಟೊಂತರ ಜನ ತುಂಬಿಕಂಡ್ರೆ, ಇನ್ನು ಎಂ.ಪಿ. ಪ್ರಕಾಶನ ಕಡಿಯೋರೂ ಬಂದಾಗ ಏನಾದತೋ ಏನೊ?"

"ಪ್ರಕಾಶನ ಕಡಿಯೋರು ಕಾಂಗ್ರೆಸ್ಸಿಗೆ ಬಂದರೇ?"

"ಊ ದ್ವಡಪ್ಪ, ಏನಿಲ್ಲಾ ಅಂದ್ರು ಯರಡು ಡಜನ್ ಅವುರೆ ಆ ಪೂಲಿಷ್‌ಪೆಲೋಗಳು."

"ಅದ್ಯಾಕಯ್ಯ ಅಂಗಂತಿ?" ಎಂದ ಉಗ್ರಿ.

"ಪ್ರಕಾಶ್ ಡೆಲ್ಲಿಗೋದಾಗ ಅವುನ ಜ್ವತೆ ಇಪ್ಪತ್ತನಾಕು ಜನ ಇದ್ರು. ವಾಪಸು ಬಂದಾಗ ನಾಕ್ಕು ಜನ ಮಾತ್ರ ಮನೆತಕ್ಕೆ ಬಂದ್ರು. ಅಂಥಾ ಜನಗಳ ಕಟಿಗಂಡು ಕಾಂಗ್ರೆಸ್‌ಗೋಗದಕಿಂತ, ಮುತ್ತಿನಂತ ನಾಕು ಜನ ಕರಕಂಡು ತಾನು ಐದನೆ ವ್ಯಕ್ತಿಯಾಗಿ ಕಾಂಗ್ರೆಸ್ ಪಾರ್ಟಿ ಆಪೀಸತ್ರಕೋದ್ರೆ, ಯಾರಾರ ಸತ್ತಿರತರೆ ಹೊತ್ತಾಕಬವುದು" ಎಂದು ವಾಟಿಸ್ಸೆ ನಕ್ಕ. ಉಗ್ರಿ, ಜುಮ್ಮಿಯೂ ನಕ್ಕರು. ■

ಮಾಜಿ ಮಂತ್ರಿ ಎಂ.ಪಿ. ಪ್ರಕಾಶ್ ದೆಹಲಿಗೆ ಹೋಗಿದ್ದಾರೆ ಯಾಕೆ?

ಕಾಂಗ್ರೆಸ್ ಪಕ್ಷ ಸೇರಲು.

ಸುದ್ದಿ ಮಾಧ್ಯಮದಿಂದ ತಪ್ಪಿಸಿಕೊಳ್ಳಲು ಖಾಸಗಿ ಹೋಟೆಲಿನಲ್ಲಿ ತಂಗಿದ್ದಾರಂತೆ.

ಇವಲ್ಲ ಸುದ್ದಿ. ಪ್ರಕಾಶ್ ತನ್ನ ಬೆಂಬಲಿಗರೊಡನೆ ಈ ತಿಂಗಳ ಇಪ್ಪತ್ತೆರಡನೆಯ ತಾರೀಖು ಬಳ್ಳಾರಿಯಲ್ಲಿ ನಡೆಯುವ ಬೃಹತ್ ಸಭೆಯಲ್ಲಿ ಕಾಂಗ್ರೆಸ್ ಪಕ್ಷ ಸೇರುತ್ತಾರಂತೆ.

ಯಾಕೆ ಆ ದಿನವೇ ಆಗಬೇಕು?

ಅವರ ಆಪ್ತರ ಪ್ರಕಾರ ಅವತ್ತು 'ರಾಜಯೋಗ ಇದೆ!'

ಆ ದಿನ ತಪ್ಪಿದರೆ?

ಮಾರ್ಚ್ ಮೊದಲನೆ ವಾರದಲ್ಲಿ 'ರಾಜಯೋಗ' ಇದೆಯಂತೆ!

ಪ್ರಜಾಪ್ರಭುತ್ವದಲ್ಲಿ 'ರಾಜಯೋಗ' ಇರಬೇಕಾದ್ದು ಪ್ರಜೆಗೋ, ಪ್ರಜಾಪ್ರತಿನಿಧಿಗೊ?

ಮಾಜಿ ಸಮಾಜವಾದಿಗಳೇ ಉತ್ತರಿಸಬೇಕು!

ಈ ಮೂಢನಂಬಿಕೆ ಅನ್ನುವುದು ಯಾರನ್ನೂ ಬಿಟ್ಟ ಹಾಗೆ ಕಾಣುತ್ತಿಲ್ಲ.

ಷೇರು ಪೇಟೆ ನೋಡಿ.

ಇದರ ಕಚೇರಿ ಇರುವುದು ಮುಂಬಯಿಯಲ್ಲಿ. ಅಮೆರಿಕದ ವಾಲ್‌ಸ್ಟ್ರೀಟ್‌ನಲ್ಲಿ ಕಂಚಿನಗೂಳಿ ಪ್ರತಿಮೆ ಇದೆಯಂತೆ ಅನುಕರಣಾ ಪ್ರವೀಣರು ತಾನೆ ನಾವು. ಮುಂಬಯಿಯಲ್ಲೂ ಸೊಗಸಾದ ಕಂಚಿನಗೂಳಿ ಪ್ರತಿಮೆ ಸ್ಥಾಪಿಸಿದರು.

ಇಲ್ಲಿಯವರೆವಿಗೆ ಎಲ್ಲಾ ಸರಿಯಾಗಿತ್ತು.

ಪ್ರತಿಮೆ ಸ್ಥಾಪಿಸಿದ ನಂತರ ಷೇರುಪೇಟೆಯಲ್ಲಿ ದಿಢೀರ್ ಕುಸಿತ!

ಕುಸಿತಕ್ಕೆ ಕಾರಣವೇನು?

ಕಂಚಿನಗೂಳಿ!

ಅದನ್ನು ತೆಗೆಯಲು ಕೆಲವರ ಒತ್ತಾಯ.

ಆಯಿತು, ತೆಗೆದರು ಎಂದೇ ಭಾವಿಸೋಣ. ಏರುವುದೇ ಷೇರು ಪೇಟೆದರ?

ಇದಕ್ಕೆ ಉತ್ತರ ಬೇಕಿಲ್ಲ! ■

ಉಡುಪು, ಸಾಹಿತಿ

ಅದೇನವಳು ಭುಜದಿಂದ ಕೆಳಕ್ಕೆ ನೇತುಹಾಕಿಕೊಂಡಿರುವುದು? ಅಂದೆ. ನನ್ನ ಪಕ್ಕದಲ್ಲಿದ್ದವರು "ದುಪ್ಪಟ್ಟಾ" ಅಂದರು. ದುಪ್ಪಟ್ಟಾ? ಅದು ಆ ಡ್ರೆಸ್‌ಗೆ ಅತ್ಯಗತ್ಯವೆ? ಅಂದೆ. "ಅತ್ಯಗತ್ಯವೇನಿಲ್ಲ, ಹಾಕಿಕೊಂಡಿದ್ದರೆ ಚೆನ್ನಾಗಿರುತ್ತೆ" ಅಂದರು. ಮ್ಯಾಕ್ಸಿ, ಮಿನಿಗಳೆಲ್ಲ ಮುಗಿದು, ಲಂಗ, ಜಾಕೆಟ್ ಹೋಗಿ, ಚೂಡಿದಾರ್ ಕೂಡ ಹಿಂಜರಿದು ಈಗ ದೊಗಲೆ ಪ್ಯಾಂಟ್, ಸಡಿಲ ಮೇಲಂಗಿ, ಲಂಬಾಣಿ ಕನ್ನಡಿಗಳ, ಕೆಂಪು, ಚಿನ್ನದ ಬಣ್ಣದ ಬಟ್ಟೆಗಳೆಲ್ಲ ಬಂದಿವೆ. ಒಂದರ್ಧ ನಸುಹಳದಿ, ಇನ್ನೊಂದರ್ಧ ಕೆಂಪು ಬಟ್ಟೆ ಹಾಕಿದ ಹುಡುಗಿ....ಇದೆಲ್ಲ ಯಾಕೆ ಕೇಳುತ್ತಿದ್ದೇನೆ? ನಮ್ಮ ಕಾಲದಲ್ಲಿ ಲಂಗ ದಾವಣಿ ಅತ್ಯಂತ 'ಹಾಟ್' ಫ್ಯಾಶನ್. ಅದು ಕೂಡ ಸಿನಿಮಾದಿಂದ ಬಂದ ಉಡುಪು. ಅದಕ್ಕಿಂತ ಹಿಂದೆ ನಾವೆಲ್ಲ ಶಿವಮೊಗ್ಗ ಸುತ್ತಮುತ್ತ ನೋಡುತ್ತಿದ್ದುದು ಸೀರೆ, ಕುಪ್ಪಸ. ಬ್ರಾ, ಪೆಟ್ಟಿಕೋಟ್‌ಗಳು ಇವೆ ಎಂದೇ ನಮಗೆ ಗೊತ್ತಿರಲಿಲ್ಲ, ದಪ್ಪ ಆದವಾನಿ ಸೀರೆ, ಅದರ ದಡಿಯೇ ಉಳ್ಳ ಕುಪ್ಪಸ ತೊಡುತ್ತಿದ್ದವಳು ನನ್ನ ತಾಯಿ. ಕುತೂಹಲದ ವಿಷಯವೆಂದರೆ, ಈ ಇಳಕಲ್ ಅಥವಾ ಆದವಾನಿ ಸೀರೆಯ ಸಂಸ್ಕೃತಿ ಮೈಸೂರಿನ ಗುಂಡ್ಲುಪೇಟೆಯಿಂದ ಬೀದರ್‌ನ ಕಲ್ಯಾಣದವರೆಗೆ- ಇತ್ತಾಕಡೆ ಬೆಳಗಾವಿಯ ಹಳ್ಳಿಯವರೆಗೆ.

ಸಾಹಿತ್ಯ ಲಿಟರೇಚರ್ ಅಂದರೆ ಒಂದು ಅರ್ಥ; ವಸ್ತು, ಸಾಮಗ್ರಿ, ಟಿಪ್ಪಣಿ, ತಿಳಿದುಕೊಳ್ಳಲು ಬೇಕಾದ ಅಂಶಗಳು. ಯಾವನೇ ದೊಡ್ಡ ಕಾದಂಬರಿಕಾರ ತನ್ನ ಕಾದಂಬರಿಯಲ್ಲಿ ಕುರ್ಚಿ, ಸೋಫಾ, ಉಡುಪು, ಒಡವೆ ಮುಂತಾದವುಗಳ ಹಂಗು ತೊರೆಯಲಾರ; ಅನೇಕ ಓದುಗರು ಮೊದಲು ಗಮನಿಸುವುದೇ ಕುರ್ಚಿ, ಉಡುಪು, ಒಡವೆ ಇತ್ಯಾದಿಯನ್ನು. ಸಾಹಿತಿ ತುಂಬ ಕುತೂಹಲದ ಮನುಷ್ಯನಾಗಿರಬೇಕು-ಇಲ್ಲದಿದ್ದರೆ ಅವನ ಕೈ ಸಾಗುವುದೇ ಇಲ್ಲ. ಮದುವೆಯನ್ನು, ಸಂಪ್ರದಾಯವನ್ನು ಟೀಕಿಸುವುದಕ್ಕೂ ಸಾಹಿತಿಗೆ ಮದುವೆ, ಸಂಪ್ರದಾಯ ಗೊತ್ತಿರಬೇಕು; ಒಂದು ಪಾತ್ರವನ್ನು ವರ್ಣಿಸಲು ಆ



ಪಾತ್ರದ ಅಭ್ಯಾಸ, ಆರೋಗ್ಯ ಕಾಯಿಲೆ, ಉಡುಪು, ನಂಬಿಕೆ, ಭಯ, ಕಾತರ ಎಲ್ಲ ಗೊತ್ತಿರಬೇಕು. ಸಾಮಾನ್ಯ ಕಾದಂಬರಿಕಾರ ಇಂಥವನ್ನು ಅಭ್ಯಾಸ ಮಾಡುತ್ತಾನೆ. ಯಂಡಮೂರಿಯ ಕಾದಂಬರಿಯಲ್ಲಿನ ಸೀರೆಗಳ ವರ್ಣನೆ, ಸೀರೆಗಳ ವೈವಿಧ್ಯತೆ, ಒಡವೆಗಳು, ಅವುಗಳು ಸಿಗುವ ಅಂಗಡಿ; ನಮ್ಮ ಅನೇಕ ಜನಪ್ರಿಯ ಕಾದಂಬರಿಕಾರರ ಕೃತಿಗಳಲ್ಲಿ ಇತ್ತೀಚಿನ ಶರಾಯಿ, ಶರ್ಟು, ಸೀರೆ, ಡ್ರೆಸ್‌ಗಳ ವರ್ಣನೆ. ಶೇಕ್ಸ್‌ಪಿಯರ್ ನಮಗೆ ಅದ್ಭುತ ಅನ್ನಿಸುವುದು ಆತನಿಗೆ ಗೊತ್ತಿರುವ ಚಿತ್ರವಿಚಿತ್ರ ವಿಷಯಗಳಿಂದ-ಕುಂಟನನ್ನು ಕಂಡು ನಾಯಿ ಬೊಗಳುತ್ತದೆ, ಯಹೂದ್ಯನ ವ್ಯಾಪಾರದ ನಿಯಮಗಳು,ಕ್ಲಿಯೋಪಾತ್ರಳ ನಿಗೂಢ ಸ್ಪಂದನಗಳು, ವಿಶಿಷ್ಟ ಋತುಗಳಲ್ಲೇ ಕಂಡುಬರುವ ಹಕ್ಕಿ, ಮಿಂಚು, ಗಿಡ ಎಲ್ಲವನ್ನೂ ಅರಿತಿದ್ದ ಶೇಕ್ಸ್‌ಪಿಯರ್.

ಬರೆಯುವವನ ಕಷ್ಟದಲ್ಲಿ ಡ್ರೆಸ್ ಒಂದು ಎಂಬುದಕ್ಕೆ ಹೇಳಿದೆ; ಒಂದು ಕತೆ ಬರೆಯುವಾಗ ಒಬ್ಬಳು ಹುಡುಗಿಯ ಹೊಸ ಡ್ರೆಸ್‌ಗಾಗಿ ಕಾತರ ಒಂದು ಕತೆಯ ವಸ್ತುವೇ ಆಗಬಲ್ಲದು; ಗುಮಾಸ್ತನೊಬ್ಬನ ವ್ಯಕ್ತಿತ್ವವೇ ಆತನ ಕೋಟಿನಿಂದ ಬದಲಾಗುವುದನ್ನು ಗೊಗಾಲ್‌ನ 'ಓವರ್‌ಕೋಟ್' ಕತೆಯಲ್ಲಿ ನೋಡುತ್ತೇವೆ.

ಈಗ....ಕಷ್ಟದ ಪ್ರಶ್ನೆ. ಹುಡುಗರು ಉಡುಪಿನ ಬಗ್ಗೆ ಹೆಚ್ಚು ಪ್ರಜ್ಞೆ ಉಳ್ಳವರೋ ಹುಡುಗಿಯರೋ? ವಿಚಿತ್ರವೆಂದರೆ ಗಂಡು, ಹೆಣ್ಣುಗಳಲ್ಲಿ ಹೆಚ್ಚು ರೆಕ್ಕೆ ಪುಕ್ಕದ ಪ್ರಾಣಿ ಗಂಡು; ಹುಂಜಕ್ಕೆ ಹೋಲಿಸಿದರೆ ಕೋಳಿ, ಗೂಳಿಗೆ ಹೋಲಿಸಿದರೆ ಹಸು, ಗಂಡು ನವಿಲಿನೆದುರು ಹೆಣ್ಣು ತುಂಬ ಬೋಳುಬೋಳು. ಹುಡುಗಿಯರು ಹುಡುಗರಿಗಿಂತ ಬೋಳು ಎಂದು ನಾನಂತೂ ಅನ್ನುವುದಿಲ್ಲ; ಪ್ರಾಣಿಗಳಂತಲ್ಲದೆ ಹೆಣ್ಣಿನ ವಿಶಿಷ್ಟ ಆಕಾರ ಡ್ರೆಸ್‌ನಲ್ಲಿ ಎದ್ದು ಕಾಣುತ್ತವೆ.

ಸಾಕೆಂದು ಕಾಣುತ್ತದೆ. ಎಷ್ಟಾದರೂ ಮಾತಾಡಬಹುದಾದ ವಸ್ತು ಇದು. ಹುಡುಗರ ಅಂಗಿ, ಶರಾಯಿಯಿಂದ ಹಿಡಿದು ಪ್ರಾಣಿಗಳ ತುಪ್ಪಳವನ್ನೆಲ್ಲ ಬಳಸುವ ಲಲನೆಯರು. ಅಂದಹಾಗೆ, ಅಗೋ ಆ ಹುಡುಗಿಯ ಮೇಲಂಗಿ ಸ್ವಲ್ಪ ದಪ್ಪವಾಗಿದೆ, ಅದು ಕೋಟೋ, ಅಂಗಿಯೋ? ಅದಕ್ಕೇನಂತಾರೆ?

ಮರೆಯುವ ಮುನ್ನ



■ ಪಿ. ಲಂಕೇಶ್ ಫೆಬ್ರವರಿ 18,1990

ವಿಮಾನ ವೈಭವ

ಮೇಲಿನದನ್ನು ಹೇಳುತ್ತಾ ಒಂದು ವಿಷಯ ನೆನೆದು ಲೆಕ್ಕಹಾಕುತ್ತೇನೆ. ಸೀರೆ-ಎಂಥ ವೈವಿಧ್ಯ ಮತ್ತು ಸುಲಭ ಬಟ್ಟೆ. ಅಕ್ಕನ ಸೀರೆ ತಂಗಿಗೆ, ತಂಗಿ ಸೀರೆ ಅತ್ತಿಗೆ, ಅಮ್ಮನಿಗೆ. ಒಂದೊಂದು ಮಧ್ಯಮ ಮೇಲು ವರ್ಗದ ಮನೆಯ ಒಡತಿಯ ವಾಡ್‌ರೋಬ್ ಅಥವಾ ಪೆಟ್ಟಿಗೆಯಲ್ಲಿ ನೂರಾರು ಸೀರೆಗಳು. ನಮ್ಮೂರಲ್ಲಿ ನೋಡಿದ್ದೇನೆ, ಹಳ್ಳಿಯ ಪೆಟ್ಟಿಗೆಯಲ್ಲಿ ನುಸಿ ಹೊಡೆದ, ಕತ್ತರಿಸಿದ, ಬಳಸದೆ ಹಾಳಾಗಿರುವ ಸಾವಿರಾರು ರೂಪಾಯಿ ಬೆಲೆಯ ಸೀರೆಗಳು. ಒಬ್ಬ ಹೆಣ್ಣುಮಗಳು ತನ್ನ ಅರವತ್ತು ವಯಸ್ಸಿನ ಜೀವನದಲ್ಲಿ 160 ಕ್ವಿಂಟಾಲ್ ಅಕ್ಕಿ ತಿಂದಿರುತ್ತಾಳೆ-(ನಗಬೇಡಿ) ಆರುನೂರು ಸೀರೆ ಬಳಸಿರುತ್ತಾಳೆ. ವರ್ಷಕ್ಕೆ ಹತ್ತೆಂದು ಲೆಕ್ಕ ಹಾಕಿದ್ದೇನೆ. ಆದರೂ ಲೆಕ್ಕ ಗೊತ್ತ? ಭಾರತದ ಮಿಲ್‌ಗಳಲ್ಲಿ ತಯಾರಾಗುವ ಸೀರೆಗಳನ್ನೆಲ್ಲ ಲೆಕ್ಕ ಹಾಕಿದರೆ ಒಬ್ಬೊಬ್ಬ ಹೆಂಗಸಿಗೆ ಒಂದೊಂದು ಸೀರೆ ಬರುವುದಿಲ್ಲ, ಉಡಲು ಏನೂ ಇಲ್ಲದ ಜನರೂ ಇದ್ದಾರೆ. ಇನ್ನೊಂದು ಕಡೆ ಇಂಗ್ಲೆಂಡಿನ ರಾಜಕುಮಾರಿ ಡಯಾನಾ ಒಮ್ಮೆ ಉಟ್ಟ ಬಟ್ಟೆ ಮತ್ತೆ ಉಡುವುದಿಲ್ಲ.


ಇದನ್ನು ಒಂದು ಉದ್ದೇಶದಿಂದ ಹೇಳುತ್ತಿದ್ದೇನೆ. ಸುಮಾರು ನಾಲ್ಕು ವರ್ಷದಿಂದ ಅಮೆರಿಕದ ಅಧ್ಯಕ್ಷ ಜಾರ್ಜ್ ಬುಶ್‌ಗೆಂದು ಎರಡು ವಿಮಾನ ತಯಾರಿಸುತ್ತಿದ್ದಾರೆ; ದೈತ್ಯಾಕಾರದ, ಎಲ್ಲ ಸೌಕರ್ಯದ, ಅರಮನೆಗಳಂಥ ವಿಮಾನಗಳು. ಕಕ್ಕಸುಗಳು, ಹಾಲ್‌ಗಳು, ವಿಶ್ರಾಂತಿ ಕೋಣೆಗಳು, ಕಾನ್‌ಫರೆನ್ಸ್ ರೂಮುಗಳು, ಮಲಗುವ ಕೋಣೆ, ವಿಡಿಯೋ ಥಿಯೇಟರ್, ಟೆಲಿಫೋನ್ ವಗೈರೆ ಎಲ್ಲ ಸೇರಿ ಒಂದೊಂದು ವಿಮಾನದ ತಯಾರಿಕೆಗೆ 650 ಮಿಲಿಯನ್ ಡಾಲರ್; ಅಂದರೆ ರೂ. 1300 ಕೋಟಿ. ಎರಡು ವಿಮಾನಗಳಿಗೆ ರೂ. 2600 ಕೋಟಿ-ಅಂದರೆ ಕರ್ನಾಟಕದ ಬಜೆಟ್. ಇದು ಅಮೆರಿಕದ ಸಣ್ಣ ನಗರದ ಬಜೆಟ್ ಕೂಡ. ಅಂದರೆ ನಾಲ್ಕು



ಕೋಟಿ ಜನಸಂಖ್ಯೆಯ ಯೋಗಕ್ಷೇಮಕ್ಕೆ ಬೇಕಾದಷ್ಟು ಹಣ ಈ ಬುಷ್ ಮಹಾಶಯನಿಗೆ. ಒಂದು ರಾಷ್ಟ್ರದ ಸೊಕ್ಕು ಮತ್ತು ಅಧ್ಯಕ್ಷನ ಪ್ರದರ್ಶನ ಎಲ್ಲಿಗೆ ಹೋಗಬಹುದೆಂಬುದನ್ನು ಇದು ತೋರುತ್ತದೆ.

ಅಮೆರಿಕನ್ನರೇ ಇದನ್ನು ತಮಾಷೆ ಮಾಡಿದ್ದಾರೆ. ಈ ವಿಮಾನ ನಿಲ್ದಾಣದಲ್ಲಿ ಎಷ್ಟು ಎತ್ತರ ಕಾಣುತ್ತದೆ ಮತ್ತು ನಾಚಿಕೆ ಹುಟ್ಟಿಸುವಷ್ಟು ದೊಡ್ಡದಾಗಿದೆ ಅಂದರೆ-ಹೊರಗೆ ಏಣಿ ಜೋಡಿಸಿದರೆ ಹಾಸ್ಯಾಸ್ಪದ. ಬುಶ್ ಮಹಾಶಯ ಆ ಏಣಿಯ ಮೂಲಕ ಇಳಿಯುತ್ತಿದ್ದರೆ ದೇವತೆ ಗೆಬ್ರಿಯಲ್ ಮೋಡಗಳಿಂದ ಇಳಿದಂತೆ ಕಾಣುತ್ತದೆ. ಆದ್ದರಿಂದ ಒಳಗಿಂದಲೇ ಇಳಿಯುವ ಏರ್ಪಾಟು ಮಾಡಿದ್ದಾರೆ.

ಹುಳಿಮಾವಿನಮರ



ಗೀಚಿದಷ್ಟು
ಗಾರು ಗುನ್ನಗಳ ಗುರುತು
ಹುಳಿ ಒಗರು ಚಿಗಿತು
ಎಲೆಎಲೆಯ ಕೊನರಿನಲೂ
ಹೋಳಿ ಹುಣ್ಣಿಮೆ ಮೋಡ ತೂಗಿ
ಕಾಲ ಸರಿದು ಹೋಯಿತು
....
ಚಿಗಿತ ಹೆಣ್ಣ ಮೊಲೆ ಕಡಿವ ತುಂಟ ಪೋರ
ನೀ ಹೋದ ಮರುಘಳಿಗೆಯಲಿ
ಬೆಂತರಗಳ ಕುಣಿತ ಆರ್ಭಟವೊ ಆರ್ಭಟ
ಏನು ಅವಸರವಿತ್ತೊ, ಯಾವ ಕೆಲಸ ಬಾಕಿ ಇತ್ತೊ
ಇಷ್ಟು ಬೇಗ ಹಿಂದಿರುಗುವ ದರ್ದು ಯಾವುದಿತ್ತೊ?

ಇಲ್ಲೀಗ ನಾವು ಜಟ್ಟಿ ಕೈಕಟ್ಟಿಸಿಕೊಂಡಂತೆ
ನಿನ್ನ ನೆನಪಿನ ತಳಮಳದಲ್ಲೆ
ಉಸಿರು ಬಿಗಿ ಹಿಡಿದು
ನಿನ್ನ ಬರುವಿನ ಹಾದಿ ಕಾದು
ಪುನರ್‌ಜನುಮದ ಆಲಾಪವೊ ಎದೆಯೊಳಗೆ

ನಮ್ಮ ಒಡಲ ಕಿಚ್ಚು ಕೆರಳಿ
ಇವರ ದ್ವೇಷಕ್ಕೆ ಅಸೂಯೆಗೆ
ಕಕ್ಕುಲಾತಿಯ ಸಣ್ಣತನಕ್ಕೆ
ಕುದಿಯುತ್ತಲೆ ಇದೆ
ಅಸಹನೆಯಲಿ ಬೆಂದು

ಮತ್ತೆಂದು ಬರುವುದೊ ವಸಂತ
ಹುಳಿಮಾವಿನ ಮರದ
ಒಗರು ಬಲಿಯಲು
ಬಲಿತು ಮಾಗಲು
ಮಾಗಿ ಪಕ್ವಗೊಳ್ಳಲು
....
ವಸಂತ ಬರದಿದ್ದರೆ
ಹಾಳಾಗಿ ಹೋಗಲಿ
ಈ ಮರದ ಕಂಪಿಗೆ
ನಾವು ಬಡಿಯದಿರಲಿ

■ ಗುಂಡಿಗೇರೆ ವಿಶ್ವನಾಥ

ನಮಾಜು ಮಾಡುವುದೂ...

(2ನೇ ಪುಟದಿಂದ)

ವ್ಯಾಖ್ಯಾನ ಸಮಕಾಲೀನ ರಾಜಕಾರಣದಲ್ಲಿ ನಾವು ನಿಂತ ನೆಲೆ ಏನು ಎಂಬುದನ್ನೇ ಆಧರಿಸಿರುತ್ತದೆ. ಹಸಿವಿನ ಸಾವುಗಳು, ರೈತರ ಆತ್ಮಹತ್ಯೆಗಳು, ಬದುಕಿನ ಕನಸುಗಳನ್ನೆಲ್ಲಾ ಕಮರಿಸುವ ನಿರುದ್ಯೋಗ, ಆದಿವಾಸಿಗಳ ಎತ್ತಂಗಡಿ, ಎಸ್.ಇ.ಜೆಡ್‌ಗಳು, ನಗರದ ಸುಂದರೀಕರಣದ ಹೆಸರಲ್ಲಿ ಗುಡಿಸಲುಗಳಿಗೆ ಬೀಳುವ ಬೆಂಕಿ ಎಲ್ಲವೂ ಶೋಷಕ ವ್ಯವಸ್ಥೆಯು ಅಸಹಾಯಕ ಜನರ ಮೇಲೆ ಮಾಡುತ್ತಿರುವ ವ್ಯವಸ್ಥಿತ ಭಯೋತ್ಪಾದನೆಯೇ ಆಗಿದೆ. ಈ ಶೋಷಕ ವ್ಯವಸ್ಥೆಯನ್ನು ರಕ್ಷಿಸುವ ಸಲುವಾಗಿ ಶಸ್ತ್ರಸಜ್ಜಿತ ಪ್ರಭುತ್ವ ಕಳೆದ ಅರವತ್ತು ವರ್ಷಗಳಲ್ಲಿ ನಡೆಸಿರುವ ಎಲ್ಲಾ ದಮನಗಳು ಜನರಲ್ಲಿ ಬದಲಾವಣೆಗೆ ಪ್ರಯತ್ನಿಸದಂತೆ ಬೆದರಿಸುವ ಭಯೋತ್ಪಾದನೆಯೇ ಆಗಿದೆ. ಗುಜರಾತ್ ಮಾದರಿ ಅಭಿವೃದ್ಧಿಗೆ ಅಡ್ಡಿಯಾದ ಜನತೆಯನ್ನು ದಮನಿಸಲು ಮೋದಿ ಗುಜರಾತಿನಲ್ಲಿ ತನ್ನ ಭಜರಂಗಿಗಳ ಜೊತೆ ಮತ್ತು ಪೊಲೀಸರನ್ನು ಬಳಸಿ ಮಾಡಿದ ನರಹತ್ಯೆ, ಎಡಪಂಥೀಯ ಅಭಿವೃದ್ಧಿಯ ಹೆಸರಲ್ಲಿ ನಂದಿಗ್ರಾಮದಲ್ಲಿ ಸಿಪಿಎಂ ಪಕ್ಷದ ಯುವ ಗೂಂಡಾಗಳು ಮತ್ತು ಪೊಲೀಸರು ನಡೆಸುತ್ತಿರುವ ನರಹತ್ಯೆ, ನರ್ಮದಾ ಕಣಿವೆಯಲ್ಲಿ ಅಭಿವೃದ್ಧಿಯ ಹೆಸರಲ್ಲಿ ಆದಿವಾಸಿಗಳ ಮೇಲೆ ಮಧ್ಯಪ್ರದೇಶ ಸರ್ಕಾರ ಮತ್ತು ಮಹಾರಾಷ್ಟ್ರ ಸರ್ಕಾರ ದಿನನಿತ್ಯ ನಡೆಸುವ ದೌರ್ಜನ್ಯ ಇವೆಲ್ಲವೂ ಪ್ರಭುತ್ವ ಭಯೋತ್ಪಾದನೆಗಳೇ ಆಗಿವೆ.

ಹಾಗೆ ನೋಡಿದರೆ ಜಗತ್ತಿನ ಎಲ್ಲಾ ಬಡಜನತೆಯ ವಿರುದ್ಧ ಎಲ್ಲಾದೇಶಗಳ ಶ್ರೀಮಂತರು ಮತ್ತು ಅವರ ಹಿಡಿತದಲ್ಲಿರುವ ಪ್ರಭುತ್ವ ಅಮೆರಿಕದ ನೇತೃತ್ವದಲ್ಲಿ ಯುದ್ಧ ಸಾರಿವೆ. ಹೀಗಾಗಿಯೇ ಅಮೆರಿಕದ ಭಯೋತ್ಪಾದಕರ ಪಟ್ಟಿಯಲ್ಲಿರುವುದು ಕೇವಲ ಕೆಲವು ಇಸ್ಲಾಮಿಕ್ ಭಯೋತ್ಪಾದನಾ ಸಂಘಟನೆಗಳಲ್ಲ, ಬದಲಿಗೆ ನೇಪಾಳ ದಲ್ಲಿ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ನಿರ್ಮಿಸಲು ಹೋರಾಡುತ್ತಿರುವ ಕಮ್ಯುನಿಸ್ಟರು, ಫಿಲಿಫೈನ್ಸ್ ಅಮೆರಿಕದ ನವವಸಾಹತು ಆಗಬಾರದೆಂದು ಹೋರಾಡುತ್ತಿರುವ ಹೋರಾಟಗಾರರು, ಅಮೆರಿಕಕ್ಕೆ ಸೆಡ್ಡು ಹೊಡೆದು ನಿಂತಿರುವ ವೆನಿಜುವೆಲಾದ ಶವೇಜ್, ಕ್ಯೂಬಾದ ಕ್ಯಾಸ್ಟ್ರೊ, ಇರಾನ್.... ಇವೆಲ್ಲವೂ ಅಮೆರಿಕದ ಪಾಲಿಗೆ ಭಯೋತ್ಪಾದಕರೇ. ಅಂದರೆ ಯುದ್ಧ ಸಿದ್ಧಾಂತವು ಈಗ ವಿಸ್ತರಿಸಿದೆ. ಅಮೆರಿಕದ ಸಾಮ್ರಾಜ್ಯಶಾಹಿ ವಿಸ್ತರಣೆಯನ್ನು, ಬಂಡವಾಳಶಾಹಿ ಶೋಷಣೆಯನ್ನು ಮತ್ತು ಆಯಾ ದೇಶಗಳಲ್ಲಿ ಸಮಪಾಲು-ಸಮಬಾಳಿನ ಬದುಕನ್ನು ಕನಸುವುದು ಎಲ್ಲವೂ ಭಯೋತ್ಪಾದನೆಯೇ!

ಜಗತ್ತಿನಲ್ಲಿ ಅಮೆರಿಕ ಸಾಮ್ರಾಜ್ಯದ ವಿಸ್ತರಣೆಗೆ ಕಮ್ಯುನಿಸ್ಟರು ಒಡ್ಡುತ್ತಿದ್ದ ಸವಾಲು ಕಡಿಮೆಯಾದ ಮೇಲೆ ಅಮೆರಿಕನ್ ಭಯೋತ್ಪಾದನೆಗೆ ಸವಾಲಾಗಿ ನಿಂತ



ಪೊಲಿಟಿಕಲ್ ಇಸ್ಲಾಮಿಕ್ ಸಂಘಟನೆಗಳನ್ನು ಅಮೆರಿಕ ಭಯೋತ್ಪಾದಕರೆನ್ನುತ್ತಿದೆ. ಅಲ್ಲದೆ ಹಲವಾರು ಇಸ್ಲಾಮಿಕ್ ಸಂಘಟನೆಗಳು ರಾಷ್ಟ್ರೀಯತೆಯ ಆಧಾರದಲ್ಲೂ ಅಮೆರಿಕನ್ ದಬ್ಬಾಳಿಕೆಯನ್ನೂ ಪ್ರಪಂಚದಾದ್ಯಂತ ವಿರೋಧಿಸುತ್ತಿವೆ. ಆದರೆ ಅಮೆರಿಕ ಇಸ್ಲಾಂ ಮತ್ತು ಮುಸ್ಲಿಂ ಎಂದರೆ ಕರ್ಮಠ ಮೂಲಭೂತವಾದಿಗಳು ಮತ್ತು ಆಧುನಿಕತೆಯ ಹಾಗೂ ಪ್ರಜಾತಂತ್ರ ವಿರೋಧಿಗಳು ಎಂದು ಚಿತ್ರಿಸಿ ತನ್ನ ಅತ್ಯಂತ ಪ್ರಜಾತಂತ್ರ ವಿರೋಧಿ ಮತ್ತು ಬರ್ಬರ ಭಯೋತ್ಪಾದನೆಗೆ ಸಮರ್ಥನೆಯನ್ನಾಗಿ ಬಳಸಿಕೊಳ್ಳುತ್ತಿದೆ. ಕೆಲವು ಅತ್ಯಂತ ಮೂಲಭೂತವಾದಿ ಇಸ್ಲಾಮಿಕ್ ಸಂಘಟನೆಗಳಿರುವುದು ನಿಜವೇ. ಆದರೆ ಅವಕ್ಕೆ ಶಸ್ತ್ರಾಸ್ತ್ರಗಳನ್ನು ಕೊಟ್ಟು ಮುಜಾಹಿದ್ದೀನ್‌ರಾಗಿ ಮಾಡಿದ್ದು ಅಮೆರಿಕವೇ. ಆದರೆ ಪ್ಯಾಲೆಸ್ತೀನ್‌ನಲ್ಲಿ, ಲೆಬನಾನ್‌ನಲ್ಲಿ, ಕಾಶ್ಮೀರದಲ್ಲಿ, ಕುರ್ದಿಸ್ತಾನ ಮತ್ತು ಇರಾನ್, ಇರಾಕ್‌ಗಳಲ್ಲಿ ಮೂಲಭೂತವಾದಿಗಳಲ್ಲದ ಆದರೆ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಇಸ್ಲಾಮಿಕ್ ಸಂಘಟನೆಗಳಿವೆ. ಆದರೆ ಅಮೆರಿಕಕ್ಕೆ ಈಗಲೂ ಹಲವಾರು ಕಟ್ಟರ್ ಮೂಲಭೂತವಾದಿ ಇಸ್ಲಾಮಿಕ್ ಸಂಘಟನೆಗಳ ಜೊತೆ ಸ್ನೇಹವೇ ಇದೆ. ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ಹೋರಾಡುತ್ತಿರುವ ಮುಸ್ಲಿಮರನ್ನು ಭಯೋತ್ಪಾದಕರೆಂದು ಕರೆಯುವ ಮೂಲಕ ಅಮೆರಿಕ ಅವರ ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನ ನಡೆಸಿದೆ.

ಅಮೆರಿಕದ ಜೊತೆ ಸ್ನೇಹದಿಂದಿದ್ದರೆ ಮುಷರಫ್ ನಂತ ಡಿಕ್ಟೇಟರ್, ಬಿನ್ ಲಾಡೆನ್‌ನಂಥ ಮೂಲಭೂತವಾದಿಗಳು ಪ್ರಜಾತಂತ್ರವಾದಿಗಳೇ. ಅಮೆರಿಕದ ಜೊತೆ ದ್ವೇಷ ಬೆಳೆಸಿಕೊಂಡರೆ ಸದ್ದಾಂನಂಥ ನಾಸ್ತಿಕನೂ ಇಸ್ಲಾಮಿಕ ಮೂಲಭೂತವಾದಿಯೇ. ಕ್ಯಾಸ್ಟ್ರೊ ಶವೇಜ್ ರಂಥ ಪ್ರಜಾತಾಂತ್ರಿಕವಾಗಿ ಚುನಾಯಿಸಲ್ಪಟ್ಟ ಜನಪ್ರತಿನಿಧಿಗಳೂ ಭಯೋತ್ಪಾದಕರೇ. ಹೀಗಾಗಿ ಇಲ್ಲಿ ಯಾರಾದರೂ ಭಯೋತ್ಪಾದಕ ಹೌದೇ ಅಥವಾ ಇಲ್ಲವೇ ಎಂಬುದು ತೀರ್ಮಾನವಾಗುವುದು ಅವರು ಅಮೆರಿಕದ ಯಾಜಮಾನ್ಯವನ್ನು ಒಪ್ಪಿಕೊಂಡಿದ್ದಾರೆಯೇ ಇಲ್ಲವೇ ಎಂಬುದರಿಂದ ಮಾತ್ರ.

ಹಿಂದೂ ಮೂಲಭೂತವಾದಿ ಸಂಘಟನೆಗಳು ಈ ದೇಶದಲ್ಲಿ ಹಲವಾರು ದಶಕಗಳಿಂದ ಭಯೋತ್ಪಾದನೆಯನ್ನು ನಡೆಸುತ್ತಲೇ ಬಂದಿವೆ. ಆದರೆ ಆ ಭಯೋತ್ಪಾದನೆಗಳು ಈ ದೇಶದ ಶೋಷಕರ ಪರವಾಗಿತ್ತು, ಶೋಷಣೆಯನ್ನು ಪ್ರತಿಭಟಿಸಿದ ಜನತೆಯ ವಿರುದ್ಧವಿತ್ತು. ಅದು ಎಂದಿಗೂ ಬ್ರಿಟಿಷ್ ವಸಾಹತುಶಾಹಿಗಳನ್ನಾಗಲೀ ಅಥವಾ ಈಗ ಅಮೆರಿಕನ್ ಸಾಮ್ರಾಜ್ಯಶಾಹಿಗಳನ್ನಾಗಲೀ ತನ್ನ ಶತ್ರುವೆಂದು ಭಾವಿಸಲಿಲ್ಲ, ಬದಲಿಗೆ ಅದು ಅಂದಿಗೂ ಇಂದಿಗೂ ಅಮೆರಿಕದ ಜಾಗತಿಕ ವಿಸ್ತರಣಾ ಯೋಜನೆಯಲ್ಲಿ ಅಮೆರಿಕದ ಸೈದ್ಧಾಂತಿಕ ಮಿತ್ರನಾಗಿದೆ. ಇಸ್ರೇಲಿನ ಯೆಹೂದಿ ಮೂಲಭೂತವಾದಿಗಳಂತೆ. ಹಿಂದೂ ಧರ್ಮ ಎಂದು ಕರೆಸಿಕೊಳ್ಳಲ್ಪಡುವ ಬ್ರಾಹ್ಮಣ ವೈದಿಕತೆ ಸಾರಾಂಶದಲ್ಲಿ ಒಂದು ಧರ್ಮವೇ ಅಲ್ಲ, ಅದೊಂದು ಸಾಮಾಜಿಕ ಮತ್ತು ರಾಜಕೀಯ ಕುತಂತ್ರ. ಅದು ಇತಿಹಾಸದುದ್ದಕ್ಕೂ ಮಾಡಿಕೊಂಡುಬಂದದ್ದೆಲ್ಲಾ ಭಯೋತ್ಪಾದನೆಯೇ. ಹೀಗಾಗಿ ಭಯೋತ್ಪಾದನೆಯೆಂಬುದು ಇಸ್ಲಾಮ್‌ಗೆ ಸೀಮಿತವಲ್ಲ. ಆದರೆ ಕೆಲವು ಇಸ್ಲಾಮಿಕ್ ರಾಜಕೀಯ ಸಂಘಟನೆಗಳು ಹಲವಾರು ಬಾರಿ ಹಲವಾರು ಮುತಿಗೆಟ್ಟ ಹಿಂಸಾತ್ಮಕ ಚಟುವಟಿಕೆ ಗಳನ್ನು ಮಾಡುತ್ತವೆ. ಅದರಿಂದ ಹಲವಾರು ಬಾರಿ ಅಮಾಯಕರ ಪ್ರಾಣಹಾನಿಯಾಗಿದೆ. ಇದು ಅವರ ಆಶಯಗಳಿಗೂ ದ್ರೋಹ ಬಗೆಯುತ್ತದೆ. ಅದೇರೀತಿ ಇದನ್ನು ಬಳಸಿಕೊಂಡು ಇಡಿ ಜನಾಂಗವನ್ನೇ ಬಗ್ಗುಬಡಿಯಲು ಅಮೆರಿಕನ್ ಭಯೋತ್ಪಾದಕರಿಗೆ ಅನುಕೂಲ ಮಾಡಿಕೊಡುತ್ತದೆ.

ಹೀಗಾಗಿ ಮಾರ್ಟಿನ್ ನೆಮ್ಯುಲರ್ ಎಂಬ ಜರ್ಮನ್ ಕವಿ ಯೆಹೂದಿಗಳ ನರಮೇಧ ನಡೆದಾಗ ಚಿತ್ರಿಸಿದ ಸ್ಥಿತಿಯಂತೇ ಇಂದಿನ ಪರಿಸ್ಥಿತಿಯೂ ಇದೆ. ಅವರ ಕವನವನ್ನೇ ಇಂದಿನ ಸ್ಥಿತಿಗೆ ಮಾರ್ಪಾಡು ಮಾಡಿ ಹೇಳುವುದಾದರೆ:

ಮೊದಲವರು ಅಸಾದುಲ್ಲಾನನ್ನು ಹುಡುಕಿಬಂದರು
ನಾನು ಸುಮ್ಮನಿದ್ದೆ, ಏಕೆಂದರೆ ನಾನು
ಮುಸ್ಲಿಮನಾಗಿರಲಿಲ್ಲ

ನಂತರ ಅವರು ಸಾಕೇತರನ್ನು ಕೊಂದು ಹಾಕಿದರು
ಆಗಲೂ ನಾನು ಸುಮ್ಮನಿದ್ದೆ, ಏಕೆಂದರೆ ನಾನು
ಹಿಂಸಾವಾದಿಯಾಗಿರಲಿಲ್ಲ

ನಂತರ ಅವರು ಆದಿವಾಸಿಗಳನ್ನು ಹುಡುಕಿಕೊಂಡು
ಬಂದರು
ನಾನು ಸುಮ್ಮನಿದ್ದೆ, ಏಕೆಂದರೆ ನನಗೆ ಎತ್ತಂಗಡಿಯ
ಭೀತಿಯಿರಲಿಲ್ಲ

ನಂತರ ಅವರು ವಿಠಲ್ ಹೆಗ್ಡೆಯಂತವರನ್ನು
ಹುಡುಕಿಬಂದರು,
ಆಗಲೂ ನಾನು ಸುಮ್ಮನಿದ್ದೆ, ಏಕೆಂದರೆ ಊರಿನ
ಉಸಾಬರಿ ಬೇಕಾಗಿರಲಿಲ್ಲ

ನಂತರ ಅವರು ದ್ವಾರಕನಾಥರಿಗೆ ದೇವಸ್ಥಾನದ
ಮೂತ್ರ ಕುಡಿಸಿದರು
ಆಗಲೂ ನಾನು ಸುಮ್ಮನಿದ್ದೆ, ಏಕೆಂದರೆ ನಾನು
ನಾಸ್ತಿಕನಾಗಿರಲಿಲ್ಲ

ನಂತರ ಅವರು 'ಸಂಸ್ಕಾರ'ಕ್ಕೆ ಬೆಂಕಿ ಹಚ್ಚಲು
ಬಂದರು
ಆಗಲೂ ನಾನು ಸುಮ್ಮನಿದ್ದೆ, ಏಕೆಂದರೆ ನಾರಣಪ್ಪ
ನನಗೆ ಕನಿಕರ ತೋರಿರಲಿಲ್ಲ

ಈಗವರು ನನ್ನ ಮನೆ, ಬದುಕು ದೈವಗಳನ್ನೇ
ಗುರಿಯಾಗಿಸಿಕೊಳ್ಳುತ್ತಿರುವಾಗ
ನನಗಾಗಿ ದನಿಯೆತ್ತುವವರು ಯಾರೂ
ಇದ್ದಂತಿಲ್ಲ!

ಸಂತರು, ಪ್ರವಾದಿಗಳು ತ್ರಿಕಾಲಜ್ಞಾನಿಗಳಾಗಿರಲಿಲ್ಲ!

ಒಂದು ಪತ್ರ

ಮಾನ್ಯರೆ,

ಭಾರತದಲ್ಲಿ ಮಾತ್ರ ಏಕೆ ಇಷ್ಟೊಂದು ಧಾರ್ಮಿಕ ಕಟ್ಟಳೆಗಳು, ವಿಧಿ ನಿಯಮಗಳು? ಇಷ್ಟೊಂದು ವಿಚಿತ್ರ ನಂಬಿಕೆಗಳು? ಎಂದು ಪ್ರಶ್ನಿಸಿದಾಗೆಲ್ಲಾ ಪಂಡಿತರಿಂದ ಸಿಗುತ್ತಿದ್ದ ತರ್ಕವಿಹೀನ ಉತ್ತರ "ಭಾರತ ಯೋಗ ಭೂಮಿ, ಪವಿತ್ರ ಭೂಮಿ" ಎಂದು. ವೈದಿಕ-ಮಠಾಧೀಶರುಗಳಲ್ಲಿ ಮೊಟ್ಟಮೊದಲ ಬಾರಿಗೆ ಪುತ್ತಿಗೆಶ್ರೀಗಳು ಸಾಗರೋಲ್ಲಂಘನೆ ವಿವಾದದ ಸಮಯದಲ್ಲಿ ಹೇಳಿದ್ದು: "ಭಾರತ ಮಾತ್ರವಲ್ಲ ಜಗತ್ತೆಲ್ಲಾ ಪವಿತ್ರ ಭೂಮಿ. ಕೇವಲ 100 ಕೋಟಿ ಭಾರತೀಯರು ಮಾತ್ರ ಪವಿತ್ರಾತ್ಮರಾಗಿದ್ದು ಉಳಿದ 500 ಕೋಟಿ ಜನರು ಪಾಪಿಷ್ಠರಾಗಿರಲು ಹೇಗೆ ಸಾಧ್ಯ?" (ಲಂಕೇಶ್ 30.1.08) ಪುತ್ತಿಗೆ ಶ್ರೀಗಳ ಈ ಮಾತು ಸಮಯವನ್ನು ಹಿಂದಕ್ಕೆ ಹಿಡಿದಿಡಲು ಪ್ರಯತ್ನಿಸುವ ಎಲ್ಲಾ ಮಠಾಧೀಶರುಗಳಿಗೆ ಪಾಠ. ಆದರೆ ಕೊನೆಗೆ ಪುತ್ತಿಗೆ ಶ್ರೀಗಳು ಉಳಿದ ಏಳು ಮಠಾಧೀಶರೊಂದಿಗೆ ಒಳಗಿಂದೊಳಗೆ ಒಪ್ಪಂದ ಮಾಡಿಕೊಂಡು ಪರ್ಯಾಯ ವಿಧಿ ಮುಗಿಸಿದ್ದು, ಉಡುಪಿ ದೇವಸ್ಥಾನಗಳನ್ನು ಈ ಎಂಟು ಜನರು ತಮ್ಮ ಖಾಸಗಿ ಆಸ್ತಿ ಎಂದು ಪರಿಗಣಿಸಿದ್ದಾರೆ ಎಂಬಂತಾಯಿತು. ಅಂದರೆ ಮನುಷ್ಯ ಇತಿಹಾಸದಿಂದ ಪಾಠ ಕಲಿಯುವುದಿಲ್ಲ ಎಂದು ಮತ್ತೊಮ್ಮೆ ಸಾಬೀತಾಯಿತು. ಕಾರಣ 400 ವರ್ಷಗಳ ಹಿಂದೆ ಕನಕದಾಸರ ವಿಷಯದಲ್ಲೂ ಇದೇ ಎಂಟು ಮಠಾಧೀಶರು ನಿರ್ಣಯ ಕೈಗೊಂಡು ಕನಕರನ್ನು ದೇವಸ್ಥಾನದಿಂದ ಹೊರದೂಡಿದ್ದು, ಆಗ ಸ್ವತಃ ದೇವರೇ ಇವರಿಗೆ ಮುಖ ತಿರುಗಿಸಿ ಪಾಠ ಕಲಿಸಿದ್ದರೂ ಇಂದಿಗೂ ಮಠಾಧೀಶರು ಪಾಠ ಕಲಿತಿಲ್ಲ.

ಭಾರತದಲ್ಲೇ ಹುಟ್ಟಿದ ಬೌದ್ಧ ಧರ್ಮ ಅರ್ಧ ಏಷ್ಯಾದಲ್ಲಿ ಹರಡಿದರೂ ಅದಕ್ಕಿಂತ ಹಳೆಯ ಹಿಂದೂ ಧರ್ಮ ನಮ್ಮಲ್ಲೇ ಉಳಿಯಲು, ಕೊಳೆಯಲು, ಕಾರಣಗಳು ಎರಡು. ಒಂದನೆಯದು ಭಾರತದ ಹೊರಗಿನವರೆಲ್ಲಾ ಪಾಪಿಷ್ಠರು, ಅಜ್ಞಾನಿಗಳು ಎಂಬ ಭಾವನೆ. ಎರಡನೆಯದು ಹಿಂದೂ ಧರ್ಮ ಶಾಶ್ವತವಾಗಿ ಮುಚ್ಚಿದ ಬಾಗಿಲು. ಅಂದರೆ ಇತರೆ ಧರ್ಮೀಯರನ್ನು ಹಿಂದೂ ಧರ್ಮ ಸ್ವೀಕರಿಸಬಾರದು ಎನ್ನುವ ನಿಯಮ. ಇದಕ್ಕೆ ಕಾರಣ ಇತರ ಧರ್ಮೀಯರು ಹಿಂದೂಗಳಾದರೆ ಅವರನ್ನು ಯಾವ ಜಾತಿಯೊಳಗೆ ಸೇರಿಸುವುದು ಎನ್ನುವ ದೊಡ್ಡ ಪ್ರಶ್ನೆ. ಕಾರಣ ಎಲ್ಲಾ ಜಾತಿಗಳೂ ತಮ್ಮ ಸುತ್ತ ಗೋಡೆ ಕಟ್ಟಿಕೊಂಡವುಗಳೇ ಆಗಿವೆ.

ಇನ್ನು ಮಠಾಧೀಶರುಗಳು ಸಾಗರೋಲ್ಲಂಘನೆ ಮಾಡಬಹುದೇ, ಬಾರದೇ ಎನ್ನುವ ಪ್ರಶ್ನೆಗಿಂತ ಮುಖ್ಯ ಈ ನಿಯಮ ಮಾಡಿದ ಆಚಾರ್ಯರ ಜ್ಞಾನದ ಮಿತಿಯ ಪ್ರಶ್ನೆ. ಧರ್ಮಗಳನ್ನು ಹುಟ್ಟುಹಾಕಿದ ಹಿಂದಿನ ಕಾಲದ ಜಗತ್ತಿನ ಸಂತ, ಆಚಾರ್ಯ, ಪ್ರವಾದಿಗಳ ಜ್ಞಾನದ ಮಿತಿಯನ್ನು ನಾವು ಈಗಿನವರು ಪ್ರಶ್ನಿಸಬಾರದು ಎನ್ನುವ ನಮ್ಮ ಮಾನಸಿಕ ಗೋಡೆಯನ್ನು ಕೆಡವಿದರೆ ಉತ್ತಮ. ಜಗತ್ತಿನ ಎಲ್ಲೆಡೆ ಧರ್ಮಕ್ಕೂ ತರ್ಕಕ್ಕೂ ಬದ್ಧವೈರ ಎಂಬುದು ಎಲ್ಲರಿಗೂ ಗೊತ್ತು. ಹಾಗಾಗಿ ಧಾರ್ಮಿಕ ನಂಬಿಕೆಗಳ ತಾರ್ಕಿಕ ಹಿನ್ನೆಲೆ ಕೇಳುವುದು ವರ್ಜ್ಯ. ಆದರೂ ಸಮಾಜದ ಸ್ವಾಸ್ಥ್ಯ ಕೆಡಿಸುತ್ತಿರುವ ವಿವಾದಗಳ ಹಿನ್ನೆಲೆ ಪ್ರಶ್ನಿಸಲೇಬೇಕು. 13 ನೇ ಶತಮಾನದಲ್ಲಿ ಈ ಸಾಗರೋಲ್ಲಂಘನೆ ನಿಯಮ ಮಾಡುವಾಗ ಮಧ್ವಾಚಾರ್ಯರಿಗೆ ಅಥವಾ ಇತರ ಧಾರ್ಮಿಕ ಪಂಡಿತರಿಗೆ ಸಾಗರದಾಚೆ ಎಷ್ಟು ಖಂಡ, ಎಷ್ಟು ದೇಶಗಳಿವೆ, ಎಷ್ಟು ನದಿ-ಸಮುದ್ರಗಳಿಗೆ ಎಂಬ ಜ್ಞಾನವಿತ್ತೇ? ಈ ಜಗತ್ತಿನಲ್ಲಿ ಸಾವಿರಾರು ಭಾಷೆಗಳಿವೆ, ಹತ್ತಾರು ಧರ್ಮಗಳಿವೆ, ಕರಿಯ-ಬಿಳಿಯ ಜನಾಂಗದವರಿದ್ದಾರೆ, ನಮ್ಮಷ್ಟೇ ಮುಂದುವರಿದ ಸಂಸ್ಕೃತಿ ಈಜಿಪ್ತ್, ರೋಮ್, ಚೀನಾ, ಪೂರ್ವ ಏಷ್ಯಾ ದೇಶಗಳಲ್ಲಿ ಇತ್ತು ಎನ್ನುವ ಜ್ಞಾನ ಮಧ್ವಾಚಾರ್ಯರಿಗೆ ಇತ್ತೇ? ಕಾಣದ ದೇವರ ಆಕಾರಗಳೆಲ್ಲಾ ಗೊತ್ತಿತ್ತು ಎನ್ನುವ ಆಚಾರ್ಯರಿಗೆ ತಾವು ನಿಂತಿರುವ ಭೂಮಿಯ ಆಕಾರ ಗೊತ್ತಿತ್ತೆ? ಅದು ಬಿಡಿ, ನಮ್ಮದೇ ದೇಶದಲ್ಲಿ ಅಂದರೆ ನೆರೆಯ ಕೇರಳದಲ್ಲಿ ಯಹೂದಿ ಹಾಗೂ ಕ್ರೈಸ್ತ ಧರ್ಮ ನೆಲೆಯೂರಿ ಆಗಲೇ 800 ವರ್ಷ ಕಳೆದಿತ್ತು, ಉತ್ತರ ಭಾರತದಲ್ಲಿ ಇಸ್ಲಾಂ ಧರ್ಮ ನೆಲೆಯೂರಿ ಆಗಲೇ 100 ವರ್ಷ ಆಗಿತ್ತು, ಆದರೂ ಮಧ್ವಾಚಾರ್ಯರಿಗೆ 'ನಿರಾಕಾರ-ಏಕದೇವೋಪಾಸನೆಯ' ಈ ವಿದೇಶಿ ಧರ್ಮಗಳ ಬಗ್ಗೆ ಜ್ಞಾನವಿದ್ದುದು ಎಲ್ಲಿಯೂ ಉಲ್ಲೇಖವಿಲ್ಲ. ಜಗತ್ತಿನ ಇತರ ದೇಶಗಳ ಬಗ್ಗೆ, ಇತರ ಧರ್ಮಗಳ ಬಗ್ಗೆ, ಭೌಗೋಳಿಕ, ಧಾರ್ಮಿಕ, ಜ್ಞಾನವಿಲ್ಲವೆಂದ ಮೇಲೆ ಮಠಾಧೀಶರುಗಳು ದ್ವಿಪಾಂತರ ಮಾಡಬಾರದೆನ್ನುವ ನಿಯಮ ಮಾಡಿದ್ದು ಯಾವ ಆಧಾರದ ಮೇಲೆ? ಸೀಮಿತ ಜ್ಞಾನದ ಆಧಾರದಲ್ಲಿ ಮಾಡಿದ ನಿಯಮಗಳ ಅವಧಿಯೂ ಸೀಮಿತ. ಜನರ ಜ್ಞಾನದ ಮಿತಿ ಹೆಚ್ಚಿದಂತೆ ಈ 'ಸತ್ಸಂಪ್ರದಾಯ' ಎಂದು ಹಣೆಪಟ್ಟಿಯಿರುವ ಸವಕಲು ನಿಯಮಗಳೆಲ್ಲಾ ಸಮಾಧಿಯಾಗಲೇಬೇಕು.

ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಮಾಡಬಾರದು ಎನ್ನುವಂತಿದ್ದರೆ ಇಂದಿಗೂ ನಾವು ಭೂಮಿ ಚಪ್ಪಟೆಯಾಗಿದೆ, ಸೂರ್ಯನೇ ಭೂಮಿ ಸುತ್ತ ತಿರುಗುವುದು ಎಂಬುದನ್ನೇ ನೆಚ್ಚಿಕೊಳ್ಳಬೇಕಾಗುತ್ತದೆ. ಕಾರಣ ದೇವರೇ ಸ್ವತಃ ಬಹಿರಂಗಪಡಿಸಿದ ಪವಿತ್ರ ಗ್ರಂಥಗಳೆನ್ನಲಾದ- ಬೈಬಲ್, ಕುರಾನ್, ಯಹೂದಿ ಗ್ರಂಥಗಳು, ಅವೆಸ್ತಾ, ವೇದ-ಉಪನಿಷತ್ತುಗಳಲ್ಲೆಲ್ಲಾ ಪೃಥ್ವಿ ಚಪ್ಪಟೆಯಾಗಿದ್ದು ಒಂದೇ ಕಡೆ ನಿಂತಿದೆ, ಸೂರ್ಯನೇ ಭೂಮಿ ಸುತ್ತಾ ತಿರುಗುವುದು ಎಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ (ಅಂದರೆ ಈ ಗ್ರಂಥಗಳನ್ನು ಬಹಿರಂಗಪಡಿಸುವಾಗ ತಾನೇ ಸೃಷ್ಟಿಸಿದ ಸೂರ್ಯ, ಪೃಥ್ವಿಗಳ ಆಕಾರ, ಚಲನೆಗಳನ್ನು ದೇವರು ಮರೆತ್ತಿದ್ದ ಎಂದಾಯಿತು). ವಿಜ್ಞಾನಿ ಗೆಲಿಲಿಯೋ ಭೂಮಿ ಗೋಲಾಕಾರವಾಗಿದೆ ಎಂಬ ಸಿದ್ಧಾಂತ ಮಂಡಿಸಿದಾಗ ಆಗಿನ 99% ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿತ್ತು. ಅವನನ್ನು ಗಲ್ಲಿಗೇರಿಸಬೇಕೆಂದು ಇಟಲಿಯ ಜನರೆಲ್ಲಾ ದಂಗೆ ಎದ್ದಿದ್ದರು. ಸ್ವತಃ ಸರ್ವೋಚ್ಚ ಪೋಪರೇ ಗೆಲಿಲಿಯೋ ಮೇಲೆ ಒತ್ತಡ ತಂದು, "ಬೈಬಲ್‌ನಲ್ಲಿ ಹೇಳಿರುವುದೇ ಸರಿ, ಭೂಮಿ ಚಪ್ಪಟೆಯಾಗಿದೆ, ತಾನು ಹೇಳಿದ್ದು ತಪ್ಪು" ಎಂದು ಮಾಫಿನಾಮ ಬರೆಸಿಕೊಂಡಿದ್ದರು. ಹಾಗಂತ ಇಂದಿನ ಪೋಪರು ಬೈಬಲ್‌ನಲ್ಲಿ ಬರೆದಿರುವಂತೆ ಭೂಮಿ ಚಪ್ಪಟೆಯಾಗಿದೆ ಎಂದು ವಾದಿಸುತ್ತಾರೆಯೇ? 15 ನೇ ಶತಮಾನದಲ್ಲಿ ಪೋಪರಿಗಿದ್ದ ಜ್ಞಾನದ ಮಿತಿಯೇ 13 ನೇ ಶತಮಾನದಲ್ಲಿ ಮಧ್ವಾಚಾರ್ಯರಿಗಿದ್ದಿದು.

ಎಲ್ಲಾ ಸಂತರು, ಪ್ರವಾದಿಗಳು, ಆಚಾರ್ಯರು ತ್ರಿಕಾಲ ಜ್ಞಾನಿಗಳಾಗಿದ್ದರು. ಅವರಿಗೆ ಹಿಂದಿನ, ಇಂದಿನ ಮುಂದಿನ ವಿಷಯಗಳೆಲ್ಲಾ ಗೊತ್ತಿತ್ತು, ಹಾಗಾಗಿ ಅವರು ಗಳು ಹೇಳಿದ್ದೆಲ್ಲಾ ತ್ರಿಕಾಲ ಸತ್ಯ ಎಂದು ವಾದಿಸುವವರು ಈ ಕೆಲ ಪ್ರಶ್ನೆಗಳಿಗೆ ಉತ್ತರಿಸಬಲ್ಲರೇ?- ವಾನರ-ಮಾನವ ಜಾತಿಯ ಪ್ರಾಣಿಗಳು ವಿಕಾಸಗೊಂಡು ಆಗಿದ್ದು ಕೇವಲ 2 ಲಕ್ಷ ವರ್ಷ. ನೇರ ಮರಿ ಹಾಕುವ ಸಸ್ತನಿಗಳು ಹುಟ್ಟಿ ಆಗಿದ್ದು ಕೇವಲ 15 ಲಕ್ಷ ವರ್ಷ. ಅದಕ್ಕಿಂತ ಮೊದಲು ಇದ್ದದ್ದು ಕೇವಲ ಮೊಟ್ಟೆಯಿಕ್ಕುವ ಜೀವಿಗಳು ಎಂದು ಸಂಶೋಧನೆಗಳಿಂದ ದೃಢಪಟ್ಟಿದೆ. ಆದರೆ ಈ ವಿಷಯ ಹಿಂದಿನ ಕಾಲದ ತ್ರಿಕಾಲ ಜ್ಞಾನಿ ಸಂತ-ಪ್ರವಾದಿ ಗಳಿಗೇಕೆ ಗೊತ್ತಿರಲಿಲ್ಲ? ಮಾನವರೇ ಇಲ್ಲದಿದ್ದಾಗ ಕೋಟ್ಯಂತರ ವರ್ಷ ಮಾನವರೂಪಿ ದೇವರೇನು ಮಾಡುತ್ತಿದ್ದ ಎಂದು ಯಾವುದಾದರೂ ಸಂತರು ವಿವರಿಸಿದ್ದಾರೆಯೇ? ಭಾಷೆಗಳು ಹುಟ್ಟಿ ಆಗಿದ್ದು ಕೇವಲ 15-20 ಸಾವಿರ ವರ್ಷ. ಅದಕ್ಕಿಂತ ಮೊದಲು ಅದ್ಯಾವ ಭಾಷೆಯಲ್ಲಿ ಮನುಷ್ಯ ದೇವರನ್ನು ಸ್ತುತಿಸುತ್ತಿದ್ದ, ಎಂದು ಯಾವುದಾದರೂ ಪ್ರವಾದಿ ಹೇಳಿದ್ದಾರೆಯೇ? ಪೃಥ್ವಿಗ್ರಹ ಉಂಟಾಗಿ 650 ಕೋಟಿ ವರ್ಷಗಳಾಗಿವೆಯಂತೆ. ಆದರೆ ಮನುಷ್ಯ-ಸಸ್ತನಿಗಳು ತೀರ ಇತ್ತೀಚಿಗೆ ಹುಟ್ಟಿರುವುದು ಎಂದಾದ ಮೇಲೆ, ಆ ದೇವರೇಕೆ 649 ಕೋಟಿ ವಿಳಂಬಿಸಿದ್ದು ತನ್ನದೇ ರೂಪದ ಮಾನವರನ್ನು, ಪ್ರಾಣಿ ಗಳನ್ನು ಸೃಷ್ಟಿಸಲು ಎಂದು ಕೇಳಿದರೆ ನಾಸ್ತಿಕ ಎಂಬ ಬಿರುದು ನಿಮಗೆ ಗ್ಯಾರಂಟಿ. ಈ ವಿಷಯಗಳ ಮೇಲೆ ತ್ರಿಕಾಲಜ್ಞಾನಿಗಳೆಂಬ ಬಿರುದು ಹೊತ್ತ ಸಂತರು ಪ್ರವಾದಿಗಳು, ಆಚಾರ್ಯರುಗಳು ಯಾಕೆ ಬೆಳಕು ಚೆಲ್ಲಲಿಲ್ಲ ಎಂದು ಆಸ್ತಿಕರಾರೂ ಕೇಳುವ ಧೈರ್ಯ ಮಾಡುವುದಿಲ್ಲ.

-ಪ್ರವೀಣ್. ಎಸ್. ಶೆಟ್ಟಿ, ಮಂಗಳೂರು



ತಾಯಿಯಾಗಲು ಒಪ್ಪದ ಶೃತಿ


'ಊರಿಗೊಬ್ಬಳೇ ಗಂಡ್ಸು' ಎಂಬಂತೆ ಈಗ ಬೆಳ್ಳಿತೆರೆಯ ಮೇಲೆ ಮಿಂಚುತ್ತಿರುವ 'ಅವ್ವ' ಶೃತಿ ಮತ್ತೆ ತಾಯಿಯಾಗಲು ಒಲ್ಲೆ ಎಂದಿದ್ದಾರೆ.

'ಅವ್ವ' ಹೆಸರೇ ಸೂಚಿಸುವಂತೆ ಈ ಚಿತ್ರದಲ್ಲಿ ತಾಯಿಯ ಪಾತ್ರವೇ ಮುಖ್ಯ. ಈ ಚಿತ್ರದ ಪವರ್‌ಫುಲ್ ತಾಯಿಯ ಪಾತ್ರವನ್ನು ದಕ್ಕಿಸಿಕೊಳ್ಳಲು ಕನಸು ಕಂಡವರು ಅದೆಷ್ಟೋ ನಟಿಯರು. ಆದರೆ ಈ ಪಾತ್ರ ಒಲಿದದ್ದು ಮಾತ್ರ ಶೃತಿಗೆ.

ಹಾಗಂತ ಈಗ ಗಾಂಧಿನಗರದಲ್ಲಿ ಸಿಕ್ಕಸಿಕ್ಕವರೆಲ್ಲಾ ಶೃತಿಯನ್ನು ತಾಯಿ ಪಾತ್ರಗಳಿಗೆ ಆಹ್ವಾನಿಸುತ್ತಿದ್ದಾರಂತೆ. ಕಾಮಿಡಿ ಟೈಂ ಗಣೇಶ್ ಮತ್ತು ವಿಜಯ ರಾಘವೇಂದ್ರನ ತಾಯಿಯಾಗಿ ನಟಿಸಲು ಆಫರ್‌ಗಳು ಬಂದಿವೆಯಂತೆ. ಆದರೆ ಶೃತಿ ಮಾತ್ರ ಸುತರಾಂ ಒಪ್ಪಿಲ್ಲ.

"ವಯಸ್ಸಿನಲ್ಲಿ ಗಣೇಶ ನನಗಿಂತಾ ಹಿರಿಯ. ಆತ ನನ್ನ ಅಣ್ಣ ಶರಣ್ ಜೊತೆಯವನು. ಆತನಿಗೆ ನಾನು ತಾಯಿಯಾಗಿ ನಟಿಸಿದರೆ ನನ್ನ ಇಮೇಜು ಏನಾಗಬೇಡ? ಹಾಗೇನಾದರೂ ನಾನು ಈ ಹುಡುಗರಿಗೆ ತಾಯಿಯಾಗಿ ನಟಿಸಿದರೆ ನನ್ನನ್ನು ಪರ್ಮನೆಂಟ್ ಮದರ್ ಮಾಡಿಬಿಡ್ತಾರೆ ಈ ಮಂದಿ" ಅನ್ನೋದು ಶೃತಿ ಅಂಬೋಣ.

ಶೆಣೈ 'ಮಾತೃಭೂಮಿ'ಯಲ್ಲಿ



ನಿಮ್ಮ ಈ 'ಲಂಕೇಶ್' ವಾರ ಪತ್ರಿಕೆಯ ಹಿರಿಯ ಪತ್ರಕರ್ತ ಸದಾಶಿವ ಶೆಣೈ ಮೊಟ್ಟಮೊದಲ ಬಾರಿಗೆ ಸಿನಿಮಾವೊಂದನ್ನು ನಿರ್ದೇಶಿಸುವ ಸಾಹಸಕ್ಕೆ ಮುಂದಾಗಿರುವುದು ನಮ್ಮೆಲ್ಲರಿಗೆ ಹೆಮ್ಮೆಯ ವಿಷಯ.

ಕಳೆದ ಆರೇಳು ವರ್ಷಗಳಿಂದ ತಮ್ಮ ಮನಸ್ಸಿನಲ್ಲೇ ಹೆಣೆದಿಟ್ಟಿದ್ದ ಕತೆಗೆ ಈಗ ಅಂತಿಮ ಟಚ್ ನೀಡುವ ಉತ್ಸಾಹದಲ್ಲಿದ್ದಾರೆ ಶೆಣೈ. ಐದಾರು ಜನ ಹೊಸ ನಟರು ನಾಯಕರ ಪಾತ್ರಗಳಲ್ಲಿ ನಟಿಸಲಿರುವ ಈ ಚಿತ್ರದಲ್ಲಿ ನಾಯಕಿಯದ್ದೇ ಪ್ರಧಾನ ಪಾತ್ರ. ಈ ನಾಯಕಿಯ ಪಾತ್ರಕ್ಕೆ ಪ್ರಿಯಾಂಕಾ ಚೋಪ್ರಾಳನ್ನೇ ಕರೆತರಬೇಕೆಂಬುದು ನಿರ್ದೇಶಕ ಶೆಣೈರ ಹೆಬ್ಬಯಕೆ. ಇದಿಷ್ಟೇ ಅಲ್ಲದೆ ಚಿತ್ರದಲ್ಲಿ ಚಿಕ್ಕದಾದರೂ ಅತಿ ಮುಖ್ಯವಾದ ಪಾತ್ರವೊಂದಿದೆಯಂತೆ. ಈ ಪಾತ್ರವನ್ನು ಶೆಣೈ ಯಾರಿಗೆ ನೀಡುತ್ತಾರೆ ಎಂಬ ಕುತೂಹಲ ಈಗ ಎಲ್ಲರದ್ದಾಗಿದೆ.

'ಮುಂಗಾರು ಮಳೆ'ಯ ಈ. ಕೃಷ್ಣಪ್ಪ ಈ ಚಿತ್ರವನ್ನು ನಿರ್ಮಿಸಲಿದ್ದು ಅದಕ್ಕೆ 'ಮಾತೃಭೂಮಿ' ಎಂದು ಹೆಸರಿಡಲಾಗಿದೆಯಾದರೂ ಇದೇ ಅಂತಿಮವಾದಂತಿಲ್ಲ.

ಶೆಣೈರವರ ಈ ಸಿನಿಮಾ ಕನಸು ದೊಡ್ಡದು. ಎಲ್ಲಕ್ಕಿಂತ ಮುಖ್ಯವಾಗಿ ಅವರ ಅನುಭವ ಇನ್ನೂ ದೊಡ್ಡದು. ಅವರ ಈ ಕನಸು ಸುಂದರವಾಗಿ ಮೂಡಿಬರುತ್ತದೆಂಬ ಭರವಸೆ ನಮ್ಮದು.

ಶೆಣೈ ಗೆಲ್ಲಲಿ ಎಂಬ ಆಶಯ 'ಲಂಕೇಶ್' ಬಳಗದ್ದು.

ಕಾಲದ ಮಹಿಮೆ!




ರಮ್ಯಾ ನಾಯಕಿಯಾಗಿದ್ದ 'ಅಮೃತಧಾರೆ' ಚಿತ್ರದಲ್ಲಿ ಕಾಮಿಡಿ ಟೈಮ್ ಗಣೇಶ ಒಂದು ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡಿದ್ದ. ಒಂದು ದಿನ ಈ ಚಿತ್ರದ ಚಿತ್ರೀಕರಣದ ವೇಳೆಯಲ್ಲಿ ಗಣೇಶ ತನ್ನ ತಾಯಿಯೊಂದಿಗೆ ಫೋನಿನಲ್ಲಿ ಮಾತನಾಡುತ್ತಿದ್ದನಂತೆ. ಇದನ್ನು ಕಂಡ ರಮ್ಯಾ "ಈ ಸೆಕೆಂಡ್ ಲೆವೆಲ್ ಆರ್ಟಿಸ್ಟುಗಳದ್ದೆಲ್ಲಾ ಇದೇ ರಗಳೆ. ಯಾವಾಗ ನೋಡಿದರೂ ಫೋನು ಹಿಡಿದುಕೊಂಡು ಆಟವಾಡುತ್ತಿರ್‍ತಾರೆ. ಚಿತ್ರೀಕರಣದಲ್ಲಿ ಹೇಗೆ ವರ್ತಿಸಬೇಕೆಂದೇ ಇವ್ರಿಗೆ ಗೊತ್ತಾಗೊಲ್ಲ" ಎಂದು ಟೀಕಿಸಿದ್ದಳಂತೆ.

ಆದರೆ ಈಗ ಕಾಲ ಬದಲಾಗಿದೆ. ಅಂದು ಯಾವ ಗಣೇಶನನ್ನು ರಮ್ಯಾ ಹೀಯಾಳಿಸಿದ್ದಳೋ ಇಂದು ಆತನೊಂದಿಗೇ 'ಬೊಂಬಾಟ್' ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾಳೆ. ಅವತ್ತಿನ ಘಟನೆಯ ಬಗ್ಗೆ ರಮ್ಯಾ ಮರೆತಿದ್ದರೂ ಗಣೇಶ್ ಮರೆತಿಲ್ಲವಂತೆ. ಅಂದರೆ ಈ ಚಿತ್ರದ ಚಿತ್ರೀಕರಣದ ಸಮಯದಲ್ಲಿ 'ಬೊಂಬಾಟ್' ಸುದ್ದಿಗಳು ಕೇಳಿಬರಬಹುದೇ?!

ಜಗ್ಗೇಶ್ ಮತ್ತು ನಾಗೇಶ್




ಜಗ್ಗೇಶ್ ಬಗ್ಗೆ ಉದ್ಯಮದಲ್ಲಿ ಒಬ್ಬೊಬ್ಬರೂ ಒಂದೊಂದು ರೀತಿ ಮಾತಾಡುತ್ತಾರೆ. ಆತ ಹುಂಬ, ಸಿಡುಕ, ದರ್ಪದ ವ್ಯಕ್ತಿ ಇತ್ಯಾದಿ... ಆದರೆ ಮೊನ್ನೆ 'ಸಿಐಡಿ ಈಶ' ಪತ್ರಿಕಾಗೋಷ್ಠಿಯಲ್ಲಿ ಜಗ್ಗೇಶ್ ತಮ್ಮ ನಿಜವಾದ ಬಣ್ಣ ತೋರಿಸಿದರು.



"ನನ್ನ ವೃತ್ತಿಯ ಆರಂಭದ ದಿನಗಳಲ್ಲಿ ನನ್ನನ್ನು ಎಲ್ಲಾ ಪತ್ರಿಕಾ ಕಚೇರಿಗೆ ಕರೆದುಕೊಂಡು ಹೋಗಿ, ಅಲ್ಲಿನ ವರದಿಗಾರರಿಗೆ ರೋಫ್ ಹೊಡೆದು ಅವರು ನನ್ನ ಫೋಟೋವನ್ನು ಪ್ರಕಟಿಸುವಂತೆ ಮಾಡುತ್ತಿದ್ದವರು ಈ ವ್ಯಕ್ತಿ" ಎಂದು ಜಗ್ಗೇಶ್ ಛಾಯಾಗ್ರಾಹಕ ಕೆ.ಎನ್. ನಾಗೇಶ್‌ಕುಮಾರ್ ಕಡೆ ಬೆರಳು ಮಾಡಿದರು. ಯಾವಾಗಲೂ ಪಾನಗೋಷ್ಠಿಗಳಲ್ಲಿ ಯಾರಾದರೊಬ್ಬರನ್ನು ಸಂಸ್ಕೃತದಲ್ಲಿ ಬೈಯುವುದನ್ನೇ ಅಭ್ಯಾಸ ಮಾಡಿಕೊಂಡಿದ್ದ ಜಗ್ಗೇಶ್ ಇಷ್ಟು ಸೂಕ್ಷ್ಮ ವ್ಯಕ್ತಿಯೇ ಎಂದು ಆಶ್ಚರ್ಯಪಡುವಂತಿತ್ತು ಅಂದಿನ ಅವರ ನಡವಳಿಕೆ.

ಜಗ್ಗೇಶ್ ಮಾತು ಕೇಳಿ ನಾಗೇಶ್‌ಕುಮಾರ್ ಇನ್ನಷ್ಟು ಉಬ್ಬಿಕೊಂಡಿದ್ದರು ಎಂಬುದು ಬೇರೆ ಮಾತು.



ಇದು ಅಂಬಟ್‌ರ ಬೊಂಬಾಟ್ ಅನುಭವ


'ಡೆತ್ ಆಫ್ ಮಧು ಅಂಬಟ್'. ಇದು ಹೊಸ ಚಿತ್ರವೊಂದರ ಹೆಸರು.

ಈ ಹೆಸರು ಕೇಳಿದಾಕ್ಷಣ ನಿಮ್ಮ ಮನಸ್ಸಿನಲ್ಲಿ ಏನೇನೋ ಊಹೆಗಳು ಬಂದು ಹೋಗಬಹುದು. ಯಾಕೆಂದರೆ ಮಧು ಅಂಬಟ್ ಭಾರತೀಯ ಚಿತ್ರರಂಗದ ಖ್ಯಾತ ಛಾಯಾಗ್ರಾಹಕರಲ್ಲೊಬ್ಬರು ಮಾತ್ರವಲ್ಲ ಅವರಿನ್ನೂ ಜೀವಂತವಾಗಿದ್ದಾರೆ. ಈಗ ಅವರ ಛಾಯಾಗ್ರಹಣದ, ಕವಿತಾ ಲಂಕೇಶ್ ನಿರ್ದೇಶನದ 'ಅವ್ವ' ಚಿತ್ರ ಎಲ್ಲೆಡೆ ಯಶಸ್ವಿಯಾಗಿ ಪ್ರದರ್ಶನಗೊಳ್ಳುತ್ತಿದೆ.

ಹಾಗಾದರೆ, 'ಡೆತ್ ಆಫ್ ಮಧು ಅಂಬಟ್' ಚಿತ್ರವನ್ನು ಯಾರು ಮಾಡುತ್ತಿದ್ದಾರೆ ಎಂಬ ಕುತೂಹಲ ಯಾರನ್ನಾದರೂ ಕಾಡುವುದು ಸಹಜ. ವಾಸ್ತವವಾಗಿ ಈ ಚಿತ್ರವನ್ನು ನಿರ್ಮಿಸುತ್ತಿರುವವರು, ನಿರ್ದೇಶಿಸುತ್ತಿರುವವರು, ಅದರ ಛಾಯಾಗ್ರಹಣ ಮಾಡುತ್ತಿರುವವರು ಬೇರೆ ಯಾರೂ ಅಲ್ಲ; ಸ್ವತಃ ಮಧು ಅಂಬಟ್ ಅವರೇ!

ಅವರೇ ಹೇಳುವ ಪ್ರಕಾರ ಈ ಚಿತ್ರ ಅವರ ಆತ್ಮಚರಿತ್ರೆಯೂ ಆಗಿದ್ದು ಮೊದಲ ದೃಶ್ಯದಲ್ಲಿಯೇ ಅಂಬಟ್ ಸಾಯುತ್ತಾರಂತೆ, ಕೊನೆಯ ದೃಶ್ಯದಲ್ಲಿ ಮತ್ತೆ ಎದ್ದು ಬರುತ್ತಾರಂತೆ. ಮೂವತ್ತೈದು ವರ್ಷಗಳ ಅವರ ವೃತ್ತಿಜೀವನದ ಅನುಭವ ಮತ್ತು ಅವರ ವೈಯಕ್ತಿಕ ಜೀವನದ ಮಜಲುಗಳು ಚಿತ್ರದುದ್ದಕ್ಕೂ ಕಾಣಿಸಲಿವೆಯೆಂದು ಹೇಳಿದರು ಮಧು ಅಂಬಟ್. ಅದೇನೇ ಇರಲಿ, ಒಂದು ವಿಚಿತ್ರವಾದ ಹೆಸರಿಟ್ಟು ಆತ್ಮಚರಿತ್ರೆಯನ್ನು ಹೇಳಲು ಹೊರಟಿರುವ ಮಧು ಅಂಬಟ್ ಕುತೂಹಲ ಮೂಡಿಸಿದ್ದಾರೆ. "ಬೊಂಬಾಟ್ ಆಗಿದೆ ನಿಮ್ಮ ಐಡಿಯಾ ಅಂಬಟ್" ಎಂದಷ್ಟೇ ಸದ್ಯಕ್ಕೀಗ ಹೇಳಬಹುದು.

ಕ್ಯಾಸೆಟ್ ಕಂಪನಿ ಕೃಷ್ಣಪ್ಪ!



'ಮುಂಗಾರು ಮಳೆ' ಚಿತ್ರದ ನಿರ್ಮಾಪಕ ಈ. ಕೃಷ್ಣಪ್ಪ ಈಗ 'ಮೊಗ್ಗಿನ ಮನಸ್ಸು' ಚಿತ್ರಕ್ಕಾಗಿ ಸ್ವಂತದ್ದೊಂದು ಆಡಿಯೋ ಕಂಪನಿ ಆರಂಭಿಸಿದ್ದಾರೆ. ಜನಪ್ರಿಯ ಹಾಡುಗಳನ್ನು ಹೊಂದಿದ್ದ 'ಮುಂಗಾರು ಮಳೆ'ಯ ಕ್ಯಾಸೆಟ್ಟು ಸೂಪರ್ ಡೂಪರ್ ಹಿಟ್ ಆಗಿದ್ದೇ ಕೃಷ್ಣಪ್ಪನವರು ಹೊಸ ಆಡಿಯೋ ಸಂಸ್ಥೆ ಹುಟ್ಟು ಹಾಕಲು ಕಾರಣವಾಗಿದೆ. ಅಂದಹಾಗೆ, ಇತ್ತೀಚಿಗೆ 'ದುನಿಯಾ' ಚಿತ್ರದ ನಿರ್ಮಾಪಕ ಸಿದ್ದರಾಜು ಸಹ ತಮ್ಮದೇ ಬ್ಯಾನರಿನ ಆಡಿಯೋ ಸಂಸ್ಥೆಯನ್ನು ಆರಂಭಿಸಿ, ತಮ್ಮ ಮಗ ಯೋಗೀಶ್ ಅಲಿಯಾಸ್ ಲೂಸ್ ಮಾದನ 'ನಂದ ಲವ್ಸ್ ನಂದಿತ' ಚಿತ್ರದ ಧ್ವನಿ ಸುರುಳಿಯನ್ನು ಬಿಡುಗಡೆಮಾಡಿದ್ದರು.

ಹೀಗೆ ಒಂದು ಚಿತ್ರದ ಆಡಿಯೋ ಯಶಸ್ಸಿನಿಂದ ಪ್ರೇರೇಪಿತರಾಗಿ ಕ್ಯಾಸೆಟ್ ಸಂಸ್ಥೆ ಆರಂಭಿಸಿದವರಲ್ಲಿ ಇವರು ಮೊದಲಿಗರೇನಲ್ಲ. ಹಿಂದೆ ರಾಮು ಮತ್ತು ರವಿಚಂದ್ರನ್ ಕೂಡ ತಮ್ಮ ಚಿತ್ರಗಳ ಕ್ಯಾಸೆಟ್‌ಗಳನ್ನು ಮಾರಾಟ ಮಾಡಲು ಸ್ವಂತ ಆಡಿಯೋ ಕಂಪನಿಗಳನ್ನು ತೆರೆದಿದ್ದರು. ಆದರೆ ಅವರ ಪಾಲಿಗೆ ಈ ಆಡಿಯೋ ಮಾರ್ಕೆಟ್ ಬರಕತ್ತಾಗಿರಲಿಲ್ಲ. ಈ ಕಟು ಸತ್ಯ ಕೃಷ್ಣಪ್ಪ ಮತ್ತು ಸಿದ್ದರಾಜುರ ಕಿವಿಗೆ 'ಇಂಪಾಗಿ' ಕೇಳಿಸದಿರದು.

'ತೀರ್ಥ', 'ಕಾಫಿ'ಯೂ ಈಗ ಸಿನಿಮಾ!

ಬರುವ ಮಂಗಳವಾರ 'ತೀರ್ಥ' ಮತ್ತು 'ಬೈಟು ಕಾಫಿ' ಎಂಬ ಎರಡು ಚಿತ್ರಗಳು ಸೆಟ್ಟೇರಲಿವೆ. ಅಕಸ್ಮಾತ್ ಈ ಚಿತ್ರಗಳು ಹಿಟ್ ಆದರೆ ಬರುವ ದಿನಗಳಲ್ಲಿ 'ಸಿಂಗಲ್ ಇಡ್ಲಿ', 'ಕಲಗಚ್ಚು', 'ಚಾಕ್ನಾ', 'ರಾಗಿಮುದ್ದೆ'.... ಮೊದಲಾದ ಹೆಸರಿನ ಚಿತ್ರಗಳು ಬಂದರೂ ಆಶ್ಚರ್ಯವಿಲ್ಲ, ಯಾಕೆಂದರೆ ಗೆದ್ದ ಚಿತ್ರವೊಂದರ ಸೂತ್ರ ಅನುಸರಿಸುವುದರಲ್ಲಿ ಗಾಂಧಿನಗರದವರು ಯಾವಾಗಲೂ ಸಿಕ್ಕಾಪಟ್ಟೆ ಮುಂದು!

ಹಿಂದೊಮ್ಮೆ 'ಪಾರ್ಥ'ನಾಗಿದ್ದ ಸುದೀಪ್ ಈಗ 'ತೀರ್ಥ' ನೀಡಲು ಬರುತ್ತಿದ್ದಾರೆ. 'ಏಕದಂತ' ಮತ್ತು 'ನಂದಿ' ಚಿತ್ರ ನಿರ್ಮಿಸಿದ್ದ ಶ್ರೀರಾಮ್ ಮತ್ತು ಗೆಳೆಯರು ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

ಈ ಹಿಂದೆ 'ಮಸಾಲಾ' ಎಂಬ ಚಿತ್ರ ನೀಡಿದ್ದ ದಯಾಳ್ ನೇತೃತ್ವದಲ್ಲಿ 'ಬೈಟು ಕಾಫಿ' ಸಿಗಲಿದೆ. ಈಗಾಗಲೇ ಪತ್ರಕರ್ತರಿಗೆ ಕಾಫಿ ಕಪ್ಪುಗಳನ್ನೇ ಮುಹೂರ್ತದ ಆಮಂತ್ರಣ 'ಪತ್ರ'ಗಳನ್ನಾಗಿ ಹಂಚಿರುವ ಈ ಚಿತ್ರದ ತಂಡ ಸಿನಿಮಾ ಬಿಡುಗಡೆಯಾಗುವ ಹೊತ್ತಿಗೆ ಎಲ್ಲರಿಗೂ ಸಾಕಷ್ಟು ಕಾಫಿ 'ಕುಡಿಸಿದರೆ' ಅಚ್ಚರಿ ಇಲ್ಲ.

'ತೀರ್ಥ'ದಿಂದ ಯಾರಿಗೂ ಶೀತವಾಗದಿರಲಿ, 'ಬೈಟು ಕಾಫಿ'ಯಿಂದ ಯಾರಿಗೂ ಉಷ್ಣವಾಗದಿರಲಿ!

ಅಮಾವಾಸ್ಯೆಯ 'ಬೆಳದಿಂಗಳು'!

ಫೆಬ್ರವರಿ 1ರಂದು ಕಪಾಲಿ ಚಿತ್ರಮಂದಿರದಲ್ಲಿ 'ಬೆಳದಿಂಗಳಾಗಿ ಬಾ' ಎಂಬ ಚಿತ್ರವೊಂದು ಬಿಡುಗಡೆಯಾಯಿತು. ಆದರೆ ಚಿತ್ರವನ್ನು ನೋಡಲು ಜನ ಮಾತ್ರ ಬರುತ್ತಿಲ್ಲ, ಪರಿಣಾಮವಾಗಿ, ಈ ಹಿಂದೆ ದೊಡ್ಡ ದೊಡ್ಡ ಚಿತ್ರಗಳನ್ನೇ ದಬ್ಬಾಕಿಕೊಂಡಿರುವ ಕಪಾಲಿಯಂತಹ ಕಪಾಲಿಯೇ ಗಾ... ಎನ್ನುತ್ತಿದೆ.

ಇದನ್ನು ಕಂಡ ಗಾಂಧಿನಗರದ ಹಲವು ಕಿಡಿಗೇಡಿಗಳು "ಹೋಗಿ ಹೋಗಿ ಈ ಅಮಾವಾಸ್ಯೆ ಟೈಮಿನಲ್ಲಿ 'ಬೆಳದಿಂಗಳಾಗಿ ಬಾ' ಎಂದರೆ ಅದೆಂಥಾ ಬೆಳದಿಂಗಳು ಬರ್‍ತದೆ" ಅಂತ ವಿಶ್ಲೇಷಿಸುತ್ತಿದ್ದಾರೆ.

ಒಟ್ಟಿನಲ್ಲಿ 'ಬೆಳದಿಂಗಳಾಗಿ...' ಚಿತ್ರದ ಕವಿದಿರುವುದು ಮಾತ್ರ ಸೂರ್ಯಗ್ರಹಣವೇ ಸತ್ಯ!

ಜಯಮಾಲಾ ಜೋಳಿಗೆಗೆ ಅಧ್ಯಕ್ಷಗಿರಿ



ಜಯಮಾಲಾ ಚುನಾವಣೆಯಲ್ಲಿ ನಿಲ್ಲದೇ ಜಯಮಾಲೆಯನ್ನು ಕೊರಳಿಗೆ ಹಾಕಿಕೊಂಡಿದ್ದಾರೆ.

ಅಂದರೆ, ಡಾ. ಜಯಮಾಲಾ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಬಗ್ಗೆ ಚುನಾವಣಾಧಿಕಾರಿ ಅಧಿಕೃತವಾಗಿ ಘೋಷಣೆ ಮಾಡುವುದಷ್ಟೇ ಬಾಕಿಯಿದೆ.

ಚಲನಚಿತ್ರರಂಗದ ಇತಿಹಾಸದಲ್ಲೇ ಮಹಿಳೆಯೊಬ್ಬರು ಈ ಅಧ್ಯಕ್ಷಸ್ಥಾನವನ್ನು ಅಲಂಕರಿಸುತ್ತಿರುವುದು ಇದೇ ಮೊದಲ ಬಾರಿ. ಅದೂ ಅವಿರೋಧವಾಗಿ ಆಯ್ಕೆಯಾಗುವ ಮೂಲಕ! ಪ್ರತಿಭಾ ಪಾಟೀಲ್ ರಾಷ್ಟ್ರದ ಅಧ್ಯಕ್ಷೆಯಾಗಿ ಆಯ್ಕೆಯಾದಾಗ ಇಲ್ಲೂ ಕೂಡ ಓರ್ವ ಮಹಿಳೆಯನ್ನು ಯಾಕೆ ಅಧ್ಯಕ್ಷೆ ಮಾಡಬಾರದು ಎಂದು ಕೆ.ಸಿ.ಎನ್.ಕುಮಾರ್ ಮೊದಲಾದವರು ಚಿಂತಿಸಿದ್ದು ಈಗ ನಿಜವಾಗಿದೆ.

ಜಯಮಾಲಾ ಹಲವಾರು ನಿಟ್ಟಿನಲ್ಲಿ ಉದ್ಯಮದ ಪಾಲಿ, ಮಾಜಿ ನಾಯಕಿಯರಿಗೆ ಮಾದರಿಯಾಗಿ ಬೆಳೆಯುತ್ತಿದ್ದಾರೆ. ಕಮರ್ಷಿಯಲ್ ಸಿನಿಮಾಗಳ ನಾಯಕಿಯಾಗಿ ರತಿವರ್ಚಸ್ಸು ಗಳಿಸಿದ್ದ ಈಕೆ ಆನಂತರ ಕಲಾತ್ಮಕ ಚಿತ್ರದ ನಾಯಕಿಯಾಗಿ ರಾಷ್ಟ್ರಪ್ರಶಸ್ತಿ ಗಳಿಸಿದ್ದರು. ಅದೇ ರೀತಿ ಈಗ ಮೊನ್ನೆ ಮೊನ್ನೆ ಡಾಕ್ಟರೇಟ್ ಪದವಿಯನ್ನು ಪಡೆದು ಎಲ್ಲರನ್ನೂ ಅಚ್ಚರಿಗೊಳಿಸಿದರು. ಡಾಕ್ಟರ್ ಆದ ನಂತರ ಈಗ ಕನ್ನಡ ಚಿತ್ರೋದ್ಯಮದ ಮುಖ್ಯ ಸಂಸ್ಥೆಯಾಗಿರುವ ಚೇಂಬರ್‌ನ ಅಧ್ಯಕ್ಷೆಯೂ ಆಗುತ್ತಿದ್ದಾರೆ.

ಎಲ್ಲರೊಂದಿಗೆ ಸರಳವಾಗಿ ಬೆರೆಯುವ ವ್ಯಕ್ತಿತ್ವದ ಜಯಮಾಲಾ ಅಗತ್ಯ ಬಿದ್ದಾಗ ಗಂಟೆಗಟ್ಟಲೆ ಜಗಳವಾಡುವ ಶಕ್ತಿಯನ್ನೂ ಹೊಂದಿದ್ದಾರೆ. ಹೀಗಾಗಿ ಇವರ ಅಧ್ಯಕ್ಷಾವಧಿಯಲ್ಲಿ ಛೇಂಬರ್‌ಅನ್ನು ಸೂಕ್ತ ದಿಕ್ಕಿನಲ್ಲಿ ಸಾಗಿಸುವುದರಲ್ಲಿ ಯಾವುದೇ ಸಂಶಯವಿಲ್ಲ.

ನಿದ್ರೆಯಿಂದ ಎದ್ದ ಸಂಘಟನೆಗಳು

ಕನ್ನಡ ಚಿತ್ರರಂಗದ ಎಲ್ಲಾ ಸಂಘ ಸಂಸ್ಥೆಗಳು ಇದ್ದಕ್ಕಿದ್ದಂತೆ ಸಕ್ರಿಯವಾಗಿ ಕೆಲಸ ಮಾಡಲು ಆರಂಭಿಸಿವೆ.

ಕಳೆದ ಹಲವಾರು 'ಶತಮಾನ'ಗಳಿಂದ ನಿದ್ರಾವಸ್ಥೆಯಲ್ಲಿದ್ದ ಕಲಾವಿದರ ಸಂಘ ಈಗ ಅಂಬರೀಷ್ ನೇತೃತ್ವದಲ್ಲಿ ಕೊನೆಗೂ ಎಚ್ಚರಗೊಂಡಿದೆ. ಚಾಮರಾಜಪೇಟೆಯಲ್ಲಿ ಸಂಘಕ್ಕಾಗಿ ಖರೀದಿಸಿದ್ದ ಜಾಗದಲ್ಲಿ ದೊಡ್ಡ ಕಟ್ಟಡ ಕಟ್ಟಲು ಹೊರಟಿದೆ. ಮೊನ್ನೆ ಬೋರ್‌ವೆಲ್ ತೆಗೆದು ನೀರು ಸಿಕ್ಕಿದೆ ಎಂಬುದು ಲೇಟೆಸ್ಟ್ ಸುದ್ದಿ.

ಹಾಗೆಯೇ ನಿರ್ದೇಶಕರ ಸಂಘ ಕೂಡಾ ವೆಸ್ಟ್ ಆಫ್ ಕಾರ್ಡ್ ರೋಡಿನಲ್ಲಿ ಒಂದು ಸೈಟ್ ಖರೀದಿಸಿ ಅಲ್ಲಿ ದೊಡ್ಡ ಭವನವನ್ನು ನಿರ್ಮಿಸುವ ಹಾದಿಯಲ್ಲಿದೆ. ನಿರ್ದೇಶಕರ ಸಂಘದ ಖಾಯಂ ಅಧ್ಯಕ್ಷ ಎಂಬಂತಿರುವ ರಾಜೇಂದ್ರಸಿಂಗ್ ಬಾಬು ಈಗ ಈ ಭವನಕ್ಕಾಗಿ ಸಿಕ್ಕಾಪಟ್ಟೆ ಓಡಾಡುತ್ತಿದ್ದಾರೆ. ಈ ಸಂಘದ ಕಟ್ಟಡದ ಸಹಾಯಾರ್ಥವಾಗಿ ಕಂಠೀರವ ಕ್ರೀಡಾಂಗಣದಲ್ಲಿ ಒಂದು ದೊಡ್ಡ ಮಟ್ಟದ ರಸಮಂಜರಿ ಕಾರ್ಯಕ್ರಮ ಕೂಡಾ ಹಮ್ಮಿಕೊಂಡಿದ್ದಾರೆ.

ಇವೆರಡು ಸಂಘಗಳು ಇಷ್ಟೊಂದು ಸಕ್ರಿಯವಾದ ನಂತರ ಲಕ್ಷ್ಮಿ ಪುತ್ರರಾದ ನಿರ್ಮಾಪಕರು ತಾವೇನು ಕಡಿಮೆ ಎಂದು ಅವರೂ ಮೈ ಕೊಡವಿ ಎಚ್ಚೆತ್ತುಕೊಂಡಿದ್ದಾರೆ. ನಿರ್ಮಾಪಕರ ಸಂಘದ ಅಧ್ಯಕ್ಷ ಸಂದೇಶ್ ನಾಗರಾಜ್ ಒಂದು ತುರ್ತು ಸಭೆಯನ್ನು ಕರೆದು ಕಟ್ಟಡ ಕಟ್ಟುವ ಬಗ್ಗೆ ಚರ್ಚೆ ನಡೆಸಿದ್ದಾರೆ. ಬಲ್ಲ ಮೂಲಗಳ ಪ್ರಕಾರ ಸಂದೇಶ್ ನಾಗರಾಜ್ ಸ್ಥಾನದಲ್ಲಿ ರಾಕ್‌ಲೈನ್ ವೆಂಕಟೇಶ್ ಅವರನ್ನು ಅಧ್ಯಕ್ಷರ ಕುರ್ಚಿಯಲ್ಲಿ ಕೂರಿಸುವ ಪ್ರಯತ್ನ ನಡೆಯುತ್ತಿದೆ.

ಈ ಮಧ್ಯೆ ಕಾರ್ಮಿಕರ ಸಂಘಟನೆಯ ನಾಯಕ ಅಶೋಕ್ ಕೂಡಾ ಜಿಲ್ಲಾ ಮಟ್ಟದಲ್ಲಿ ತಾರೆಯರ ಕ್ರಿಕೆಟ್ ಪಂದ್ಯವನ್ನು ಆಡಿಸಿ ಚಂದಾ ಎತ್ತುವ ಯೋಜನೆಯನ್ನು ಘೋಷಿಸಿದ್ದಾರೆ.

ಒಬ್ಬರು ಏನಾದರೂ ಮಾಡಲು ಹೊರಟರೆ ಎಲ್ಲರೂ ಅದನ್ನು ಅನುಸರಿಸುವುದು ಗಾಂಧಿನಗರದ [illegible]. ಅದು ಈ ಸಂಘಟನೆಗಳಿಗೂ ಅನ್ವಯಿಸುತ್ತಿರುವುದು ಆಶ್ಚರ್ಯ.

RBP LANKESH, Kannada Weekly Price Rs. 12/- 20-2-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.

ಭೈರಿಂತದ ಹಳ್ಳಿಗಳ ಬದುಕನ್ನು ಇಡಿಯಾಗಿ ಗ್ರಹಿಸಲು ಘಟನೆಗಳನ್ನು ಹಿಂದಿಧಿಡಬಲ್ಲ ಕಾದಂಬರಿಕಾರನ ನೆರವೂ ಬೇಕು. ಅದೇ ರೀತಿ ಅವನ್ನು ಅರ್ಥ ಮಾಡಿಕೊಳ್ಳಲು ಒಂದು ಜೀವನ ದೃಷ್ಟಿಯುಳ್ಳ ತಾತ್ವಿಕ ನೆಲೆಯೂ ಬೇಕು. ಪಿ.ಲಂಕೇಶರದ್ದು ಅವೆರಡೂ ಒಂದೇ ಕಡೆ ಮೇಳೈಸಿದ್ದ ವ್ಯಕ್ತಿತ್ವ. ಅವರು ಶಿವಮೊಗ್ಗ ಬಳಿಯ ಕೊನಗವಳ್ಳಿಯೆಂಬ ಹಳ್ಳಿಯಲ್ಲಿ ಬೆಳೆದ ಮೊದಲಿನ ವರ್ಷಗಳು. ಆ ನಂತರದ ಸಮಾಜವಾದಿ ಚಿಂತನೆ, ಚಳವಳಿ ಮತ್ತು ಸೃಜನಶೀಲ ಬರವಣಿಗೆಗಳ ಮೂಲಕ ಪಡೆದುಕೊಂಡ ಜೀವನ ದೃಷ್ಟಿ, ಇವೆಲ್ಲವನ್ನು ಎರಕ ಹೊಯ್ದು 'ಮುಸ್ಸಂಜೆ ಕಥಾ ಪ್ರಸಂಗ' ಎಂಬ ಗ್ರಾಮಾಯಣವನ್ನು ಬರೆದರು. ಅದನ್ನೇ ಕವಿತಾ ಲಂಕೇಶ್ ತಮ್ಮ ಪ್ರತಿಭೆ ಮತ್ತು ಶ್ರಮವನ್ನು ಎರಕ ಹೊಯ್ದು 'ಅವ್ವ' ಚಿತ್ರವನ್ನು ನಿರ್ದೇಶಿಸಿದ್ದಾರೆ.

ಹಳ್ಳಿಯೊಂದು ಹೇಗೆ ತನ್ನೊಳಗಿನಿಂದಲೇ ಕ್ಷಯಿಸುತ್ತಾ ತನ್ನ ಮುಸ್ಸಂಜೆಯನ್ನು ತಲುಪುತ್ತಿದೆ ಎಂಬುದು ಆ ಕಾದಂಬರಿಯ ಕೇಂದ್ರ ಕಾಳಜಿ. ಒಂದು ಹಳ್ಳಿಯಲ್ಲಿ ನಡೆದ ತಮಾಷೆ ಘಟನೆಗಳ ಆಳದ ಜಾತೀಯತೆ, ಹುಂಬತನ ಮತ್ತು ವಿಷಾದಕರ ವಂಚನೆಗಳಿಂದಾಗಿ ಹೇಗೆ ಕಂಬಳ್ಳಿ ವಿನಾಶದ ಅಂಚಿಗೆ ತಲುಪುತ್ತದೆ ಎಂಬುದನ್ನು ವಿವರಿಸುವ ಆ ಕಥೆಗೆ ಲಂಕೇಶರೇ ಹೇಳುವಂತೆ ಒಂದು ಹಂದರವೇ ಇಲ್ಲ, ಅವರ ಮಾತಿನಲ್ಲೇ ಹೇಳುವುದಾದರೆ ಅದು ನೆನಪಿನ ಲಹರಿಗೆ ತಕ್ಕಂತೆ ಲಂಗುಲಗಾಮಿಲ್ಲದೆ ಓಡುವ ವೃತ್ತಾಂತ. ಆದರೆ ಅದರ ಪ್ರತಿ ಪಾತ್ರದಲ್ಲೂ ಇಡಿ ಹಳ್ಳಿಯ ಆಂದಿನ ಸ್ಥಿತಿ ಉಸಿರಾಡುತ್ತದೆ. ಕನ್ನಡದಲ್ಲಿ ಗ್ರಾಮೀಣ ಹಂದರವನ್ನು ಇಟ್ಟುಕೊಂಡಿರುವ ಹಲವಾರು ಕಾದಂಬರಿಗಳು ಬಂದಿವೆ. ಆದರೆ ಅತ್ಯಂತ ಭಾವ ತೀವ್ರತೆಯಲ್ಲೂ ಬದುಕಿನ ವ್ಯಾವಹಾರಿಕ ಲೆಕ್ಕಾಚಾರವನ್ನು ಬಿಡದ, ಆದರೆ ಪ್ರತಿ ವ್ಯಾವಹಾರಿಕ ಕ್ಷಣದಲ್ಲೂ ಭಾವುಕ ನೆಲೆಯ ನೀತಿಗಳನ್ನು ಪಾಲಿಸುವ, ಏಕಕಾಲದಲ್ಲಿ ಸರಳವೂ ಮತ್ತು ಸಂಕೀರ್ಣವೂ ಆಗಿರುವ ಗ್ರಾಮಗಳನ್ನು ಅದರ ಒಟ್ಟಂದದಲ್ಲಿ ಚಿತ್ರಿಸಿರುವ ಲಂಕೇಶರ 'ಮುಸ್ಸಂಜೆ ಕಥಾ ಪ್ರಸಂಗ' ಯಾವುದೇ ರೂಪಾಂತರಕ್ಕೂ ಅತಿ ದೊಡ್ಡ ಸವಾಲನ್ನೇ ಹಾಕುತ್ತದೆ. ಅದರಲ್ಲೂ ಅದನ್ನು ಎರಡೂವರೆ ಘಂಟೆಗಳ ದೃಶ್ಯ ಮಾಧ್ಯಮಕ್ಕೆ ಅಳವಡಿಸಬೇಕೆಂದರೆ ಅದು ಸುಲಭದ ಮಾತಲ್ಲ. ಏಕೆಂದರೆ ಸರಳವಾಗಿದ್ದುಕೊಂಡೇ ಸಂಕೀರ್ಣತೆಯನ್ನು ಕಟ್ಟಿಕೊಡುವ ಕೆಲಸ ಎರಡು ಮಾಧ್ಯಮಗಳಲ್ಲಿ ಪ್ರವೇಶ, ಪರಿಣಿತಿ, ತಾದಾತ್ಮ್ಯ ಮತ್ತು ಶ್ರಮ ಇದ್ದರೆ ಮಾತ್ರ ಸಾಧ್ಯ.

ಕವಿತಾ ಲಂಕೇಶರು ಅಂತ ಸಾಹಸಮಯ ಪ್ರಯತ್ನವನ್ನು 'ಅವ್ವ' ಚಿತ್ರದಲ್ಲಿ ಮಾಡಿದ್ದಾರೆ. ಕನ್ನಡ ಕಾದಂಬರಿಗಳನ್ನು ಚಲನಚಿತ್ರವಾಗಿ ರೂಪಾಂತರವಾಗಿಸಿರುವ ಹಲವು ಚಿತ್ರಗಳು ಬಂದಿವೆ. ಇತ್ತೀಚೆಗೆ ಆ ಸಾಲಿನಲ್ಲಿ ಪ್ರಮುಖ ಸೇರ್ಪಡೆ 'ನಾಯಿ ನೆರಳು'. ಆದರೆ ಆ ಕಾದಂಬರಿಯಲ್ಲಿ ಒಂದು ಕೇಂದ್ರ, ಅದರ ಸುತ್ತಾ ಹೆಣೆದುಕೊಳ್ಳುವ ಘಟನೆಗಳಿದ್ದವು. ಮುಸ್ಸಂಜೆಯಲ್ಲಿ ಆ ಬಗೆಯ ಕೇಂದ್ರವೊಂದು ಇಲ್ಲದಿರುವುದರಿಂದ ಕವಿತಾ ಲಂಕೇಶರು ಲಿಂಗಾಯತ ವಿಧವೆ ರಂಗವ್ವ ಊರವರನ್ನು ಎದುರಿಸಿಕೊಂಡು ಬಡ್ಡಿ ವ್ಯವಹಾರ ನಡೆಸುತ್ತಾ ಬದುಕಿಗಾಗಿ ನಡೆಸುವ ಸಂಘರ್ಷದ ಮೂಲಕ, ಮತ್ತು ಅವಳ ಮಗಳು ಸಾವಂತ್ರಿ ಬ್ಯಾಡರ ಮಂಜನ ಜೊತೆ ನಡೆಸುವ ಹರೆಯದ ಪ್ರೇಮದ ಮೂಲಕ ಕಂಬಳ್ಳಿಯ ಕಥೆಯನ್ನು ನಿರೂಪಿಸುತ್ತಾರೆ.

ಆನೆಬಡ್ಡಿ ರಂಗವ್ವ ತನ್ನ ಬಡ್ಡಿ ವ್ಯವಹಾರದಿಂದಾಗಿ ನಿಷ್ಠುರವಾದಿ. ದೊಡ್ಡ ಗಾತ್ರದ ಆದರೆ ಹೆಂಡತಿಗೆ ಗಂಡನಾಗದ, ಇತರ ಹರಕತ್ತುಗಳ ಮೂಲಕ ತನ್ನ ಗಂಡಸುತನವನ್ನು ಸಾಬೀತು ಪಡಿಸಲು ಬಯಸುವ ಮೆಷೀನ್ ಭರಮಣ್ಣ, ಹರೆಯ ಬಂದು ನಾಲಕ್ಕು ವರ್ಷವಾದರೂ ಮದುವೆಯಿಲ್ಲದೆ, ಬ್ಯಾಡರ ಮಂಜನ ಜೊತೆ ಪ್ರೇಮಕೇಳಿ ನಡೆಸುವ ರಂಗವ್ವನ ಮಗಳು ಸಾವಂತ್ರಿ. ಚೆಲುವೆ ಸಾವಂತ್ರಿಯನ್ನು ಪಡೆಯಲಾಗದ ಸಂಕಟಕ್ಕೆ ಬ್ಯಾಡರ ಮಂಜನ ಜೊತೆಗಿನ ಅವಳ ವ್ಯವಹಾರವನ್ನು ಲಿಂಗಾಯತ ಜಾತಿ ಪ್ರತಿಷ್ಠೆಯ ರಾಜಕೀಯವನ್ನಾಗಿಸಿ ಆ ಕುಟುಂಬವನ್ನು ಊರಿಂದಲೇ ಓಡಿಸುವ ಸಂಚು ಹೂಡುವ ಭರಮಣ್ಣ ಮತ್ತವನ ದುಷ್ಟ ಮಂಡಳಿಯ ಕೀಳುತನ, ಇವೆಲ್ಲಕ್ಕೂ ಸಹಾಯವಾಗುತ್ತಾ ಆದರೆ ಅದೇ ಸಮಯದಲ್ಲಿ ಕುತೂಹಲದಿಂದ ತನ್ನದೇ ಲೋಕ ಕಟ್ಟಿಕೊಳ್ಳುವ ಹಳ್ಳಿಯ ಬಾಲ್ಯದ ಪ್ರತಿನಿಧಿ ಕರಿಯ, ಇದೆಲ್ಲದರಿಂದ ತನ್ನ ಅಸ್ತಿತ್ವಕ್ಕೆ ಸಂಚಕಾರ ಬರುತ್ತಿರುವುದನ್ನು ಅರಿತು ಊರಿನ ಸಮಸ್ತರೆದುರು ಉಗ್ರಾವತಾರ ತಾಳಿ ಬ್ಯಾಡರ ಮಂಜನ ಜೊತೆ ಸಾವಂತ್ರಿಯ ಮದುವೆ ಮಾಡಿಸಿ ಅವರೆಲ್ಲರ ಸಂಚನ್ನು ವಿಫಲಗೊಳಿಸಿ ದಿಗ್ಭ್ರಾಂತರನ್ನಾಗಿ ಮಾಡುವ ರಂಗವ್ವ. ಹೀಗೆ ಒಂದು ಹಳ್ಳಿಯ ಕಥೆ ಪಾತ್ರಗಳೊಂದಿಗೆ ಮತ್ತು ಘಟನೆಗಳೊಂದಿಗೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ.

ಕವಿತಾ ಲಂಕೇಶರು ಇದರ ಬಿಡಿಬಿಡಿ ವಿವರಗಳನ್ನು, ಅದರಲ್ಲೂ ಅಥೆಂಟಿಸಿಟಿಯೊಡನೆ ಕಟ್ಟಿಕೊಡುವಲ್ಲಿ ಸಫಲರಾಗಿದ್ದಾರೆ. ಪ್ರತಿಯೊಂದು ಪಾತ್ರಧಾರಿಯೂ ಆಯಾ ಪಾತ್ರಕ್ಕೆ ಹೇಳಿ ಮಾಡಿಸಿದಂತಿದ್ದಾರೆ. ರಂಗವ್ವನ ಪಾತ್ರದಲ್ಲಿ ಶ್ರುತಿ, ಭರಮಣ್ಣನ ಪಾತ್ರದಲ್ಲಿ ರಂಗಾಯಣ ರಘು ಇನ್ನು ಮುಂದೆ ಆಯಾ ಪಾತ್ರಗಳ ಹೆಸರಲ್ಲೇ ಕರೆಸಿಕೊಳ್ಳುವಷ್ಟು ಲೀನವಾಗಿದ್ದಾರೆ. ಮಂಜನ ಪಾತ್ರದಲ್ಲಿ, ವಿಜಯ್ ಒಳಗಿನ ಕಲಾವಿದ ಅವರೊಳಗಿನ ಹೀರೋನನ್ನು ಮರೆಸುವಷ್ಟು ಆಪ್ತವಾಗುತ್ತದೆ. ಕರಿಯನ ಪಾತ್ರಧಾರಿ ಮಾಸ್ಟರ್ ರಾಕೇಶ್ ಹುಟ್ಟು ಕಲಾವಿದನೆನ್ನುವುದು ಇನ್ನೊಮ್ಮೆ ಸಾಬೀತಾಗಿದೆ. ಸಾವಂತ್ರಿಯ ಪಾತ್ರಧಾರಿ ಸ್ಮಿತಾ ಅಂತೂ ಕವಿತಾರವರ ಕನ್ನಡ ಚಿತ್ರರಂಗದ ಹೊಸ ಮತ್ತು ಅತ್ಯಂತ ಭರವಸೆ ಮೂಡಿಸುವ ಶೋಧವೆಂದೇ ಹೇಳಬೇಕು. ಮಧು ಅಂಬಟ್‌ರ ಛಾಯಾಗ್ರಹಣ ಅದ್ಭುತ. ಚಿತ್ರದ ಸಂಕಲನವನ್ನು ಸುರೇಶ್ ಅರಸ್ ಉತ್ತಮವಾಗಿ ನಿರ್ವಹಿಸಿದ್ದಾರೆ.

ಪಿ. ಲಂಕೇಶ್ ಮತ್ತು ಚಂದ್ರೇಗೌಡರ ಸಂಭಾಷಣೆಯಲ್ಲಿ ಬಯ್ಗುಳ ಜಾಸ್ತಿಯಿದ್ದರೂ ಚಿತ್ರದ ಕತೆಗೆ ಅಗತ್ಯವಾಗಿದೆ. ಆದರೆ ಇದರ ಬಗ್ಗೆ ಹಲವು ವಿಮರ್ಶಕರು ತಕರಾರೆತ್ತಿರುವುದು ಅಚ್ಚರಿ ಮೂಡಿಸುತ್ತದೆ. ಖ್ಯಾತ ಬರಹಗಾರ ಮತ್ತು ಚಿಂತಕ ಪ್ರೊ.ಬಿ.ವಿ ವೀರಭದ್ರಪ್ಪನವರು ತಮ್ಮ 'ವಾಣಿಜ್ಯ ವಿದ್ಯೆ ಸಂಗಮಿಸಿದ ದಾವಣಗೆರೆ' ಎಂಬ ಲೇಖನದಲ್ಲಿ ದಾವಣಗೆರೆಯ ಜನರ ಆಡುಭಾಷೆಯ ಬಗ್ಗೆ ಹೀಗೆ ದಾಖಲಿಸುತ್ತಾರೆ: "ಮಿಂಡ್ರಿ, ಸೂಳೆಮಗ, ತಾಯಿಹಡಕ ಎಂಬ ಪದಗಳ ಬಳಕೆಯನ್ನು ಹೊರಗಿನವರು ಕೇಳಿ ಗಾಬರಿಯಾಗಬಹುದು. ಆದರೆ ಇವು ಇಲ್ಲಿಯ ವರ್ತಕರು (ಜನ) ತಮ್ಮ ಆತ್ಮೀಯರನ್ನು ಸಲುಗೆಯಿಂದ ಸಂಬೋಧಿಸುವ ರೀತಿ."

ಅದೇ ಲೇಖನದಲ್ಲಿ ವೀರಭದ್ರಪ್ಪನವರು ತಂದೆ ಮತ್ತು ಸ್ವಾಮೀಜಿಯೊಬ್ಬರ ನಡುವೆ ನಡೆಯುವ ಸಂಭಾಷಣೆಯನ್ನೂ ಹೀಗೆ ದಾಖಲಿಸಿದ್ದಾರೆ: "ದಾರಿ ತಪ್ಪಿದ ಮಗನನ್ನು ಮಠದ ಸ್ವಾಮಿಗಳ ಹತ್ತಿರ ಎಳೆದು ತಂದು ಅಡ್ಡ ಬೀಳಿಸುತ್ತಾನೆ. 'ನೋಡಿ ಬುದ್ಧಿ, ಈ ಸೂಳೇ ಮಗ ಅಡ್ಡದಾರಿ ಹಿಡಿದಿದ್ದಾನೆ. ಸ್ವಲ್ಪ ಬುದ್ಧಿ ಹೇಳ್ರಿ ಬುದ್ಧಿ.' 'ಏನ್ಲೇ, ನಿಮ್ಮಪ್ಪ ಅಂತಾನಲ್ಲ, ನಿಮ್ಮವ್ವ ಅಂತಾಳಲ್ಲ, ಅವ್ರ ಹೊಟ್ಟೆಗೆ ನೀನೆಂತ ಸೂಳೆಮಗ ಹುಟ್ಟಿದಲ್ಲೇ' ಅಂತ ಸ್ವಾಮಿ ಕೇಳುತ್ತಾರೆ."

'ಮುಸ್ಸಂಜೆ ಕಥಾ ಪ್ರಸಂಗ'ದಲ್ಲಿರುವ ಪಿ. ಲಂಕೇಶರ ಕಾಲ್ಪನಿಕ ಕಂಬಳ್ಳಿ ಎಂಬ ಹಳ್ಳಿಯೂ ಇರುವುದು ದಾವಣಗೆರೆಯ ಹತ್ತಿರವೇ. ಆದ್ದರಿಂದ ಈ ಚಿತ್ರದಲ್ಲಿನ ಜನರೂ ಅಂತಹ ಬಯ್ಗುಳ ಪದಗಳನ್ನು ಸಲೀಸಾಗಿ ಉಪಯೋಗಿಸುತ್ತಾರೆ. ಆದರೆ ಇವತ್ತು ಎಲ್ಲ ರೀತಿಗಳಲ್ಲಿ ಪುರೋಹಿತಶಾಹಿಗಳ 'ಶುದ್ಧತೆ'ಯನ್ನು ಅನುಸರಿಸಲು ಮುಂದಾಗಿರುವ ಜನ ಇದರ ಬಗ್ಗೆ ತಕರಾರೆತ್ತಿ ಈ ಭಾಷೆಯಲ್ಲಿ ಅಡಗಿರುವ ಶೂದ್ರ ಸಂಸ್ಕೃತಿಯನ್ನು ಟೀಕಿಸುತ್ತಿದ್ದಾರೆ.

ಇನ್ನು ಚಿತ್ರದಲ್ಲಿನ ಚುಂಬನದ ದೃಶ್ಯಗಳ ಬಗ್ಗೆಯೂ ಹಲವರು ತಕರಾರೆತ್ತಿದ್ದಾರೆ. ಇವತ್ತು ಕಮರ್ಷಿಯಲ್ ಚಿತ್ರಗಳಲ್ಲಿ ಮಹಿಳೆಯರ ಅಂಗಾಂಗಗಳನ್ನು ವಿಕೃತವಾಗಿ ತೋರಿಸುತ್ತಾರಲ್ಲ, ಅದಕ್ಕಿಂತಲೂ 'ಅವ್ವ'ದಲ್ಲಿನ ದೃಶ್ಯಗಳು ಸೃಜನಾತ್ಮಕವಾಗಿವೆ ಎಂಬುದು ಅವರ ಅರಿವಿಗೆ ಬರಲಿಲ್ಲ ಏಕೆ?



ಇಷ್ಟೆಲ್ಲ ಹೇಳಿದ ಮೇಲೆ 'ಅವ್ವ' ಒಂದು ಅದ್ಭುತ ಸಿನಿಮಾ ಎಂದು ಹೇಳುತ್ತಿಲ್ಲ. ಚಿತ್ರಕತೆ ಇನ್ನಷ್ಟು ಬಿಗಿಯಾಗಿದ್ದರೆ ಅದರ ಓಘ ಇನ್ನೂ ಚೆನ್ನಾಗಿರುತ್ತಿತ್ತು. ಕಾದಂಬರಿಯ ಎಲ್ಲವನ್ನೂ ಸಿನಿಮಾಕ್ಕೆ ತರಲು ಸಾಧ್ಯವಿಲ್ಲ, ಆದರೆ ಜಾತಿ ರಾಜಕಾರಣವನ್ನು ಮುಖ್ಯ ವಿಷಯವನ್ನಾಗಿಸಿಕೊಂಡು ಮತ್ತು ರಂಗವ್ವಳ ಬದುಕನ್ನು ಕೇಂದ್ರವಾಗಿರಿಸಿಕೊಂಡಿದ್ದರೆ ಚಿತ್ರಕ್ಕೆ ಇನ್ನೂ ಹೆಚ್ಚು ಅರ್ಥ ಬರುತ್ತಿತ್ತು.

ಅದಲ್ಲಿ ಏನೇ ಇರಲಿ, ಚಿತ್ರದಿಂದ ಚಿತ್ರಕ್ಕೆ ಹೊಸತನ ತೋರಿಸುತ್ತಾ ಬೆಳೆಯುತ್ತಿರುವ ಕವಿತಾ ಲಂಕೇಶ್ ತಮ್ಮ ಮುಂದಿನ ಚಿತ್ರ ಇದಕ್ಕಿಂತಲೂ ಸೊಗಸಾಗಿರುತ್ತದೆ ಎಂಬ ಭರವಸೆಯನ್ನಂತೂ 'ಅವ್ವ'ದಲ್ಲಿ ನೀಡಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44